# "ಮರಳಿ ಮಣ್ಣಿಗೆ" ಕಾದಂಬರಿಯಲ್ಲಿ ವ್ಯಕ್ತವಾಗುವ ಸಾಮಾಜಿಕ ಕಳಕಳಿ

ಕನ್ನಡ ಸಾಹಿತ್ಯದಲ್ಲಿ ಎಂ.ಫಿಲ್. ಪದವಿಗಾಗಿ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸುವ ನಿಬಂಧ

ಡಾ| ಹಾ.ಮಾ.ನ. ಸಂಶೋಧನ ಕೇಂದ್ರ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ, ದ.ಕ.

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಹೊಸಪೇಟೆ, ಬಳ್ಳಾರಿ ಜಿಲ್ಲೆ

# "ಮರಳಿ ಮಣ್ಣಿಗೆ" ಕಾದಂಬರಿಯಲ್ಲಿ ವ್ಯಕ್ತವಾಗುವ ಸಾಮಾಜಿಕ ಕಳಕಳಿ

ಕನ್ನಡ ಸಾಹಿತ್ಯದಲ್ಲಿ **ಎಂ.ಫಿಲ್. ಪದವಿಗಾಗಿ**
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸುವ ನಿಬಂಧ.


ನಿಬಂಧನಕಾರರು:

**ಬಸ್ತ್ಯಾಮ್ ಪಾಯ್ಸ್**
ಸುದೆಮಜಲು ಮನೆ
ಸುಲ್ಕೇರಿ ಅಂಚೆ 574 109
ಬೆಳ್ತಂಗಡಿ ತಾಲೂಕು ದ.ಕ.





ಮಾರ್ಗದರ್ಶಕರು.

**ಡಾ। ಮಹಾಬಲ ಭಟ್**
ಪ್ರಾಧ್ಯಾಪಕರು ಸಂಸ್ಕೃತ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು
ಉಜಿರೆ ದ.ಕ.





**ಡಾ। ಹಾ.ಮಾ.ನ. ಸಂಶೋಧನ ಕೇಂದ್ರ**
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ ದ.ಕ.
ಕನ್ನಡ ವಿಶ್ವವಿದ್ಯಾನಿಲಯ ಹಂಪಿ
ಹೊಸಪೇಟೆ, ಬಳ್ಳಾರಿ ಜಿಲ್ಲೆ.

## ದೃಢೀಕರಣ

**"ಮರಳಿ ಮಣ್ಣಿಗೆ" ಕಾದಂಬರಿಯಲ್ಲಿ ಸಾಮಾಜಿಕ ಕಳಕಳಿ**

ಇದು ನಾನು ಕನ್ನಡ ವಿಶ್ವವಿದ್ಯಾನಿಲಯ ಹಂಪಿ ಇದಕ್ಕೆ ಸಂಯೋಜಿತವಾದ ಉಜಿರೆ **ಡಾ। ಹಾ.ಮಾ.ನ.** ಸಂಶೋಧನ ಕೇಂದ್ರದಲ್ಲಿ **ಡಾ। ಮಹಾಬಲ ಭಟ್**ರವರ ಮಾರ್ಗದರ್ಶನದಲ್ಲಿ ಎಂ. ಫಿಲ್. ಪದವಿಗಾಗಿ ಸಿದ್ಧಪಡಿಸಿದ ನಿಬಂಧವಾಗಿರುತ್ತದೆ.

ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಯಾವುದೇ ಉದ್ದೇಶಕ್ಕೆ ಬಳಕೆಯಾಗಿಲ್ಲ.

ಬೆಳ್ತಂಗಡಿ
30–8–2008

**(ಬಸ್ತ್ಯಾಮ್ ಪಾಯ್ಸ್)**

## ಪ್ರಮಾಣ ಪತ್ರ

**"ಮರಳಿ ಮಣ್ಣಿಗೆ"** ಕಾದಂಬರಿಯಲ್ಲಿ ಸಾಮಾಜಿಕ ಕಳಕಳಿ ಇದು **ಶ್ರೀ ಬಸ್ತ್ಯಾಮ್ ಪಾಯ್ಸ್** ಇವರು **ಎಂ.ಫಿಲ್. ಪದವಿ**ಗಾಗಿ ನಡೆಸಿದ ಅಧ್ಯಯನ ಮತ್ತು ವಿಶ್ಲೇಷಣೆಯಾಧಾರಿತ ನಿಬಂಧವಾಗಿದ್ದು ಇದನ್ನು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾನಿಲಯ ಹಂಪಿ ಇದಕ್ಕೆ ಸಂಯೋಜಿತವಾದ ಉಜಿರೆಯ ಡಾ। ಹಾ.ಮಾ.ನ. ಸಂಶೋಧನ ಕೇಂದ್ರದಲ್ಲಿ ಸಿದ್ಧಪಡಿಸಲಾಗಿದೆ.

ಈ ನಿಬಂಧದ ಯಾವುದೇ ಭಾಗವು ಇನ್ನಿತರ ಯಾವದೇ ಉದ್ದೇಶಗಳಿಗೆ ಬಳಕೆಯಾಗಿಲ್ಲ ಮತ್ತು ಪ್ರಕಟವಾಗಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಉಜಿರೆ
30–8–2008

Mahabala Bhatta
**(ಡಾ। ಮಹಾಬಲ ಭಟ್)**

# ಪರಿವಿಡಿ

# ಅಧ್ಯಾಯ ೧.

## ಪ್ರಸ್ತಾವನೆ

## ಅಧ್ಯಯನದ ಉದ್ಧೇಶ ಮತ್ತು ವ್ಯಾಪ್ತಿ

## ಅಧ್ಯಯನ ವಿಧಾನ

# “ಮರಳಿ ಮಣ್ಣಿಗೆ” ಕಾದಂಬರಿಯಲ್ಲಿ ವ್ಯಕ್ತವಾಗುವ ಸಾಮಾಜಿಕ ಕಳಕಳಿ

## ಪ್ರಸ್ತಾವನೆ:

ಸಾರಸ್ವತ ಲೋಕದ ಸಾಧಕರ ಜೀವನವು ಅನುಕರಣಿಯೋಗ್ಯ ಮತ್ತು ಮಾರ್ಗದರ್ಶಕವಾಗಿರುತ್ತದೆ. ಅವರ ಬದುಕಿನ ಹಿನ್ನೆಲೆ ಭವಿಷ್ಯದ ಜನಾಂಗಕ್ಕೆ ದಾರಿದೀಪ, ಸಾಹಿತ್ಯಪ್ರಿಯರಿಗೆ ಆದರ್ಶ. ಹೊಸಗನ್ನಡ ಅರುಣೋದಯದ ಮತ್ತು ವಿಶೇಷವಾಗಿ ನವೋದಯ ಕಾಲದ ಗಮನಾರ್ಹ ಸಾಹಿತಿ ಡಾ। ಕೆ. ಶಿವರಾಮ ಕಾರಂತರ ಬದುಕಿನ ವಿವಿಧ ಮುಖಗಳು ಸಾಹಿತ್ಯ ವಿದ್ಯಾರ್ಥಿಗಳಿಗೆ ಪರಾಮರ್ಶನ ಯೋಗ್ಯವಾಗಿದೆ. ೧೯೦೨ರಲ್ಲಿ ಜನಿಸಿ ೧೯೯೭ರಲ್ಲಿ ಕೊನೆಯುಸಿರೆಳೆದ ಡಾ। ಕೆ. ಶಿವರಾಮ ಕಾರಂತರು ನಾಟಕಕಾರರಾಗಿ, ಕಾದಂಬರಿಕಾರರಾಗಿ, ಯಕ್ಷಗಾನ ಕಲಾವಿದರಾಗಿ, ಮೆರೆದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಹಿತ್ಯದ ಕಂಪನ್ನು ಹರಡಿದವರು. ಇವರ ಬದುಕು ಸರಳತೆ, ಮಾನವ ಪ್ರೇಮ, ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ, ಅಧ್ಯಯನಶೀಲತೆ ಕಿರಿಯರಿಗೆ ಮಾದರಿ.

ಡಾ। ಕೆ. ಶಿವರಾಮ ಕಾರಂತರು ಹಲವಾರು ಕಾದಂಬರಿಗಳನ್ನು ರಚಿಸಿದ್ದು ಅದರಲ್ಲಿ “ಮರಳಿ ಮಣ್ಣಿಗೆ” ಕಾದಂಬರಿಯೂ ಪ್ರಮುಖವಾದದ್ದು. “ಮರಳಿ ಮಣ್ಣಿಗೆ” ಕಾದಂಬರಿಯಲ್ಲಿ ಬರುವ ಸಾಮಾಜಿಕ ಕಳಕಳಿಯ ಬಗ್ಗೆ ಅಧ್ಯಯನ ಮಾಡಲು ಪ್ರಯತ್ನಿಸಲಾಗುವುದು.

## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

ಡಾ। ಕೆ. ಶಿವರಾಮ ಕಾರಂತರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಆಧುನಿಕ ನವೋದಯ ಸಾಹಿತಿಗಳಲ್ಲಿ ಪ್ರಮುಖರು. ಅವರ ಕಾರ್ಯಕ್ಷೇತ್ರ ಎಂಥದ್ದಾಗಿತ್ತು? ಅವರ ಸಮಕಾಲೀನ ಸವಾಲುಗಳು ಯಾವುವು? ಅವರ ವೈಯಕ್ತಿಕ ಜೀವನ, ಸಾಹಿತ್ಯ ಕಾರ್ಯ, ಅವರ ಸಾಧನೆ ಹಾಗೂ ಮಿತಿಗಳ ಸ್ವರೂಪ ಎಂಥದ್ದು? ಎಂಬುದನ್ನು ಅವರ “ಮರಳಿ ಮಣ್ಣಿಗೆ” ಎಂಬ ಕಾದಂಬರಿಯ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲು ಉದ್ದೇಶಿಸಲಾಗಿದೆ.

“ಕಡಲ ತಡಿಯ ಭಾರ್ಗವ” ಎಂದು ಪ್ರಸಿದ್ಧಿ ಪಡೆದ ಡಾ। ಕೆ. ಶಿವರಾಮ ಕಾರಂತರು ಅವಿಭಜಿತ ದಕ್ಷಿಣ ಕನ್ನಡದಲ್ಲಿ ಇಲ್ಲಿನ ಸಂಸ್ಕೃತಿ, ಸಾಹಿತ್ಯದಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಆ ಮೂಲಕ ಸಾಂಸ್ಕೃತಿಕ, ಸಾಹಿತ್ಯ ಚಟುವಟಿಕೆಗೆ ಭದ್ರ ಬುನಾದಿ ಹಾಕಿ ಕೊಟ್ಟಿದ್ದಾರೆ. ೨೦ನೇ ಶತಮಾನದಲ್ಲಿ ಸಾಂಸ್ಕೃತಿಕ, ಸಾಮಾಜಿಕ ಚಟುವಟಿಕೆಗಳಿಗೆ ಡಾ। ಕೆ. ಶಿವರಾಮ ಕಾರಂತರು ನೀಡಿದ ಕೊಡುಗೆಯನ್ನು ಅಧ್ಯಯನ ಮಾಡುವುದು ಈ ಪ್ರಬಂಧದ ಆಶಯ.

## ಅಧ್ಯಯನ ವಿಧಾನ

ಡಾ। ಕೆ. ಶಿವರಾಮ ಕಾರಂತರ “ಮರಳಿ ಮಣ್ಣಿಗೆ” ಕಾದಂಬರಿಯಲ್ಲಿ ವ್ಯಕ್ತವಾಗುವ ಸಾಮಾಜಿಕ ಕಳಕಳಿಯನ್ನು ವಿವರಣಾತ್ಮಕವಾಗಿ ಹಾಗೂ ವಿಮರ್ಶಾತ್ಮಕವಾಗಿ ಮಾಡಲಾಗಿದೆ.

# ಅಧ್ಯಾಯ ೨.

## ಡಾ। ಕೆ. ಶಿವರಾಮ ಕಾರಂತರ

## ಜೀವನ ಮತ್ತು ವ್ಯಕ್ತಿತ್ವ

# ಡಾ। ಕೆ. ಶಿವರಾಮ ಕಾರಂತರ ಜೀವನ ಮತ್ತು ವ್ಯಕ್ತಿತ್ವ

ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯ ಕೋಟ ಎಂಬ ಊರಿನಲ್ಲಿ ೧೯೦೨ರ ಅಕ್ಟೋಬರ್ ೧೦ರಂದು ಡಾ। ಕೆ. ಶಿವರಾಮ ಕಾರಂತರ ಜನನ. ಶಿವರಾಮ ಕಾರಂತರ ತಂದೆ ಶೇಷ ಕಾರಂತರು. ತಾಯಿ ಲಕ್ಷ್ಮೀ. ಅಜ್ಜಿ ಮಹಾಲಕ್ಷ್ಮೀ. ಇವರು ಬಹಳ ಸನಾತನಿಗಳು. ತಾಳ್ಮೆಯ ಮೂರ್ತಿಗಳು. ಧರ್ಮಶ್ರದ್ಧೆ ಇದ್ದವರು.

ಶಿವರಾಮ ಕಾರಂತರು ೨೦ನೇ ಶತಮಾನದ ಇತಿಹಾಸವನ್ನು ತಮ್ಮ ಹರಿತವಾದ ದೃಷ್ಟಿಯಿಂದ ಗಮನಿಸುತ್ತಾ ಬಂದವರು. ಡಿಸೆಂಬರ್ ೧೦. ೧೯೯೭ರಂದು ಅವರ ಚಿತೆಗೆ ಉರಿ ಹತ್ತಿಸಿದ ಸಂಕಟಕ್ಕೆ ಸಾಕ್ಷಿಯಾದವರೊಬ್ಬರು.

[1]"ಎಲ್ಲರ ದೇಹವನ್ನು ಸುಡುತ್ತಾರೆ, ಹೌದು ಆದರೆ ಇದು ಕಾರಂತರದು ಇದಕ್ಕೊಂದು ವಿನಾಯಿತಿ ಇಲ್ಲವೇ? ಅವರನ್ನೂ ಎಲ್ಲರಂತೆ ಸುಟ್ಟು ಹಾಕುವುದೇ? ಆ ಪ್ರಚಂಡ ಮಿದುಳು, ಆ ಅಪೂರ್ವ ಹೃದಯ, ಆ ಅಮೂಲ್ಯ ಮನಸ್ಸು ಇವನ್ನೆಲ್ಲ ಇಟ್ಟುಕೊಂಡಿದ್ದ ಆ ದೇಹವನ್ನು ನಾಶಪಡಿಸುವುದೇ."[1]

ಇದು ಕಾರಂತರು ಜನಮಾನಸದಲ್ಲಿ ಅವಿನಾಶರಾದ ಕ್ರಮವನ್ನು ನಿರೂಪಿಸುತ್ತದೆ. ಜೀವನದ ಪ್ರತಿ ಕ್ಷಣವನ್ನೂ ಉತ್ಪಾದಕವಾಗಿ ಪರಿವರ್ತಿಸಿಕೊಂಡವರಿಗಷ್ಟೇ ಲಭ್ಯವಾಗಬಹುದಾದ ವಿಶೇಷವಾದ ಮರ್ಯಾದೆ ಇದು.

ಕಾರಂತರ ಬದುಕನ್ನು ಗಮನಿಸಿದಂತೆಲ್ಲಾ ಕೌತುಕ, ಬೆರಗು, ಕುತೂಹಲ, ಗೌರವ, ಅಭಿಮಾನಗಳೆಲ್ಲಾ ತಂತಾನೆ ಚಿಗುರೊಡೆಯುತ್ತದೆ.

[2]"ಸಮೀಪದ ನೋಟಕ್ಕೆ ತಳಮಳಭರಿತವಾಗಿಯೇ ಇರುವ ಎಂದೂ ಜಡವಾಗದ, ಎಂದೂ ಸ್ತಬ್ಧವಾಗದ, ಆದರೆ ತುಸು ಎತ್ತರದಲ್ಲಿ ನಿಂತು ಅದರ ವಿಶಾಲ ನೋಟವನ್ನು ವೀಕ್ಷಿಸಿದಾಗ ಪರಮ ಸಂತುಷ್ಟ ಜೀವನ ಅವರದ್ದು."[2] ಎನಿಸುವ ಕೋಟದ ಕಡಲು ಕಾರಂತರ ಇಡೀಯ ಬದುಕಿಗೊಡ್ಡಿದ ಪ್ರತಿಮೆಯೂ ಆಗುತ್ತದೆ. ನಿಸರ್ಗದತ್ತವಾದ ಪ್ರತಿಭೆಯನ್ನು ಅನುಭವಗಳೊಂದಿಗೆ ಬೆರೆಸಿ ಅಭಿವ್ಯಕ್ತಗೊಳಿಸುವ ಕಾರಂತರ ಸಾಧನೆ ಇದಕ್ಕೆ ಉದಾಹರಣೆ.

[3]"ಹಳ್ಳಿಯ ಮುಗ್ಧವಾದ, ಮುಕ್ತವಾದ ಹೊರ ವಾತಾವರಣ ತುಂಬು ಕುಟುಂಬದ, ಸಾಂಪ್ರದಾಯಿಕ ಮನೆತನದ ಒಳಜಗತ್ತುಗಳೆರಡೂ ಕಾರಂತರ ಕಲಾದೃಷ್ಟಿಯನ್ನು, ಸಮಷ್ಟಿ ಪ್ರಜ್ಞೆಯನ್ನುತಿದ್ದಿದುವು."[3] ಎಂಬಲ್ಲಿ ಶಿವರಾಮ ಕಾರಂತರು ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದಲ್ಲಿ, ಮುಗ್ಧವಾದ ಹಳ್ಳಿ ಪ್ರದೇಶದಲ್ಲಿ ಜನಿಸಿದ್ದು ಅವರ ಕಾದಂಬರಿಗಳಲ್ಲಿ, ಬರವಣಿಗೆಯಲ್ಲಿಯೂ ಇದರ ಪ್ರಭಾವವಾಗಿರುವುದನ್ನು ಗಮನಿಸಬಹುದು.

ಆ ಕಾಲದಲ್ಲಿ ನಡೆಯುತ್ತಿದ್ದ ಊರ ನರೆಯೂರುಗಳ ಜಾತ್ರೆ, ಬಲಿ, ರಥೋತ್ಸವಗಳು ಕಾರಂತರ ಕುತೂಹಲಕ್ಕೆ ನೀರುಣಿಸುತ್ತಿದ್ದುವು. ದೇವಸ್ಥಾನಕ್ಕಾಗಿ ರಥವನ್ನು ಮಾಡುತ್ತಿದ್ದರೆ, ಬಡಗಿಗಳು ಮಾಡುವ ಚಿತ್ರ, ಕೆತ್ತನೆ, ಕಡಚಲು ಕೆಲಸಗಳನ್ನು ನೋಡಲು ಅವರಿಗೆ ಅತ್ಯುತ್ಸಾಹ.

ಕಾರಂತರು ಕುಂದಾಪುರದಲ್ಲಿ ಮಾಧ್ಯಮಿಕ ವಿಧ್ಯಾಭ್ಯಾಸ ಪಡೆಯುತ್ತಿದ್ದ ಕಾಲದಲ್ಲಿ ಕಂಪೆನಿ ನಾಟಕಗಳು, ಹಾಡುಗಳ ಮಟ್ಟುಗಳು ಅವರಿಗೆ ಪ್ರಿಯವೆನಿಸತೊಡಗಿದವು. ಎ.ವಿ. ವರದಾಚಾರ್ಯರ ನಾಟಕ ಕಂಪೆನಿ, ಗುಬ್ಬಿ ಕಂಪೆನಿ, ಶಿರಹಟ್ಟಿ ವೆಂಕೋಬರಾಯರ ಕಂಪೆನಿ ಮುಂತಾದ ಆ ಕಾಲದ ಪ್ರಖ್ಯಾತ ನಾಟಕ ಮಂಡಳಿಗಳ ಮೂಲಕ ಈ ಕಲಾ ಪ್ರಕಾರದ ವಿಭಿನ್ನ ಸಾಧ್ಯತೆಗಳನ್ನು ಗುರುತುಮಾಡಿಕೊಳ್ಳತೊಡಗಿದರು.

ಕಾರಂತರು [4]"ನನ್ನ ಬಾಳ್ವೆ ನನ್ನ ಅಧಿಕಾರದ ವಸ್ತು ಎಂದೇ ನಂಬಿ ಬದುಕಿದವರು. ಅದರೊಂದಿಗೆ ನನ್ನ ಬಾಳು ಅನ್ಯರ ಬಾಳಿನೊಡನೆಯೂ ಬೆರೆತಿದೆ. ನಾನು ಸಮಾಜ ಜೀವನದ ಅಂಶವಲ್ಲವೇ? ಅದರ ಸುಖ ದುಃಖ ನನ್ನವಲ್ಲವೇ? ನನ್ನ ಯಾವತ್ತೂ ಜೀವಿತ ಜೀವಿತ ಸಮಾಜದ ಪಾಲಿನದಲ್ಲವೇ?"[4] ಎಂದು ತನ್ನನ್ನು ಪ್ರಶ್ನಿಸಿಕೊಳ್ಳುತ್ತಲೇ ಬೆಳೆದರು. ಈ ಸಮಾಜದ ಋಣವನ್ನು ಸಾಧ್ಯವಾದಷ್ಟು ಮಟ್ಟಿಗೆ ತೀರಿಸಬೇಕೆನ್ನುವ ಅರಿವು ಅವರಲ್ಲಿ ಸದಾ ಎಚ್ಚರವಾಗಿಯೇ ಇರುತ್ತಿತ್ತು.

ಎಲ್ಲರಿಗೂ ತಿಳಿದಿರುವಂತೆ ಕಾರಂತರ ದೃಷ್ಟಿಯು ಹಲವು ನೇರಗಳಲ್ಲಿ ಹರಿಯುತ್ತಿತ್ತು. ಕಾರಂತರು ಹುಟ್ಟಿ ಬೆಳೆದ ಬ್ರಾಹ್ಮಣ ಸಮಾಜದಲ್ಲಿ ರೂಢಿಯಲ್ಲಿದ್ದ ನಂಬಿಕೆಗಳು, ಆದರ್ಶಗಳು, ನಡವಳಿಕೆಗಳ ತಪ್ಪು ಒಪ್ಪುಗಳು ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದ್ದವು.

[5]"ಕಾರಂತರ ಬಾಲ್ಯದ ನಂಬಿಕೆಗಳು, ನಡವಳಿಕೆಗಳು ಮನೆಯ ಆವರಣದಿಂದ, ಹಿರಿಯರ ನಡವಳಿಕೆಯಿಂದ ರೂಪುಗೊಂಡಿದ್ದರೂ, ಕುಂದಾಪುರದಲ್ಲಿ ನಡೆಯಿಸಿದ್ದ ಪ್ರೌಢಶಾಲಾ ಶಿಕ್ಷಣದ (೧೯೧೨–೨೦) ದೆಸೆಯಿಂದ ಅಲ್ಲಿಯ ವಿಭಿನ್ನ ಜಾತಿಯ ಗೆಳೆಯರ ದೆಸೆಯಿಂದ ಮನೆಯ ಹಿರಿಯರ ಕಣ್ಣಿಂದ ದೂರವಾಗಿ ವಾಸಿಸುತ್ತಿದ್ದುದರಿಂದ ಕೋಟ ಮಹಾ ಜಗತ್ತಿನ ಮಾನಸಿಕ ಆವರಣ, ಮಡಿ, ಮೈಲಿಗಳ ಕಲ್ಪನೆ, ಸ್ಪ್ರಶ್ಯಾಸ್ಪ್ರಶ್ಯತೆಗಳ ವಿಚಾರದಲ್ಲಿ ಮನಸ್ಸು ಬದಲಾಗುತ್ತಾ ಬಂತು."[5]

೧೯೨೦ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಗೊಂಡ ಕಾರಂತರು ಮುಂದೆ ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದಾಗ ಗಾಂಧೀಜಿಯವರ ಅಸಹಕಾರ ಚಳುವಳಿಯೂ ಪ್ರಸಿದ್ಧಿಯನ್ನು ಪಡೆದಿತ್ತು.

ಮಹಾತ್ಮಾ ಗಾಂಧೀಜಿಯವರ ಸ್ವಾತಂತ್ರ್ಯ ಆಂದೋಲನದ ಕರೆಗೆ ಓಗೊಟ್ಟು ಕಾಲೇಜು ವಿದ್ಯಾಭ್ಯಾಸವನ್ನು ಅರ್ಧದಲ್ಲಿಯೇ ತ್ಯಜಿಸಿ, ಚಳುವಳಿಯಲ್ಲಿ ಪಾಲ್ಗೊಂಡಾಗ ಕಾರಂತರ ವಯಸ್ಸು ಕೇವಲ ೧೯ ವರ್ಷ.

[6]"ಕಾರಂತರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದು ಪತ್ರಿಕಾ ವ್ಯವಸಾಯದ ಮುಖಾಂತರ. ಅಂದು ಅವರು ಒಂದು ಪತ್ರಿಕೆಯನ್ನು ಪ್ರಾರಂಭಿಸಿರದಿದ್ದರೆ ಈಗ ಬೆಳೆದಂತೆ ಅವರು ಬೆಳೆಯುತ್ತಿದ್ದರೋ ಹೇಳಲಾಗುವುದಿಲ್ಲ."[6] ಕಾರಂತರು **"ವಸಂತ"** ಎಂಬ ಪಾಕ್ಷಿಕ ಪತ್ರಿಕೆಯನ್ನು ೧೯೨೪ರಲ್ಲಿ ಪ್ರಾರಂಭಿಸಿದರು. ಈ ಪತ್ರಿಕೆಯ ಮುಖಾಂತರ ಮನೋರಂಜನೆಗಿಂತ ಹೆಚ್ಚಾಗಿ ಮನೋವಿಕಾಸವೇ ಪತ್ರಿಕೆಯ ಉದ್ದೇಶವಾಗಿತ್ತು. [7]"ಅಸ್ಪ್ರಶ್ಯೋದ್ಧಾರ, ಕೈನೂಲಿನ ಬಟ್ಟೆ, ಪಾನನಿರೋಧ, ಬ್ರಹ್ಮಚರ್ಯ, ಅಹಿಂಸೆ ಮುಂತಾದ ಗಾಂಧೀಜಿಯವರ ಆದರ್ಶಗಳನ್ನು "ವಸಂತ" ಪತ್ರಿಕೆ ಪ್ರತಿಪಾದಿಸುತ್ತಿತ್ತು."[7]

ಪತ್ರಿಕೋದ್ಯಮವು ಇನ್ನೊಂದು ದೃಷ್ಟಿಯಿಂದಲೂ ಅವರಿಗೆ ಉಪಕಾರವನ್ನು ಮಾಡಿತು. ವಸಂತ ಪತ್ರಿಕೆಯ ಖಾಲಿ ಜಾಗಗಳನ್ನು ತುಂಬಿಸುವುದಕ್ಕಾಗಿ ಕಾರ್ಟೂನುಗಳನ್ನು, ವ್ಯಂಗ್ಯ ಚಿತ್ರಗಳನ್ನೂ ಸ್ವತಃ ಅವರೇ ಬರೆಯತೊಡಗಿದರು. ಇದರಿಂದಾಗಿ ಆ ನಿಟ್ಟಿನಲ್ಲೂ ಅವರ ಕೈಯು ಪಳಗತೊಡಗಿತು. ಪತ್ರಿಕೆಯ ಚಂದಾದಾರರಾಗಿ ಅಕ್ಷರಶಃ ಬೇಟೆಯಾಡುತ್ತಾ ಮೈಸೂರು, ಮದರಾಸು, ಮುಂಬೈ, ಉತ್ತರ ಕರ್ನಾಟಕದ ಪ್ರಾಂತಗಳನ್ನು ಜಾಲಾಡಬೇಕಾದ ಪ್ರಸಂಗಗಳೂ ಕಾರಂತರಿಗೆ ಎದುರಾದವು. ಆ ದಿನಗಳ ನೆನಪನ್ನು ಕೆದಕುತ್ತಾ ಅವರು, [8]"ಜನರ ಮನೆಗಳಿಗೆ ಹೋದರೆ ಭಿಕ್ಷುಕ ಬಂದಂತೆ ನೋಡುತ್ತಿದ್ದರು."[8] ಎಂದು ಕಹಿಯಾಗಿ ಹೇಳಿದ್ದೂ ಇದೆ. ಹಾಗೂ ಹೀಗೂ ಕಂಟಕೊಂಡು ನಡೆದ ಈ ಪತ್ರಿಕೆ ಕೊಳ್ಳುವವರಿಲ್ಲದೆ ನಿಂತು ಹೋದುದೂ ವ್ಯವಸ್ಥೆಯ ವಿಪರ್ಯಾಸವೇ ಆಗಿದೆ.

ತಮ್ಮ ಪತ್ರಿಕೆ ನಿಂತು ಹೋದ ಮೇಲೆ ಕಾರಂತರು ಮಂಗಳೂರಿನ **"ಸ್ವದೇಶಾಭಿಮಾನಿ"** ಪತ್ರಿಕೆಯಲ್ಲಿ ನಿಜದ ಮತ್ತು ಕಾಲ್ಪನಿಕ ವ್ಯಕ್ತಿಚಿತ್ರಗಳನ್ನು ಬರೆದರು. [9]"ಕಾರಂತರು ಬದುಕಿನುದ್ದಕ್ಕೂ ಆತ್ಮಸಾಕ್ಷಿಗೊಂದಕ್ಕೇ ಬದ್ಧರಾಗಿ ಬದುಕಿದವರು. ಸ್ವಾಭಿಮುಖವಾದ ವ್ಯಕ್ತಿತ್ವವನ್ನು ಬಳೆಸಿಕೊಂಡವರು."[9] ಆತ್ಮಗೌರವ, ಸ್ವಂತಿಕೆ, ಸ್ವಾಭಿಮಾನಗಳನ್ನು ಇನ್ನಿಲ್ಲದಂತೆ ಪೋಷಿಸಿಕೊಂಡವರು. ಆ ಬೆಳಕಿನಲ್ಲಿಯೇ ತಮ್ಮ ಬಾಳನ್ನು ರೂಪಿಸಿಕೊಂಡವರು. ಗಾಂಧಿವಾದದಂತಹ ಸಿದ್ಧಾಂತಗಳನ್ನು ಒಪ್ಪಿಕೊಂಡ ಅವರು, ಒಪ್ಪಿಕೊಂಡ ಕ್ರಮದಲ್ಲಿ ಕೂಡ ಅನುಕರಣಶೀಲತೆಯ ಬದಲಿಗೆ ಹರಿತವಾದ ಚಿಂತನೆಗಳ ಹದವಿದೆ, ವೈಚಾರಿಕ ಶಿಸ್ತಿದೆ. ಹೀಗಾಗಿ ನೈಸರ್ಗಿಕ-ಅನೈಸರ್ಗಿಕ ಭೇದಗಳನ್ನು ಸಂದರ್ಭ ಸಂವಾದಿಯಾಗಿಯೇ ಗುರುತಿಸುವುದು, ಯುಕ್ತವೆನಿಸಿದವುಗಳನ್ನು ಸ್ವೀಕರಿಸುವುದು ಅವರಿಗೆ ಸುಲಭವಾಯಿತು.

[10]"ಮಡಿ, ಮಡಿ ಎಂದು ಅಡಿಗಡಿಗಳಿಗೆ ಜಪಿಸುತ್ತಿದ್ದ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದರೂ ೬-೫-೧೯೩೬ರಷ್ಟು ಹಿಂದೆಯೇ ಸಂಪ್ರದಾಯಬದ್ಧ ಸಮಾಜಕ್ಕೆ ಚಾಟಿಯೇಟನ್ನು ನೀಡುವ ತೆರದಲ್ಲಿ ಅಂತರ್ಜಾತೀಯ ವಿವಾಹ ಬಂಭನಕ್ಕೊಳಗಾಗಿ, ಲೀಲಾ ಎಂಬಾಕೆಯನ್ನು ಬಾಳಸಂಗಾತಿಯನ್ನಾಗಿ ಮಾಡಿಕೊಂಡು ೫೦ ವರ್ಷಗಳಷ್ಟು ದೀರ್ಘಕಾಲೀನ ದಾಂಪತ್ಯ ಜೀವನವನ್ನು ಸಾಗಿಸಿದರು".[10]

ಮೂವತ್ತರ ದಶಕದಲ್ಲಿ ಕರ್ನಾಟಕದಾತ್ಯಂತ ಮನೆಮಾತಾಗಿದ್ದ ಕಾರಂತರ ಹಲವಾರು ಸಾಧನೆಗಳಲ್ಲಿ ಪುತ್ತೂರಿನಲ್ಲಿ ಅವರು ನಡೆಸುತ್ತಿದ್ದ ದಸರಾ ಮಹೋತ್ಸವಗಳು ಅವರಿಗೆ ವಿಶೇಷ ಪ್ರಸಿದ್ಧಿ ತಂದುಕೊಟ್ಟವು.

[11]"ಪ್ರಾದೇಶಿಕವಾಗಿ ಹರಿದು ಹಂಚಿಹೋಗಿದ್ದ ಕನ್ನಡನಾಡನ್ನು ಒಂದುಗೂಡಿಸಿ, ಅಖಂಡ ಕರ್ನಾಟಕದ ಕನಸನ್ನು ಕಾಣುತ್ತಿದ್ದ ಕಾರಂತರು ದಸರಾ ಉತ್ಸವದ ನೆಪದಲ್ಲಿ ಪುತ್ತೂರಿಗೆ ಅಖಿಲ ಕರ್ನಾಟಕದ ಜನರನ್ನು ಸೆಳೆದರು."[11]

ದಸರಾ ಉತ್ಸವಗಳಲ್ಲಿ ಬರಹ ಭಾಷಣಗಳಷ್ಟಕ್ಕೇ ತೃಪ್ತಿಗೊಳ್ಳದೆ ವಿವಿಧ ರಂಗ ಪ್ರಯೋಗಗಳ ಮೂಲಕ ರಂಗಭೂಮಿಯ ಇತಿಹಾಸಕ್ಕೂ ವಿಶೇಷ ಕೊಡುಗೆಗಳನ್ನು ನೀಡಿದರು. ದಸರಾ ಉತ್ಸವದ ೧೦ ದಿನಗಳಲ್ಲಿ ಪ್ರತಿದಿನವೂ, ಪ್ರತಿವರ್ಷವೂ ಹೊಸಹೊಸ ರಂಗಪ್ರಯೋಗಗಳನ್ನು ಮಾಡುತ್ತಾ "ಈ ವರ್ಷ ಪುತ್ತೂರಿನಲ್ಲಿ ಏನು ಹೊಸತಿದೆ ನೋಡಬೇಕು" ಎಂಬ ಕುತೂಹಲವನ್ನು ದಕ್ಷಿಣಕನ್ನಡ ಜಿಲ್ಲೆಯ ಹೊರಗಿನ ಕನ್ನಡಿಗರಲ್ಲೂ ಮೂಡಿಸಿದ ಶ್ರೇಯಸ್ಸು ಕಾರಂತರಿಗೆ ಸಲ್ಲುತ್ತದೆ.

ನಾಟಕದ ಮೂಲಕ ಜನರ ಮನಸ್ಸುಗಳನ್ನು ಮುಟ್ಟಿ ಹೆಚ್ಚಿನ ಪರಿಣಾಮವನ್ನುಂಟುಮಾಡಬಹುದಾದ್ದರಿಂದ ಸಮಾಜ ಸುಧಾರಣೆಗಾಗಿ ನಾಟಕವನ್ನು ಮಾಧ್ಯಮವಾಗಿ ಬಳಸಬೇಕೆಂಬ ಅವರ ಆಕಾಂಕ್ಷೆ ರಂಗಭೂಮಿಯ ಕಡೆ ಅವರ ಗಮನ ಸೆಳೆಯಿತು. ಅವರ ಕಾಲಕ್ಕೆ ಜನ ಅಪೇಕ್ಷಿಸುತ್ತಿದ್ದುದು ಕಣ್ಣುಕುಕ್ಕುವ ನೋಟಗಳನ್ನು ಕೃತಕ ಭಾವಾಭಿನಯಕ್ಕೆ ಅವಕಾಶವೊದಗಿಸುವ ಉದ್ದುದ್ದದ ಗಂಭೀರ ಭಾಷಣಗಳನ್ನು ಸಂಚಾಲಕರು ಹಾಗೂ ನಟನಟಿಯರು ಒದಗಿಸುತ್ತಿದ್ದುದು ಅಷ್ಟನ್ನು. ಇಂಥವರನ್ನು ಕಟ್ಟಿಕೊಂಡು ಅರ್ಥಪೂರ್ಣವಾದ ನಾಟಕಗಳನ್ನು ರಂಗಭೂಮಿಗೆ ತರುವುದು ಕಷ್ಟವೆನ್ನುವ ಅನುಭವ ಕಾರಂತರದಾಯಿತು.

ಇಂತಹ ನಾಟಕಗಳಲ್ಲಿ ಕಾರಂತರು ಕೆಲವು ಸುಧಾರಣೆಗಳನ್ನು ತಂದರು. ಸಂಗೀತಮಿಶ್ರಿತ ನಾಟಕವನ್ನು ಬದಿಗಿರಿಸಿ, ನಾಟಕ ಪೂರ್ತಿಯಾಗಿ ಗದ್ಯವನ್ನು ಆಶ್ರಯಿಸುವಂತೆ ಮಾಡಿದರು. 12"ಕನ್ನಡ ನಾಟಕ ಪ್ರಪಂಚಕ್ಕೆ ಕಾರಂತರಿಂದ ಸಂದ ವಿಶಿಷ್ಟ ಕಾಣಿಕೆ ಎಂದರೆ ಅವರು ಬರೆದು ಆಡಿತೋರಿಸಿದ ಗೀತ ನಾಟಕಗಳು."12

ಗೀತ ನಾಟಕದಲ್ಲಿ ಪದ್ಯದ ಬದಲಾಗಿ ಸಂಗೀತ ನಾಟಕಾನುಭವದ ಮಾಧ್ಯಮವಾಗುತ್ತದೆ. ಸಂಗೀತವನ್ನು ಮಾಧ್ಯಮವಾಗಿಸಿಕೊಳ್ಳುವುದರಲ್ಲಿಯ ಕಷ್ಟವೆಂದರೆ ವಸ್ತುವಿನ್ಯಾಸದ ಹಿಂದಿನ ಅಮೂರ್ತವಾದ ಭಾವವನ್ನು ಗೀತಮಾಲಿಕೆ ಸಮಗ್ರವಾಗಿ ಪ್ರತಿಧ್ವನಿಸಬೇಕಾಗುತ್ತದೆ.

ಗೀತನಾಟಕಗಳಿಗಾಗಿ ಕಾರಂತರು ವಸ್ತುವನ್ನು ಪೌರಾಣಿಕ ಸನ್ನಿವೇಶಗಳಿಂದಲೋ, ಐತಿಹ್ಯಗಳಿಂದಲೋ, ಅಥವಾ ಸುತ್ತಲಿನ ಬದುಕನ್ನು ಸಂಕೇತಿಸುವ ಸ್ವಕಲ್ಪಿತ ಸನ್ನಿವೇಶಗಳಿಂದಲೋ, ಎತ್ತಿಕೊಂಡಿದ್ದಾರೆ. 13"ಕಾರಂತರು ರಚಿಸಿ ಪ್ರದರ್ಶಿಸಿದ ಅತ್ಯಂತ ಭವ್ಯವಾದ ನೃತ್ಯ ನಾಟಕ "ಮುಕ್ತ ದ್ವಾರ" ನೃತ್ಯ ಸಂಗೀತಗಳೆರಡನ್ನೂ ಬಳಸಿಕೊಂಡ ದೃಷ್ಯಾವಳಿ ಯುಗಮಾನಗಳ ಮುನ್ನಡೆಯನ್ನು ರಂಗಸ್ಥಳದ ಮೇಲೆ ತೋರಿಸುತ್ತದೆ."13 "ಮುಕ್ತ ದ್ವಾರ" ರಂಗಸ್ಥಳದ ಮೇಲಿನ ಒಂದು ಕಲಾಸಿದ್ಧಿ. ಇಂಥ ಸಂಕೀರ್ಣವಾದ ಸೌಂದರ್ಯಾನುಭೂತಿಯನ್ನು ಒದಗಿಸಬಲ್ಲ ದೃಶ್ಯ, ನೃತ್ಯರೂಪಕ, ಕನ್ನಡದಲ್ಲಿ ಬೇರೆ ಇನ್ನೊಂದಿಲ್ಲ.

14"ಶಿವರಾಮ ಕಾರಂತರು ೧೯೫೨ರ ಮಹಾಚುನಾವಣೆಯಲ್ಲಿ ಕಿಸಾನ್ ಮಜ್ದೂರ್ ಪಕ್ಷದ ವತಿಯಿಂದ ಅಸೆಂಬ್ಲಿ ಕ್ಷೇತ್ರಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಸ್ಪರ್ಧಿಸಿದರು. ಆದರೆ ಅದಾಗಲೇ ಬೇರುಬಿಟ್ಟಿದ್ದ ಕಾಂಗ್ರೆಸ್ ಪಕ್ಷದ ಚುನಾವಣಾ ಭ್ರಷ್ಟಾಚಾರದ ಕುರಿತು ಪುರಾವೆಗಳನ್ನು ಒದಗಿಸಿ, ನ್ಯಾಯಾಲಯದಲ್ಲಿ ದಾವೆ ಹೂಡಿದರೂ ಕಾರಂತರಿಗೆ ಜಯ ಸಿಗಲಿಲ್ಲ."14 ಈ ರೀತಿಯಾಗಿ ರಾಜಕೀಯ ರಂಗದಲ್ಲೂ ಶಿವರಾಮ ಕಾರಂತರು ಆಸಕ್ತಿ ವಹಿಸಿರುವುದನ್ನು ಕಾಣಬಹುದು.

ಒಂದು ಬಾರಿ ಸೋಲನ್ನು ಅನುಭವಿಸಿದರೂ ಮುಂದೆ ೧೯೮೯ರಲ್ಲಿ ಮತ್ತೊಮ್ಮೆ ಉತ್ತರಕನ್ನಡ ಜಿಲ್ಲೆಯಿಂದ ಪಾರ್ಲಿಮೆಂಟಿನ ಸದಸ್ಯತ್ವಕ್ಕಾಗಿ ಚುನಾವಣಾ ಕಣಕ್ಕಿಳಿದು ಹೋರಾಟ ಮಾಡುತ್ತಾರೆ.

ಕೈಗಾ ಅಣುಸ್ಥಾವರದ ವಿರುದ್ಧ ನಾಡಿನ ರಾಜಕೀಯ ವರಿಷ್ಠರ ಗಮನ ಸೆಳೆಯಲು ಈ ರೀತಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ. ಇದೇ ಸಮಯದಲ್ಲಿ ಸರಕಾರದ ವಿರುದ್ಧವೂ ಯಾವುದೇ ಮುಲಾಜಿಲ್ಲದೆ ಹೋರಾಟದ ಧ್ವನಿಯೆತ್ತಿದ ಕಾರಂತರಿಗೆ ಕೇಂದ್ರ ಸರಕಾರ ದೇಶದ ಅತ್ಯುನ್ನತ ಪರಿಸರ ಪ್ರಶಸ್ತಿ, ಇಂದಿರಾಗಾಂಧಿ ಪರ್ಯಾವರಣ ಪ್ರಶಸ್ತಿ ನೀಡಿ ಗೌರವಿಸಿದ್ದು ಶಿವರಾಮ ಕಾರಂತರ ನೈತಿಕ ಹೋರಾಟಕ್ಕೆ ದೊರೆತ ಬಲು ದೊಡ್ಡ ಪುರಸ್ಕಾರ ಎಂಬುದಾಗಿ ಭಾವಿಸಬಹುದು.

ಎಳೆಯ ಮಕ್ಕಳ ಬಗೆಗೆ ಕಾರಂತರಿಗೆ ಅಪಾರ ವಾತ್ಸಲ್ಯ. [15]“ಶಾಲೆಯ ನಾಲ್ಕು ಗೋಡೆಗಳ ನಡುವೆ ನಡೆಯುವ ನಿಯಂತ್ರಿತ ಕಲಿಕೆಯು ಮಗುವಿನ ಪ್ರತಿಭಾ ವಿಕಸನಕ್ಕೂ, ಅದರ ಸಮಗ್ರ ವ್ಯಕ್ತಿತ್ವ ನಿರ್ಮಿತಿಗೂ, ಸಾಕಾಗಲಾರದೆನ್ನುವುದು ಕಾರಮತರ ಖಚಿತವಾದ ನಿಲುವಾಗಿತ್ತು.”[15]

ಮೊದಲ ಮಕ್ಕಳ ಕೂಟವು ೧೯೩೦ರಲ್ಲಿ ಉಪ್ಪಿನಂಗಡಿಯಲ್ಲಿ ಸೇರಿತು. ಶಿಬಿರಾರ್ಥಿಗಳಾಗಿ ಸುಮಾರು ಅರುವತ್ತು ಮಂದಿ ಮಕ್ಕಳು ಭಾಗವಹಿಸಿದ್ದರು. ಮಕ್ಕಳಲ್ಲಿದ್ದ ಅನೇಕ ಸುಪ್ತ ಪ್ರತಿಭೆಗಳು ಈ ಸಂದರ್ಭದಲ್ಲಿ ಬೆಳಕಿಗೆ ಬಂದುದನ್ನು ಕಾರಂತರು ಗಮನಿಸಿದರು. ತಮ್ಮ ಪ್ರಯೋಗಗಳು ಯಶಸ್ವಿಯಾಗಬಲ್ಲವು ಎಂಬ ಭರವಸೆ ಅವರಿಗೆ ಮೂಡಿತು. ಮುಂದಿನ ಐದಾರು ವರ್ಷಗಳ ಕಾಲ ಇಂಥ ಶಿಬಿರಗಳನ್ನು ಪುತ್ತೂರಿನ ಅಕ್ಕ ಪಕ್ಕದ ಊರುಗಳಲ್ಲಿ ನಡೆಸುತ್ತಾ ಬಂದುದು ಕಾರಂತರ ಸಾಧನೆಯೇ ಆಗಿದೆ.

[16]“ಮಕ್ಕಳ ಜಗತ್ತಿಗೆ ಸಂಬಂಧಿಸಿದ ತಮ್ಮ ಪ್ರಯೋಗಗಳನ್ನು ಇನ್ನಷ್ಟು ವಿಸ್ತೃತವಾಗಿ ಪರಿಣಾಮಕಾರಿಯಾಗಿ ಮಾಡಬೇಕೆಂಬ ಹಂಬಲದಿಂದ ಕಾರಂತರು ‘ಬಾಲವನ’ವನ್ನು ಸ್ಥಾಪಿಸಿದರು.”[16] ಆಟದ ಮೂಲಕ ಶಿಕ್ಷಣ, ಭೋದನೋಪಕರಣಗಳ ವ್ಯಾಪಕ ಬಳಕೆ ‘ನೋಡಿ ಕಲಿ, ಮಾಡಿ ತಿಳಿ’ ತತ್ವವನ್ನು ಆಧರಿಸಿದ ಶಿಕ್ಷಣ ಕ್ರಮಗಳ ಅನುಸರಣೆಯಿಂದಾಗಿ ಇದೊಂದು ವಿನೂತನ ಪ್ರಯೋಗವೆನಿಸಿತು.

ಕಾರಂತರು ವಯಸ್ಕರ ಶಿಕ್ಷಣಕ್ಕೂ ಮಹತ್ವ ನೀಡಿದರು. ವಯಸ್ಕರಿಗಾಗಿ ಹೊಸ ಮಾದರಿಯ ಪುಸ್ತಕಗಳನ್ನು ಬರೆದರು. ಒಂದು ಶತಮಾನದ ಹತ್ತಿರ ಹತ್ತಿರ ಬಂದು ಮುಟ್ಟಿದ್ದ ಕಾರಂತರ ಬದುಕು ಎಲ್ಲ ರೀತಿಯಿಂದಲೂ ಸಾರ್ಥಕತೆಯ ಪರಮಾವಧಿ ಶಿಖರವನ್ನು ತಲುಪಿತ್ತು. ತಾವು ನಡೆದಂತೆ ನುಡಿದರು, ನುಡಿದಂತೆ ಬಾಳಿದರು.

ಈಗೆ ಎಲ್ಲಾ ರೀತಿಯಿಂದಲೂ [17]“ಶಿವರಾಮ ಕಾರಂತರದ್ದು ತುಂಬು ಜೀವನ. ಶ್ರೇಷ್ಠ ಮಟ್ಟದ ಲೇಖಕರಾಗಿ, ಚಿಂತಕರಾಗಿ, ಮಾನವೀಯ ಮೌಲ್ಯಗಳ ಪ್ರತೀಕಾರರಾಗಿ ಹುಟ್ಟಿ ಬೆಳೆದ ನಾಡಿಗೆ ಹೆಚ್ಚಿನ ಋಣ ಸಲ್ಲಿಸಿ ಕೃತಾರ್ಥರಾದರು.”[17]

# ಅಡಿ ಟಿಪ್ಪಣಿ

| | | |
|---|---|---|
| 1–1 | ಕಾರಂತ ಯುಗಾಂತ. | ಪುಟ – ೩೬೮ |
| 2–2 | ಹುಚ್ಚು ಮನಸ್ಸಿನ ಹತ್ತು ಮುಖಗಳು. | ಪುಟ – ೯ |
| 3–3 | ಶಿವರಾಮ ಕಾರಂತ ಕಾಲನಟ. | ಪುಟ – ೩ |
| 4–4 | ಶಿವರಾಮ ಕಾರಂತ ಕಾಲನಟ. | ಪುಟ – ೬ |
| 5–5 | ಶಿವರಾಮ ಕಾರಂತ ಮಾಲಿನೀ ಮಲ್ಯ. | ಪುಟ – ೨೦ |
| 6–6 | ಶಿವರಾಮ ಕಾರಂತ ಬದುಕು ಬರಹ. | ಪುಟ – ೧೦ |
| 6–6 | ಕಾರಂತ ಕೆಲವು ಮುಖಗಳು. | ಪುಟ – ೧೨ |
| 7–7 | ಶಿವರಾಮ ಕಾರಂತ ಬದುಕು ಬರಹ. | ಪುಟ – ೧೦ |
| 8–8 | ಶಿವರಾಮ ಕಾರಂತ ಕಾಲ ನಟ. | ಪುಟ – ೯ |
| 9–9 | ಶಿವರಾಮ ಕಾರಂತ ಕಾಲ ನಟ. | ಪುಟ – ೧೧ |
| 10–10 | ಶಿವರಾಮ ಕಾರಂತ–ಮಾಲಿನಿ ಮಲ್ಯ. | ಪುಟ – ೨೫ |
| 11–11 | ಶಿವರಾಮ ಕಾರಂತ–ಮಾಲಿನಿ ಮಲ್ಯ. | ಪುಟ – ೨೫ |
| 12–12 | ಶಿವರಾಮ ಕಾರಂತ ಬದುಕು ಬರಹ. | ಪುಟ – ೧೭ |
| 12–12 | ಶಿವರಾಮ ಕಾರಂತ ಕೆಲವು ಮುಖಗಳು. | ಪುಟ – ೨೨ |
| 13–13 | ಶಿವರಾಮ ಕಾರಂತ ಕೆಲವು ಮುಖಗಳು. | ಪುಟ – ೨೫ |
| 14–14 | ಶಿವರಾಮ ಕಾರಂತ–ಮಾಲಿನಿ ಮಲ್ಯ. | ಪುಟ – ೨೬ |
| 15–15 | ಶಿವರಾಮ ಕಾರಂತ ಕಾಲ ನಟ. | ಪುಟ – ೧೫ |
| 16–16 | ಶಿವರಾಮ ಕಾರಂತ ಕಾಲ ನಟ. | ಪುಟ – ೧೬ |
| 17–17 | ಶಿವರಾಮ ಕಾರಂತ–ಮಾಲಿನಿ ಮಲ್ಯ. | ಪುಟ – ೨೯ |

# ಅಧ್ಯಾಯ ೩.

## ಡಾ। ಕೆ. ಶಿವರಾಮ ಕಾರಂತರ

## ಸಾಹಿತ್ಯ ಸೇವೆ

## ಡಾ। ಕೆ. ಶಿವರಾಮ ಕಾರಂತರ ಸಾಹಿತ್ಯ ಸೇವೆ

[18]"೨೦ನೇ ಶತಮಾನದ ಆದಿ ಮತ್ತು ಅಂತ್ಯದ ಎರಡು ಮೂರು ವರ್ಷಗಳನ್ನು ಖಾಲಿಯಾಗಿ ಬಿಟ್ಟು ಉಳಿದಂತೆ ಇಡೀ ಶತಮಾನದುದ್ದಕ್ಕೂ ಮೈವೆತ್ತು ನಿಂತ ದಿಗಂತದೆತ್ತರದ ತನಕವೂ ತನ್ನ ಕನಸುಗಳನ್ನು ಹೆಣೆದು, ಕಾರ್ಯರೂಪಕ್ಕಿಳಿಸಿದ ಮಹಾನ್ ವ್ಯಕ್ತಿ ಮತ್ತು ಶಕ್ತಿಯೇ ಶಿವರಾಮ ಕಾರಂತ."[18]

ಕಾರಂತರಿಂದಲೇ "ಗದ್ಯ ಲೇಖನಗಳಲ್ಲಿ ನಾನು ಬರೆಯಲಾದಷ್ಟು ಇನ್ನಾವುದರಲ್ಲೂ ಆಗಿಲ್ಲ." ಎಂದು ಹೇಳಿಸಿಕೊಂಡ ಹೆಗ್ಗಳಿಕೆಯಿರುವ ಅವರ ಗದ್ಯ ಸಾಹಿತ್ಯದ್ದು ಇದರಲ್ಲಿ ಸಿಂಹಪಾಲು. ಕಾದಂಬರಿ, ಸಣ್ಣಕಥೆ, ನಾಟಕ, ಪ್ರವಾಸಕಥನ, ಜೀವನ ಚರಿತ್ರೆ, ಆತ್ಮ ಚರಿತ್ರೆ, ಹರಟೆ, ವಿಡಂಬನೆ, ಲಲಿತ ಪ್ರಬಂಧ, ವಿಮರ್ಶೆಗಳೆಲ್ಲವೂ ಇಲ್ಲಿ ಎಡೆಪಡೆದಿವೆ. ಹಾಗೆಯೇ ಶಿಶು ಸಾಹಿತ್ಯ, ಚಾರಿತ್ರಿಕ ಬರೆಹ, ವೈಜ್ಞಾನಿಕ ಕೃತಿಗಳು, ಕಲೆಯ ಬಗೆಗಿನ ಬರೆಹಗಳು, ನಿಘಂಟು ವಿಶ್ವಕೋಶಗಳು, ಸಂಪಾದಿತ ಗ್ರಂಥಗಳು, ಅನುವಾದಿತ ಕೃತಿಗಳು, ಮುಂತಾದುವೆಲ್ಲ ಅವರ ಸಾಹಿತ್ಯ ಸೃಷ್ಟಿಯ ಬೇರೆ ಬೇರೆ ಮಗ್ಗುಲುಗಳನ್ನು ಪರಿಚಯ ಮಾಡಿಕೊಡುತ್ತೇವೆ. ಇವುಗಳೊಂದಿಗೆ ಅವರ ಕವನಗಳು, ಗೀತ ನಾಟಕಗಳೂ ಸೇರಿಕೊಳ್ಳುತ್ತವೆ.

[19]"ಸಮಾಜದ ಋಣವನ್ನು ಸಂದಾಯ ಮಾಡುವುದನ್ನೊಂದು ಪವಿತ್ರ ಕರ್ತವ್ಯವೆಂದು ನಂಬಿ ನಡೆದವರು , ಕಾರಂತರು ಸಾಹಿತ್ಯ ನಿರ್ಮಿತಿಯನ್ನು ಅದರ ಸಾಧನಗಳಲ್ಲೊಂದೆಂದು ಪರಿಗಣಿಸಿದ್ದ ಅವರು ಎಲ್ಲ ಬಗೆಯ ಭ್ರಮೆಗಳಿಂದ ಕಳಚಿಕೊಂಡಿದ್ದರು."[19]

ಕಾರಂತರು 90ರ ಹರೆಯವನ್ನು ದಾಟುವ ತನಕವೂ ಅವರು ಬರೆದದ್ದು ಅಷ್ಟು ಇಷ್ಟು ಎಂಬುದಾಗಿ ಕನ್ನಡದ ಹೆಸರಾಂತ ವಿಮರ್ಶಕರು, ವಿದ್ವಾಂಸರು, ಸಾಹಿತ್ಯಪ್ರಿಯರು ಸಾಹಿತ್ಯವನ್ನು ಬೋಧಿಸುವ ಪ್ರಾಧ್ಯಾಪಕರೂ ತಮತಮಗೆ ತೋಚಿದ ಪಟ್ಟಿಯನ್ನು ಕನ್ನಡಿಗರ ಮುಂದೆ ಇರಿಸುತ್ತಿದ್ದರು.

೧೯೯೭ರಲ್ಲಿ ಕಾರಂತರು ಅಳಿಯುವ ಕೆಲವೇ ದಿನಗಳ ಮೊದಲು ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ವತಿಯಿಂದ ಪ್ರಕಟವಾದ ಶಿವರಾಮ ಕಾರಂತರ ಕೃತಿ **'ಕೈಪಿಡಿ'** ಎಂಬ ಗ್ರಂಥದಲ್ಲಿ ಕಾರಂತ ಕೃತಿ ४೧೭ ಗ್ರಂಥಗಳನ್ನು ಗುರುತಿಸಿದ್ದಾರೆ.

[20]"ಕಾರಂತರ ನಾಟಕಗಳ ಬಗ್ಗೆ ನಾನು ನಡೆಸಿದ ಕ್ಷೇತ್ರಾಧ್ಯಯನದ ಫಲವಾಗಿ ೧೯೨೧ರಲ್ಲೆ ಅವರು **"ನಿಶಾಮಹಿಮೆ"** ಎಂಬ ನಾಟಕವನ್ನು ಕುಂದಾಪುರದಲ್ಲಿ ಜರಗಿದ ದಕ್ಷಿಣಕನ್ನಡ ಜಿಲ್ಲಾ ರಾಷ್ಟ್ರೀಯ ಪರಿಷತ್ತಿನ ಸಮಾವೇಶದಲ್ಲಿ ಆಡಿದ್ದ ಸಂಗತಿ ಆ ನಾಟಕದಲ್ಲಿ ಪಾತ್ರ ವಹಿಸಿದ್ದ ಕುಂದಾಪುರದ ವಾಸುದೇವ ನಾಯಕರ ಹೇಳಿಕೆಯಿಂದ ತಿಳಿದುಬಂದಿದೆ. ಇದರಿಂದ ಶಿವರಾಮ ಕಾರಂತರ ಮೊದಲ ಬರಹ ಕವನ ಸಂಕಲನವಲ್ಲ ನಾಟಕ ಕೃತಿ ಎಂಬುದಾಗಿ ಭಾವಿಸಬಹುದು"[20] ಎಂದು ಮಾಲಿನಿ ಮಲ್ಯ ಹೇಳಿದ್ದಾರೆ.

ಈಗೆ ನಿಶಾಮಹಿಮೆ ಕಾರಂತರ ಮೊದಲ ಬರವಣಿಗೆಯಾಗಿ ಹೊರಹೊಮ್ಮಿದ ಮೇಲೆ ೫೩ಕ್ಕೂ ಅಧಿಕ ನಾಟಕಗಳು ನಲವತ್ತೈದು ಕಾದಂರಿಗಳು, ಎರಡು ಕವನ ಸಂಕಲನಗಳು, ಆರು ಲಲಿತ ಪ್ರಬಂಧಗಳು, ಪ್ರವಾಸ ಕಥನಗಳು, ವಿಚಾರ ಸಾಹಿತ್ಯ ಈಗೆ ಸಾಹಿತ್ಯದ ಎಲ್ಲಾ ಮಗ್ಗಲುಗಳಲ್ಲಿ ಕಾರಂತರು ಕೈಯಾಡಿಸಿದ್ದಾರೆ.

ಕಾರಂತರು ಒಟ್ಟು ಎರಡು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. [21]"೧೯೨೨ರಲ್ಲಿ ಹೊರಬಂದ ಅವರ **"ರಾಷ್ಟ್ರಗೀತ ಸುಧಾಕರ"** ಉತ್ತರಾದಿ ಶೈಲಿಯ ರಾಗ, ತಾಳ ನಿಬದ್ಧವಾದ ೨೨ ಹಾಡುಗಳ ಗುಚ್ಛವಾಗಿದೆ."[21] ಕಾರಂತರ ಎರಡನೆಯ ಕವನ ಸಂಕಲನ **"ಸೀಳ್ಗವನಗಳು"** ೧೯೬೦ರಲ್ಲಿ ಪ್ರಕಟವಾಯಿತು. ಇದರಲ್ಲಿ ಒಟ್ಟು ೫೭ ಕವನಗಳಿವೆ. ಅವರು ವಿದೇಶ ಪ್ರವಾಸದಲ್ಲಿ ನಿರತರಾಗಿದ್ದಾಗ ಒಂದು ನಿರಾತಂಕ ಸ್ಥಿತಿಯಲ್ಲಿ ನಿಂತು ಬದುಕಿನ ಆತಂಕಗಳನ್ನು ಸಂಧಿಸುವ ಮನೋಭಾವದ ಅಭಿವ್ಯಕ್ತಿಗಳಾಗಿ ಈ ಕವನಗಳಿವೆ.

[22]"ವಾಸ್ತವವಾಗಿ ಕಾವ್ಯ ಪ್ರಕಾರಕ್ಕೆ ಕಾರಂತರ ಕೊಡುಗೆಗಳನ್ನು ಅವರ ನಾಟ್ಯ, ನೃತ್ಯ, ನೇಪಥ್ಯ, ತಂತ್ರ ಪರಿಣತಿ ಇವುಗಳ ಹಿನ್ನೆಲೆಯಲ್ಲೆ ನೋಡಬೇಕು."[22] ಆ ಪರಿಜ್ಞಾನವನ್ನು ಅವರು ತಮ್ಮ ಗೀತನಾಟಕಗಳ ಸೃಷ್ಟಿಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಗೀತ ನಾಟಕಗಳಲ್ಲಿ ಸಂಗೀತಕ್ಕೆ ಪ್ರಾಧಾನ್ಯವಿರಬೇಕೆಂದು ಅವರು ಸತಾರ್ಕಿಕವಾಗಿ ನಿರೂಪಿಸಿದ್ದಾರೆ. ವೈವಿಧ್ಯಮಯವಾದ ವಸ್ತುಗಳನ್ನು ಆಯ್ದುಕೊಳ್ಳುವ ಅವರು, ಅವುಗಳೊಂದಿಗೆ ಸ್ಥಾಪಿಸಿಕೊಳ್ಳುವ ಸಂಬಂಧ, ಬೆಳೆಸಿಕೊಳ್ಳುವ ಆತ್ಮೀಯತೆಗಳು ನಮಗೆ ಮುಖ್ಯವೆನಿಸುತ್ತವೆ. [23]"ಕೃತಿಯು ನಿರ್ಮಾಣ ಕಾಲದ್ದೇ ಇರಲಿ, ಹಳೆಯ ಕನಸಿನ ಲೋಕದ್ದೇ ಇರಲಿ, ಅವರ ಕನಸನ್ನು ನಾನು ಹೆಣೆದು, ನನ್ನ ಮಮತೆಯನ್ನು ಅವುಗಳಲ್ಲಿ ತೇಲಿ ಬಿಡಲು ಯತ್ನಿಸಿದೆ. ಯಥಾರ್ಥವಾದ ಚರಿತ್ರೆ ಕಥನಗಳೇನಮ್ಮನ್ನು ಓಲಾಡಿಸಬೇಕೆಂಬ ಹಟವಾಗಲಿ, ರಸ ನೂನ್ಯತೆಯಾಗಲೀ ನನ್ನಲ್ಲಿ ಇಲ್ಲ."[23] ಎನ್ನುವಲ್ಲಿ ಈ ವೈಶಿಷ್ಟ್ಯವಿರುವುದರಿಂದಲೇ ವಸ್ತುವು ಕಾಲ್ಪನಿಕವಿರಲಿ, ಸಮಕಾಲೀನ ವಿಡಂಬನೆಯೇ ಇರಲಿ, ಸೃಷ್ಟಿಶೀಲವಾಗಿ ಅವುಗಳಿಗೆ ಸ್ಪಂದಿಸುವುದು ಕಾರಂತರಿಗೆ ಸುಲಭವೆನಿಸುತ್ತದೆ. ನಾಟಕ ರಚನೆಯ ಒಂದು ಹಂತದಲ್ಲಿ ಆ ಮಾಧ್ಯಮದಲ್ಲಿ ಗದ್ಯ ಸಂಭಾಷಣೆಗಳಿಗೂ, ಪದ್ಯ ಭಾಗಗಳಿಗೂ ಸ್ವಲ್ಪವೂ ಹೊಂದಾಣಿಕೆಯಿಲ್ಲವೆನ್ನುವ ವಿಚಾರವೂ ಅವರನ್ನು ಬಾಧಿಸತೊಡಗಿತು.

[24]"ಈ ಉಭಯ ಮಾಧ್ಯಮಗಳಲ್ಲಿ ನನ್ನ ಕಿವಿಗೆ ಅಸಂಗತವಾಗಿ ಕೇಳುತ್ತಿದ್ದ ಇನ್ನೊಂದು ಅಂಶವೆಂದರೆ, ಶೃತಿಬದ್ಧವಾದ ಹಾಡನ್ನು ಹಾಡಿ ನಿಲ್ಲಿಸಿ, ಶೃತಿಹೀನ ಗದ್ಯಕ್ಕೆ ಇಳಿದು ಮುಂದುವರಿಯುವ ಪೇಚು ಇದನ್ನು ಸುಸಂಬಂಧವಾಗಿ ಮಾಡಲು ಹರಿಕಥೆ ಮಾಡುವವರಂತೆ ಗದ್ಯ ಪದ್ಯಗಳೆರಡಕ್ಕೂ ಶೃತಿ ಬಳಸಿದ್ದಾದರೆ ಮಾತ್ರವೇ ಸಾಧ್ಯವಾಗುತ್ತದೆ."[24] ಎನ್ನುವ ನಿರ್ಣಯಕ್ಕೂ ಅವರು ತಲುಪಿದರು. ತಮ್ಮ ಪ್ರಜ್ಞೆಗಿದ್ದ ಬಹುಮುಖತ್ವದ ಸ್ಪಷ್ಟವಾದ ಅರಿವಿದ್ದವರು ಕಾರಂತರು. 'ನನ್ನ ಶೀಲದ ಸ್ವಭಾವದ ಇಂದ್ರಿಯ ಲಾಲಸೆಗಳ ಎಲ್ಲ ವಿಧವಾದ ಚೇತನ ಮತ್ತು ಬೆಳವಣಿಗೆಗೆ ಅವಕಾಶ ಕೊಡಬೇಕೆಂಬುದು ನನಗೆ ಹೆಚ್ಚಿನ ಹಂಬಲ' ಎನ್ನುವ ಅವರು ಏಕಮುಖ ತಜ್ಞತೆಗಾಗಿ ಎಂದೂ ಹೆಣಗಿದವರಲ್ಲ.

[25]"ರಂಗಭೂಮಿಯಂತೆ ಕಾರಂತರನ್ನು ಆಕರ್ಷಿಸಿದ ಇನ್ನೊಂದು ಮಾಧ್ಯಮ ಚಲನಚಿತ್ರ"[25] ಸ್ವಂತ ಕಥೆ, ಸ್ವಂತ ನಿರ್ದೇಶನ, ನಟನೆ, ಸ್ವಂತ ನಿರ್ಮಾಣಗಳ ಮೂಲಕ ಮೂವತ್ತರ ದಶಕದ ಆರಂಭದಲ್ಲಿಯೇ ಅಸ್ಪೃಶ್ಯತೆಯ ವಿರುದ್ಧದ ಪ್ರಚಾರಕ್ಕಾಗಿ ಚಲನಚಿತ್ರವನ್ನು ನಿರ್ಮಿಸಿ ಪ್ರದರ್ಶಿಸಿದ್ದರು. 'ಡುಮಿಂಗೊ' ಎಂದು ಅದರ ಹೆಸರು.

ತಮ್ಮ ೭೬ನೇ ವಯಸ್ಸಿನಲ್ಲಿ (೧೯೭೮) ಮತ್ತೊಮ್ಮೆ ಚಲನಚಿತ್ರ ನಿರ್ಮಾಣದ ಸಾಹಸಕ್ಕೆ ಧುಮುಕಿದ ಕಾರಂತರು ತಮ್ಮ ಸ್ವಂತ ಕಾದಂಬರಿ ಕುಡಿಯರ ಕೂಸು ಆಧಾರಿತ 'ಮಲೆಯ ಮಕ್ಕಳು' ಎಂಬ ಚಿತ್ರವನ್ನು ನಿರ್ದೇಶಿಸಿ ಬಿಡುಗಡೆ ಮಾಡಿದರು.

26"೧೯೨೩ ದಶಂಬರ ತಿಂಗಳಲ್ಲಿ ಕಾರಂತರು ಆರಂಭಿಸಿದ 'ವಸಂತ' ಎಂಬ ಕನ್ನಡ ಪತ್ರಿಕೆಯೇ ಒಬ್ಬ ಪ್ರತಿಭಾನ್ವಿತ ಲೇಖಕ, ವಿಮರ್ಶಕ, ವಿಚಾರವಾದಿ, ಹೋರಾಟಗಾರ, ಸಾಹಿತಿಯನ್ನು ಸೃಷ್ಟಿಸಿತೆಂಬುದಾಗಿ ಹೇಳಬಹುದು."26 'ವಸಂತ' ಪತ್ರಿಕೆ ಕನ್ನಡ ಸಾಹಿತ್ಯ ಜಗತ್ತಿನ ಪಾಲಿಗೆ ವಸಂತ ಋತುವಿನ ಆಗಮನದ ಸಂಕೇತವಾಗಿತ್ತು. ತಮಗಿಂತ ಹಿಂದಿನ ಮತ್ತು ತಮ್ಮ ಸಮಕಾಲೀನ ಹಿರಿಯ ಸಾಹಿತಿಗಳ ಕೃತಿಗಳಿಂದ ಸ್ಫೂರ್ತಿ, ಪ್ರೇರಣೆಗಳನ್ನು ಪಡೆದು, ಪಾಶ್ಚಾತ್ಯ ಸಾಹಿತ್ಯದ ಗಾಢವಾದ ಅಧ್ಯಯನದಿಂದ ಉಂಟಾದ ಜ್ಞಾನವನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ನಮ್ಮ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಕುರಿತು ಮಹಾತ್ಮಾ ಗಾಂಧೀಜಿಯವರಂಥ ರಾಷ್ಟ್ರ ನಾಯಕರಿಂದ ಅರಿವನ್ನು ಗಳಿಸಿಕೊಂಡು ತೆರೆದ ಮನಸ್ಸಿನಿಂದ ಇವೆಲ್ಲವುಗಳ ಬಗ್ಗೆ ಚಿಂತನೆ ನಡೆಸುತ್ತಾ ವ್ಯಾಪಕ ರಚನಾತ್ಮಕ ಕೆಲಸಗಳನ್ನು ನಡೆಸುತ್ತಾ ಏಕಕಾಲಕ್ಕೇನೇ ಹಲವು ರೀತಿಯ ಬೌದ್ಧಿಕ ಕೊಡುಗೆಗಳನ್ನು ಕಾರಂತರು ಕನ್ನಡ ನಾಡಿಗೆ, ಕನ್ನಡ ಭಾಷೆಗೆ, ಕನ್ನಡ ಸಾಹಿತ್ಯಕ್ಕೆ ಕೊಟ್ಟರು.

27"ನಾಟಕ ಕ್ಷೇತ್ರದಲ್ಲಿ ಕಾರಂತರು ಬಹು ವಿಧದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ನಾಟಕಕಾರರಾಗಿ, ನಿರ್ದೇಶಕರಾಗಿ, ಹಿನ್ನೆಲೆ ಗಾಯಕರಾಗಿ, ನಟರಾಗಿ, ಕ್ರಿಯಾಶೀಲರಾಗಿದ್ದ ಅನುಭವಗಳು ಅವರದ್ದು."27 ರಂಗದ ಮೇಲೆ ಯಾವುದೇ ಪಾತ್ರವೂ ನಿಷ್ಕ್ರಿಯವಾಗಿ ನಿರ್ಭಾವುಕವಾಗಿ ಉಳಿಯಲೇಬಾರದೆಂಬುದು ಅವರ ಸಿದ್ಧಾಂತವಾಗಿತ್ತು. ಹಾಗೆಯೇ ರಂಗದ ಮೇಲಿನ ಸನ್ನಿವೇಶ, ನಟನಟಿಯರ ಸಂಭಾಷಣೆ, ಧ್ವನಿಯ ಏರಿಳಿತ ಮುಖಭಾವ, ಚಲನೆಯ ವಿನ್ಯಾಸ ಮುಂತಾದ ಎಲ್ಲಾ ಅಂಶಗಳ ಸಂತುಲನಕ್ಕೂ ಅವರು ಪ್ರಾಧಾನ್ಯವನ್ನು ಕೊಟ್ಟರು. 28"ತಾವು ನಟರಾಗಿ ರಂಗದ ಮೇಲಿದ್ದಾಗ ಅನುಭವಿಸಿದ ತಾದಾತ್ಮ್ಯವನ್ನೂ, ರೋಚಕ ವೃತ್ತಾಂತಗಳನ್ನೂ, ಅವರು 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಲ್ಲಿ ಮನಮುಟ್ಟವಂತೆ ನಿರೂಪಿಸಿದ್ದಾರೆ."28 ಇಂಥ ವಿನೂತನ ಪ್ರಯೋಗಗಳಿಗೆ ತೀರಾ ಅಗತ್ಯವಾಗಿದ್ದ ರಂಗ ಸಮುದಾಯದ ಕೊರತೆಯಿಂದಾಗಿ ಅಲ್ಲಿ ನಿರೀಕ್ಷಿತ ಮಟ್ಟದ ಯಶಸ್ಸನ್ನು ಸಾಧಿಸುವುದು ತಮ್ಮಿಂದಾಗಲಿಲ್ಲ ಎನ್ನುವ ನೋವಿಗೂ ಅಭಿವ್ಯಕ್ತಿಯನ್ನು ನೀಡಿದ್ದಾರೆ.

29"ಕಾರಂತರು ನಾಟಕಗಳ ರಚನೆಗೆ ತೊಡಗಿಕೊಂಡ ಕಾಲಧಲ್ಲಿ ಸಂಸ್ಕೃತ ನಾಟಕಗಳ ಮಾದರಿಯೇ ಕನ್ನಡದಲ್ಲೂ ಪ್ರಚಲಿತವಾಗಿತ್ತು. ಆಗ ಪೂರ್ವ ರಂಗದ ಭಾಗವಾಗಿ ಸೂತ್ರದಾರನು ರಂಗವನ್ನು ಪ್ರವೇಶಿಸುವುದು, ನಟಿಯನ್ನ ಕರೆಯುವುದು ಸಾಮಾನ್ಯವಾಗಿ ಅನುಸರಿಸಲ್ಪಡುತ್ತಿದ್ದ ಕ್ರಮವಾಗಿತ್ತು."29 ಈಗೆಯೇ ಯಾವ ನಾಟಕವನ್ನಾಡಲಿ ಎನ್ನುವ ಪ್ರಶ್ನೆ ಅದಕ್ಕೆ ಉತ್ತರ ಅದನ್ನು ಹಿಂಬಾಲಿಸಿ ವಸಂತ ಋತುವನ್ನು ಕುರಿತು ಹಾಡಬೇಕೆಂಬ ನಿರ್ಧಾರಗಳು ಪ್ರಸ್ತುತಿಯನ್ನು ಪಡೆಯುತ್ತಿದ್ದವು. ಈ ಉಪಕ್ರಮವನ್ನು ಬದಲಾಯಿಸಿದ್ದ ಕಾರಂತರು ತಮ್ಮ ಒಂದು ನಾಟಕದಲ್ಲಿ ಸೂತ್ರದಾರನ ಬಾಯಿಯಿಂದ 'ಈಗಾಗಲೇ ವಸಂತ ಋತು ಸಂದು ಹೋಗಿರುವುದರಿಂದ ಸದ್ಯಕ್ಕೊದಗಿದ "ಮೇ ತಿಂಗಳ ಕುರಿತು ಹಾಡು" ಎಂದೂ ಹೇಳುತ್ತಾರೆ.

ಕಾರಂತ ಸಾಹಿತ್ಯದ ಪ್ರಮುಖ ವಾಹಿನಿಯೇ ಕಾದಂಬರಿ. 30"ಕನ್ನಡ ಕಾದಂಬರಿ ಪ್ರಕಾರಕ್ಕೆ ಮೊದಲ ಸ್ವತಂತ್ರ ಮತ್ತು ಮಹತ್ವಪೂರ್ಣ ಸಾಮಾಜಿಕ ಕಾದಂಬರಿ ಇಂದಿರಾಬಾಯಿ (೧೮೯೯-೧೯೦೦)ಯನ್ನು ನೀಡಿದ ಗುಲುವಾಡಿ ವೆಂಕಟರಾಯರು ದಕ್ಷಿಣ ಕನ್ನಡ ಜಿಲ್ಲೆಯವರು"30 ರೋಹಿಣಿ, ವಾಗ್ದೇವಿ ಮುಂತಾದ ಕಾದಂಬರಿಗಳನ್ನು ಸೃಷ್ಟಿಸಿದ ಅಣ್ಣಾಜಿರಾಯರು ಮತ್ತು ಬೋಳಾರ ಬಾಬುರಾಯರು ದಕ್ಷಿಣ ಕನ್ನಡದವರೇ. 31"ಸ್ತ್ರೀಪರ ನಿಷ್ಠೆಯಿಂದ ಕೂಡಿರುವ ಇಂತಹ ಸಾಮಾಜಿಕ ಕಳಕಳಿಯ ಕಾದಂಬರಿಗಳು ಕಾರಂತರ ಮನಸ್ಸನ್ನು ತಟ್ಟಿದ್ದರಿಂದ ಅವೇ ಧ್ಯೇಯ ಧೋರಣೆಗಳನ್ನು ಪ್ರತಿಪಾದಿಸುವ ನಿರ್ಭಾಗ್ಯ ಜನ್ಮ (೧೯೨೭) ಕನ್ಯಾಬಲಿ ಅಥವಾ ಸೂಳೆಯ ಸಂಸಾರ (೧೯೨೯-೩೦) ಎಂಬ ಕಾದಂಬರಿಗಳನ್ನು ಕಾರಂತರು ತಮ್ಮ ಸ್ವಂತ ಪತ್ರಿಕೆ 'ವಸಂತ'ದಲ್ಲಿ ಪ್ರಕಟಿಸಿದರು."31

32"ಕಾರಂತರ ಕಾದಂಬರಿಗಳು ಅವರು ಸ್ವೀಕರಿಸುವ ಜ್ಞಾನಮೀಮಾಂಸೆಯ ಮಿತಿಗೆ ಒಳಪಡುತ್ತವೆ."32 ಎನ್ನುವ ಆಕ್ಷೇಪವನ್ನು ಅವರ ಎಲ್ಲ ಗಂಭೀರ ನೆಲೆಗಳಲ್ಲಿ ಪರಿಗಣಿಸಬೇಕಾದ ಒತ್ತಡದ ಕಾರಣಗಳಲ್ಲಿ ಇದೂ ಒಂದಾಗಿದೆ. ತಮ್ಮ ಸಾಹಿತ್ಯಿಕ ಬದುಕಿನ ಮೊದಲ ದಶಕಗಳಲ್ಲಿ ಬರೆದ ಪತ್ತೇದಾರಿ ಕಾದಂಬರಿಗಳಿಂದ ತೊಡಗಿ, ಕೊನಯ 'ಅಂಟಿದ ಅಪರಂಜಿ'ಯವರೆಗೆ ಕಾರಂತರು ಒಟ್ಟು ೪೭ ಕಾದಂಬರಿಗಳನ್ನು ಬರೆದಿದ್ದಾರೆ.

ಮೇಲ್ನೋಟಕ್ಕೆ ಪತ್ತೇದಾರಿ, ರಾಜಕೀಯ, ಪ್ರಾದೇಶಿಕ, ಸಾಮಾಜಿಕ ಮುಂತಾದ ಕಾದಂಬರಿಗಳ ಸಾಂಪ್ರದಾಯಿಕವಾದ ವರ್ಗಗಳಿಗೆ ಇವೂ ಅಳವಡುವಂತೆ ಕಾಣುತ್ತವೆ. ಸ್ವಲ್ಪ ಸಂಕೀರ್ಣ ಪಾತಳಿಯಲ್ಲಿ ಇವುಗಳನ್ನಿಟ್ಟು ನೋಡಿದಾಗ ಮಾತ್ರ ಅಲ್ಲಿರುವ ಅಂತರ ಸಂಬಂಧದ ಬೇರೆಬೇರೆ ಶಿಲ್ಪಗಳು ಸ್ಪಷ್ಟವಾಗುತ್ತವೆ. 33"ಕಾರಂತರು ಕೆಲವು ಅತ್ಯುತ್ತಮ ಕಾದಂಬರಿಗಳನ್ನು ಬರೆದು ಆ ಸಾಹಿತ್ಯ ಪ್ರಕಾರವನ್ನು ಶ್ರೀಮಂತವಾಗಿಸಿದ್ದಾರೆ ಎನ್ನುವುದು ಕೇವಲ ಕನ್ನಡದಲ್ಲಿ ಮಾತ್ರವಲ್ಲ ಅರುವತ್ತರ ದಶಕದಲ್ಲಿಯ ಅತ್ಯುತ್ತಮ ಭಾರತೀಯ ಸಾಹಿತ್ಯ ಕೃತಿ ಎಂದು ಅವರ ಒಂದು ಕಾದಂಬರಿ (ಮೂಕಜ್ಜಿಯ ಕನಸುಗಳು) ಜ್ಞಾನಪೀಠ ಪ್ರಶಸ್ತಿಗೆ ಪಾತ್ರವಾದದನ್ನು ನೋಡಿದರೆ ಕಾದಂಬರಿ ಪ್ರಕಾರದಲ್ಲಿಯ ಅವರ ಸಾಧನೆ ಅಖಿಲ ಭಾರತೀಯ ಮಟ್ಟದಲ್ಲಿಯೂ ಹಿರಿದೆನಿಸಿಕೊಳ್ಳಬೇಕಾದದ್ದು ಎನ್ನುವುದು ಸ್ಪಷ್ಟ."33 ಎರಡನೆಯದಾಗಿ ಅವರು ಕಾದಂಬರಿಗಳನ್ನು ಬರೆಯತೊಡಗಿದಾಗ ಕನ್ನಡ ಕಾದಂಬರಿ ಇನ್ನೂ ಶೈಶವಾವಸ್ಥೆಯಲ್ಲಿದ್ದಿತು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾದಂಬರಿಗಳಿಗೆ ಸ್ಥಿರಪಟ್ಟವನ್ನು ತಂದುಕೊಟ್ಟವರು ಕಾರಂತರು.

34"೧೯೨೭ರಲ್ಲಿ ಪ್ರಕಟವಾದ ಭೂತವೂ ಪತ್ತೇದಾರಿ ಕಾದಂಬರಿ. ಇಲ್ಲಿಯ ಭಾಷೆಯ ಸಮರ್ಥ ಪ್ರಯೋಗ, ವಸ್ತು ಮತ್ತು ಕಾದಂಬರಿಯ ಪ್ರಕಾರದಿಂದಾಗಿ, ಕಾದಂಬರಿ ಹುಟ್ಟಿಕೊಂಡ ಕಾಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ವಿಮರ್ಷಿಸಿದಾಗ ಕಾರಂತರ ಮೊದಲ ಯಶಸ್ವೀ ಕಾದಂಬರಿ ಎಂಬುದಾಗಿ ಧಾರಾಳವಾಗಿ ಹೇಳಬಹುದು."34 ಭೂತ ಪ್ರೇತಗಳು ನಿಜವೆಂದು ನಂಬಿ ಭಯವಿಹ್ವಲರಾಗುವ ಜನರಿಗೆ ವೈಜ್ಞಾನಿಕ ಪ್ರಯೋಗಗಳ ಮೂಲಕ ತೋರಿಸಿಕೊಟ್ಟು ಅಂಥ ಭಯ ನಿವಾರಣೆ ಸಾಧ್ಯವೆಂಬುದನ್ನು ಈ ಕಾದಂಬರಿಯ ಮೂಲಕ ಕಾರಂತರು ತೋರಿಸಿಕೊಟ್ಟರು.

ಚಾರಿತ್ರಿಕ ಶಿಸ್ತನ್ನು ಕಾಪಾಡುವ ದೃಷ್ಟಿಯಿಂದ ಕಾರಂತರ ಎರಡು ಪತ್ತೇದಾರಿ ಕಾದಂಬರಿಗಳಾದ 'ವಿಚಿತ್ರ ಕೂಟ' ಮತ್ತು 'ಭೂತ' ಕೃತಿಗಳನ್ನು ಇಲ್ಲಿ ಹೆಸರಿಸಬೇಕಾಗಿದೆ.

[35]“ದೇವದೂತರು ಎಂಬ ಕಾದಂಬರಿ (೧೯೨೯) ಕಟುವಾದ ವಿಡಂಬನೆ, ಹಾಸ್ಯದ ಲೇಪದಿಂದ ಕೂಡಿದ್ದು ನಮ್ಮ ಸಾಮಾಜಿಕ ಲೋಪದೋಷಗಳ ಕುರಿತ ವ್ಯಂಗ್ಯ ಚಿತ್ರಣವನ್ನು ಒಳಗೊಂಡಿದೆ.”[35] ಅದೇ ವರ್ಷ ‘ವಸಂತ’ದಲ್ಲಿ ಪ್ರಕಟವಾದ ‘ಸೂಳೆಯ ಸಂಸಾರ’ ಕಾರಂತರ ಮೊದಲ ತುಸು ಗಂಭೀರ ಸ್ವರೂಪದ ಕಾದಂಬರಿ. ಇದೇ ಕಾದಂಬರಿ ಮುಂದೆ ‘ಕನ್ಯಾ ಬಲಿ’ ಎಂಬ ಹೆಸರಿನಲ್ಲಿ ಹಲವು ಬಾರಿ ಮರು ಮುದ್ರಣಗೊಂಡಿದೆ. ವಿಧವೆಯರನ್ನು ಸಮಾಜ ಅಮಾನವೀಯ ರೀತಿಯಲ್ಲಿ ನಡೆಸಿಕೊಳ್ಳುವುದರಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಕಾದಂಬರಿಯಲ್ಲಿ ತೀಕ್ಷ್ಣವಾದ ತೀರ್ವವಾದ ಸ್ಪಂದನವಿದೆ. ಕಾದಂಬರಿಯ ಅಂತ್ಯ ತುಸು ನಾಟಕೀಯ ತಿರುವನ್ನು ಪಡೆದಿದ್ದರೂ, ಇಡೀ ಕಾದಂರಿ ಭಾಷೆ, ಶೈಲಿ, ನಿರೂಪಣಾ ಕೌಶಲ್ಯ ಸನ್ನಿವೇಶಗಳ ಸೃಷ್ಟಿಯಿಂದ ಎಲ್ಲೂ ಜಾಳಾಗಿ ಕಾಣಿಸುವುದಿಲ್ಲ.

[36]“ಕಾರಂತರ ಕಾದಂಬರಿಗಳಲ್ಲಿಯೇ ಜನಪ್ರಿಯತೆಯ ಉತ್ತುಂಗ ಶಿಖರಕ್ಕೇರಿದ ಕಾದಂರಿ ‘ಚೋಮನ ದುಡಿ’ ಇದನ್ನು ೧೯೩೩ರಲ್ಲಿ ಪ್ರಕಟಿಸಿದರು. ಇದರಲ್ಲಿ ಯಾವ ಕೃತತೆಯ ಸುಳಿವೂ ಇಲ್ಲದೆ ನಿರೂಪಿಸಲಾದ ಅನುಭವದ ನೇರ ವಾಸ್ತವತೆಯೇ ಅದರ ಶಕ್ತಿಯಾಗಿದೆ.”[36] ಸ್ನೇಹಿತರೊಬ್ಬರ ಮನೆಯ ಜಗುಲಿಯ ಮೇಲೆ ಕುಳಿತು ಬರೆದಿದ್ದ ಈ ಕಾದಂಬರಿಯ ಹಸ್ತಪ್ರತಿಯನ್ನು ಅಲ್ಲೇ ಬಿಟ್ಟು ಯಾವದೋ ಕೆಲಸಕ್ಕಾಗಿ ಮನೆಯೊಳಕ್ಕೆ ತೆರಳಬೇಕಾಗಿ ಬಂದ ಸಂದರ್ಭದಲ್ಲಿ ಬೀದಿಯಲ್ಲಿ ಮೇಯುತ್ತಿದ್ದ ದನವೊಂದರ ಕಣ್ಣಿಗೆ ಚೋಮನ ದುಡಿ ಕಾದಂಬರಿಯ ಹಸ್ತಪ್ರತಿ ಹುಲ್ಲಿನಂತೆ ಕಂಟಿರಬೇಕು! ಈ ದೃಶ್ಯದಿಂದುಂಟಾದ ಮಾನಸಿಕ ಆಘಾತದಿಂದ ಪ್ರಾಯಶಃ ಕಾರಂತರ ಆವೇಶ ಹೆಚ್ಚಿಸಿರಬೇಕು. ತಿರುಗಿ ಅವರು ಬರೆದ ಈ ಕಾದಂಬರಿ ಇಂದಿಗೂ ತನ್ನ ಆವೇಶವನ್ನು ಉಳಿಸಿಕೊಳ್ಳುವಲ್ಲಿ ಸಫಲವಾಗಿದೆ.

[37]“ತನ್ನ ಸಾಮಾಜಿಕ ಪರಿಸರದಲ್ಲಿ ಮನುಷ್ಯ ನಡೆದುಕೊಳ್ಳುವ ಬಗೆಯನ್ನು ವಿಮರ್ಶೆಯ ದೃಷ್ಟಿಯಿಂದ ಪರಿಶೀಲಿಸುವುದು ಕಾರಂತರ ಮನೋಧರ್ಮದ ಒಂದು ಮುಖ್ಯ ಲಕ್ಷಣವಾಗಿ ಕಾಣುತ್ತದೆ.”[37] ಎನ್ನುವ ಮಾತಿದೆ. ಕೆಲವು ಕಾದಂಬರಿಗಳಲ್ಲಿ ವ್ಯಂಗ್ಯ, ವಿನೋದ, ವಿಡಂಬನೆಗಳನ್ನು ಹಾಳತವಾಗಿ ಬೆರೆಸಿ ಈ ಲಕ್ಷ್ಯವನ್ನು ಸಾಧಿಸುತ್ತಾರೆ ಕಾರಂತರು. ಅವರ ಪ್ರಕಾರ ಸಮಾಜದಲ್ಲಿ ನಡೆಯುವ ಅನಾನ್ಯ ಸಂಘರ್ಷಗಳಿಗೆ ಅರಿವಿನ ಅಭಾವವೇ ಕಾರಣವಾಗಿದೆ. ಆ ಅರಿವಿನ ಬೀಜ ಒಮ್ಮೆ ಗಟ್ಟಿಯಾಗಿ ಊರಿಕೊಂಡೊಡನೆ ಎಲ್ಲಾ ಬಗೆಯ ಸೌಹಾರ್ದಗಳು ಚಿಗುರತೊಡಗುತ್ತವೆ.

[38]“ಧರ್ಮದ ಹೆಸರಿನಲ್ಲಿ, ಆಧ್ಯಾತ್ಮಿಕ ಮಾರ್ಗದರ್ಶನದ ಹೆಸರಿನಲ್ಲಿ ನಡೆಯುವ ಕಪಟ ಮೋಸಗಳನ್ನು ಕಾರಂತರು ಮೊದಲಿನಿಂದಲೂ ಅಸಹನೆಯಿಂದ ಕಂಡಿದ್ದಾರೆ.”[38] ನಲವತ್ತೆಂಟರಲ್ಲಿ ಪ್ರಕಟವಾದ ‘ಸನ್ಯಾಸಿಯ ಬದುಕು’ ಮತ್ತು ಮತ್ತೆ ಹನ್ನೆರಡು ವರ್ಷಗಳ ನಂತರ ಪ್ರಕಟವಾದ ‘ಜಗದೋದ್ಧಾರನಾ’ ಕಾವಿ ಬಟ್ಟೆಯ ಕಪಟವನ್ನು ತಮ್ಮ ವಿಷಯವನ್ನಾಗಿಸಿಕೊಂಡಿದೆ. ಅಜ್ಞರನ್ನು, ಸುಲಭಶ್ರದ್ಧೆಯ ಜನಗಳನ್ನು, ಕಪಟ ಸನ್ಯಾಸಿಗಳು ಶೋಷಣೆ ಮಾಡುವುದು ಎರಡಕ್ಕೂ ವಿಷಯವಾಗಿದ್ದರೂ ಶೋಷಣೆ ನಡೆಯುವ ಬೇರೆ ಬೇರೆ ರೀತಿಗಳನ್ನು ಈ ಎರಡು ಕಾದಂಬರಿಗಳು ಚಿತ್ರಿಸುತ್ತವೆ.

ಶಿವರಾಮ ಕಾರಂತರು ೨೩೧ ಕೃತಿಗಳನ್ನು ಮಕ್ಕಳಿಗಾಗಿಯೇ ರಚಿಸಿದ್ದಾರೆ. ಇದರಿಂದ ಮಕ್ಕಳ ಬಗ್ಗೆ ಅವರಿಗಿದ್ದ ಆಸಕ್ತಿಯನ್ನು ನಾವು ಅರಿತುಕೊಳ್ಳಬಹುದು. ಇದಲ್ಲದೆ ಮಕ್ಕಳ ಸಾಹಿತ್ಯಕ್ಕೆ [39]"ಕಾರಂತರು ಕೊಟ್ಟಿರುವ ಇನ್ನೂ ಅಮೋಘ ಕೊಡುಗೆಯೆಂದರೆ, ಬಾಲ ಪ್ರಪಂಚ, ವಿಜ್ಞಾನ ಪ್ರಪಂಚ ಮತ್ತು ಪ್ರಾಣಿ ಪ್ರಪಂಚವೆಂಬ ೩ ವಿಶ್ವಕೋಶಗಳು ಸುಮಾರು ೪೦೦ಕ್ಕೂ ಮಿಕ್ಕಿದ ಕ್ರಾಸ್ ಚತುರ್ಥ ಆಕಾರದ ಪುಟಗಳ ಈ ಗ್ರಂಥಗಳು ವಿರಳ ಸ್ವರೂಪದ ಕೃತಿಗಳು, ವಿಚಿತ್ರ ಖಗೋಲ, ನಮ್ಮ ಭೂಕಂಡಗಳು, ಹಿರಿಯ ಕಿರಿಯ ಹಕ್ಕಿಗಳು, ವಿಜ್ಞಾನ ಮತ್ತು ಅಂಧಶ್ರದ್ಧೆ, ಉಷ್ಣವಲಯದ ಆಗ್ನೇಸ್ಯ, ಪ್ರಾಣಿಪ್ರಪಂಚದ ವಿಸ್ಮಯಗಳು, ಮಂಗನ ಕಾಯಿಲೆ ಮತ್ತು ವಿಶಾಲ ಸಾಗರಗಳು ಇವು ಪ್ರೌಢ ಶಾಲೆಯ ಮಟ್ಟದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಸರಳಗನ್ನಡದಲ್ಲಿ ರಚಿಸಲಾಗಿರುವ ವಿಜ್ಞಾನ ಗ್ರಂಥಗಳು."[39]

ಮಕ್ಕಳ ಸಾಹಿತ್ಯದಲ್ಲಿ ಕ್ರಿಯಾತ್ಮಕತೆಗೆ ಸ್ಥಾನವಿರಬೇಕೆಂದು ನಂಬಿದವರು ಕಾರಂತರು. ಹಾಗಾಗಿ ಒಂದೆಡೆಯಿಂದ ಎಳೆಯ ಮನಸ್ಸುಗಳನ್ನು ಸಂಸ್ಕರಿಸುವ ಕೃತಿಗಳನ್ನು, ಇನ್ನೊಂದೆಡೆಯಿಂದ ಅವುಗಳ ಜ್ಞಾನದಾಹವನ್ನು ತಣಿಸುವ ಬರಹಗಳನ್ನು ಅವರು ಪ್ರಸ್ತುತಪಡಿಸಿದರು. [40]"ಯಾವ ಪ್ರಾಯದಲ್ಲಿ ಮಕ್ಕಳಿಗೆ ಏನು ಹೇಳಿದರೆ ತಿಳಿದೀತು ಎಂಬ ಅರಿವಿಲ್ಲದೆ ಬರೆದ ಪುಸ್ತಕಗಳೂ ವ್ಯರ್ಥ. ಕಂಠಪಾಠ ಮಾಡಿ, ಸರಳಾನುವಾದ ಕೇಳಿ, ಸಂಧಿ ವಿಂಗಡಿಸಿ, ವ್ಯಾಕರಣ ಸಿಗಿದು ತೋರಿಸುವ ರೀತಿಗಳೆಲ್ಲ ಮಕ್ಕಳ ಉತ್ಸಾಹವನ್ನು ಕೊಂದು, ಪುಸ್ತಕ ವೈರಾಗ್ಯವನ್ನು ಸಾಧಿಸುವಂತಹ ಶಿಕ್ಷಣದ ಅಪಮಾರ್ಗಗಳು"[40] ಎಂದು ಖಾರವಾಗಿ ಬರೆದಿರುವ ಅವರು ಮಕ್ಕಳ ಆಸಕ್ತಿ, ಅಭಿರುಚಿಗಳನ್ನು ಕುದುರಿಸುವಂತಹ ಪುಸ್ತಕಗಳನ್ನೇ ನೀಡಿದ್ದಾರೆ.

ಮಕ್ಕಳಿಗಾಗಿ 'ಗಜರಾಜ' 'ಢಂಢಂ ಡೋಲು' 'ನರನೋ ವಾನರನೋ' 'ಮಂಗನ ಮದುವೆ' 'ಸೂರ್ಯ ಚಂದ್ರ' 'ಹುಲಿರಾಯನೇ' ಮೊದಲಾದ ಸೃಜನಶೀಲ ಬರೆಹಗಳನ್ನು ಬರೆದಿದ್ದಾರೆ.

# ಅಡಿ ಟಿಪ್ಪಣಿ

18–18 ಶಿವರಾಮ ಕಾರಂತ ಸಾಹಿತ್ಯ ಸಮೀಕ್ಷೆ. ಪುಟ – ೩೦

19–19 ಶಿವರಾಮ ಕಾರಂತ ಪ್ರಯೋಗಶೀಲ. ಪುಟ – ೩೦

20–20 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೩೧

21–21 ಶಿವರಾಮ ಕಾರಂತ ಪ್ರಯೋಗಶೀಲ. ಪುಟ – ೩೧

22–22 ಶಿವರಾಮ ಕಾರಂತ ಪ್ರಯೋಗಶೀಲ. ಪುಟ – ೩೧

23–23 ಶಿವರಾಮ ಕಾರಂತ –ಡಾ। ತಾಳ್ತಜೆ ವಸಂತ ಕುಮಾರ್ ಪುಟ – ೩೧

24–24 ಶಿವರಾಮ ಕಾರಂತ ಪ್ರಯೋಗಶೀಲ. ಪುಟ – ೩೨

25–25 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೩೩

26–26 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೩೫

27–27 ಶಿವರಾಮ ಕಾರಂತ ಪ್ರಯೋಗಶೀಲ. ಪುಟ – ೩೮

28–28 ಶಿವರಾಮ ಕಾರಂತ ಪ್ರಯೋಗಶೀಲ. ಪುಟ – ೩೮

29–29 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೩೮

30–30 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೩೬

31–31 ಶಿವರಾಮ ಕಾರಂತ ಕಾದಂಬರಿ ಪ್ರಪಂಚ. ಪುಟ – ೩೬

32–32 ಶಿವರಾಮ ಕಾರಂತ ಕಥನಕಾರ. ಪುಟ – ೮೩

33–33 ಶಿವರಾಮ ಕಾರಂತ ಬದುಕು–ಬರೆಹ. ಪುಟ – ೫೪

34–34 ಶಿವರಾಮ ಕಾರಂತ ಕಾದಂಬರಿ ಪ್ರಪಂಚ. ಪುಟ – ೩೬

35–35 ಶಿವರಾಮ ಕಾರಂತ ಕಾದಂಬರಿ ಪ್ರಪಂಚ. ಪುಟ – ೩೭

36–36 ಶಿವರಾಮ ಕಾರಂತ ಬದುಕು–ಬರೆಹ ವಿ.ಎಂ.ಇನಾಂದಾರ್. ಪುಟ – ೩೭

37–37 ಶಿವರಾಮ ಕಾರಂತ ಕಥನಕಾರ. ಪುಟ – ೮೬

38–38 ಶಿವರಾಮ ಕಾರಂತ ಬದುಕು–ಬರೆಹ. ಪುಟ – ೫೯

39–39 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೫೭

40–40 ಶಿವರಾಮ ಕಾರಂತ –ಡಾ। ತಾಳ್ತಜೆ ವಸಂತ ಕುಮಾರ್ ಪುಟ – ೧೫೨

# ಅಧ್ಯಾಯ ೪.

## ಡಾ। ಕೆ. ಶಿವರಾಮ ಕಾರಂತರ

## ಪ್ರಮುಖ ಕಾದಂಬರಿಗಳು

## ಡಾ। ಕೆ. ಶಿವರಾಮ ಕಾರಂತರ ಪ್ರಮುಖ ಕಾದಂಬರಿಗಳು

ಕಾರಂತ ಸಾಹಿತ್ಯದ ಪ್ರಮುಖ ವಾಹಿನಿಯೇ ಕಾದಂಬರಿ. 41"ಕನ್ನಡ ಕಾದಂಬರಿ ಪ್ರಕಾರಕ್ಕೆ ಮೊದಲ ಸ್ವತಂತ್ರ ಮತ್ತು ಮಹತ್ವಪೂರ್ಣ ಸಾಮಾಜಿಕ ಕಾದಂಬರಿ ಇಂದಿರಾ ಬಾಯಿ (೧೮೯೯–೧೯೦೦)ಯನ್ನು ನೀಡಿದ ಗುಲುವಾಯಿ ವೆಂಕಟರಾಯರು ದಕ್ಷಿಣಕನ್ನಡ ಜಿಲ್ಲೆಯವರು. ರೋಹಿಣಿ, ವಾಗ್ದೇವಿ ಮುಂತಾದ ಕಾದಂಬರಿಗಳನ್ನು ಸೃಷ್ಟಿಸಿದ ಅಣ್ಣಾಜಿರಾಯರು ಮತ್ತು ಬೋಳಾರ ಬಾಬುರಾಯರು ದಕ್ಷಿಣ ಕನ್ನಡದವರೇ. ಸ್ತ್ರೀಪರ ನಿಷ್ಠೆಯಿಂದ ಕಂಡಿರುವ ಇಂಥ ಸಾಮಾಜಿಕ ಕಳಕಳಿಯ ಕಾದಂಬರಿಗಳು ಕಾರಂತರ ಮನಸ್ಸನ್ನು ತಟ್ಟಿದ್ದರಿಂದ ಅವೇ ಧ್ಯೇಯ ಧೋರಣೆಗಳನ್ನು ಪ್ರತಿಪಾದಿಸುವ ನಿರ್ಭಾಗ್ಯ ಜನ್ಮ, ಸೂಳೆ ಸಂಸಾರ ಮುಂತಾದ ಕಾದಂಬರಿಗಳನ್ನು ಬರೆಯಲು ಪ್ರೇರಣೆಯಾಯಿತು."41

ತಮ್ಮ ಸಾಹಿತ್ಯಿಕ ಬದುಕಿನ ಮೊದಲ ದಶಕಗಳಲ್ಲಿ ಬರೆದ ಪತ್ತೇದಾರಿ ಕಾದಂಬರಿಗಳಿಂದ ತೊಡಗಿ, ಕೊನೆಯ 'ಅಂಟಿದ ಅಪರಂಜಿ'ಯ ವರೆಗೆ ಕಾರಂತರು ಒಟ್ಟು ೪೭ ಕಾದಂಬರಿಗಳನ್ನು ಬರೆದಿದ್ದಾರೆ. 42"ಕಾರಂತರ ಕಾದಂಬರಿಗಳನ್ನು ಕಾಲಾನುಕ್ರಮವಾಗಿ ಜೋಡಿಸಿ, ಅಭ್ಯಾಸ ಮಾಡುವುದು ಕಷ್ಟ ಸಾಧ್ಯವೆನಿಸುತ್ತದೆ. ತಂತ್ರ, ವಸ್ತು, ಆಶಯ, ವಿನ್ಯಾಸಗಳನ್ನು ತಳಹದಿಯಾಗಿಟ್ಟುಕೊಂಡು ಇವುಗಳನ್ನು ವಿಭಜಿಸುವ ವಿಧಾನವು ಹೆಚ್ಚು ಸಮರ್ಪಕವೆನಿಸುತ್ತದೆ."42 ಸೈದ್ಧಾಂತಿಕ ಬದ್ಧತೆಯ ದೃಷ್ಟಿಯಿಂದ ತೀರಾ ವಾಸ್ತವವಾದಿ ಕಾದಂಬರಿಗಳು ಮತ್ತು ವಾಸ್ತವ ಅವಾಸ್ತವಗಳನ್ನು ಸಮ್ಮಿಶ್ರಗೊಳಿಸಿಕೊಂಡ ಕಾದಂಬರಿಗಳೆನ್ನುವ ಎರಡು ಮುಖ್ಯ ಪ್ರವಾಹಗಳನ್ನೂ ಇಲ್ಲಿ ಕಾಣುತ್ತೇವೆ.

43"ಚಾರಿತ್ರಿಕ ಶಿಸ್ತನ್ನು ಕಾಪಾಡುವ ದೃಷ್ಟಿಯಿಂದ ಕಾರಂತರ ಎರಡು ಪತ್ತೇದಾರಿ ಕಾದಂಬರಿಗಳಾದ 'ವಿಚಿತ್ರ ಕೂಟ' ಮತ್ತು 'ಭೂತ' ಕೃತಿಗಳನ್ನು ಇಲ್ಲಿ ಹೆಸರಿಸಬೇಕಾಗಿದೆ."43

44"ಕಾರಂತರ ಮೊದಲ ಕಾದಂಬರಿ ವಿಚಿತ್ರ ಕೂಟ ವಸ್ತುವಿನ ದೃಷ್ಟಿಯಿಂದ ಮಹತ್ವದ ಕಾದಂಬರಿಯಲ್ಲದಿದ್ದರೂ ಕಾರಂತರ ಕಥನಶೈಲಿ ಮೊದಲ ಬರಹದಲ್ಲೇ ಆಕರ್ಷಕವಾಗಿದ್ದುದನ್ನು ವಿಮರ್ಶಕರು ಕಡೆಗಣಿಸುವಂತಿಲ್ಲ."44 ಮಾತ್ರವಲ್ಲ ಅದೊಂದು ಪತ್ತೇದಾರಿ ಕಥೆಯಾಗಿರುವುದರಿಂದ, ಪತ್ತೇದಾರಿ ಕಥೆಯೊಂದು ಹೇಗಿರಬೇಕೋ, ಹೇಗಿರುತ್ತದೋ ಆ ಎಲ್ಲಾ ಲಕ್ಷಣಗಳನ್ನು ಈ ಕಾದಂಬರಿ ಹೊಂದಿರುವುದರಿಂದ ಇದೊಂದು ಯಶಸ್ವೀ ಬರಹವೆಂದು ಪರಿಗಣಿಸಲ್ಪಡಬೇಕಾದ ಅಗತ್ಯವಿದೆ.

೧೯೨೫ರಲ್ಲಿ ಪ್ರಕಟವಾದ 'ಭೂತ' ಕಾದಂಬರಿಯು ಮೂಢನಂಬಿಕೆಗಳ ಜಾಗದಲ್ಲಿ ವೈಜ್ಞಾನಿಕ ತಿಳಿವನ್ನು ಸ್ಥಾಪಿಸಬೇಕೆನ್ನುವ ಕಾರಂತರ ಕಳಕಳಿಯನ್ನು ತಿಳಿಸಿ ಹೇಳುತ್ತದೆ. ಭೂತ ಪ್ರೇತಗಳು ನಿಜವೆಂದು ನಂಬಿ, ಭಯವಿಹ್ವಲರಾಗುವ ಜನರಿಗೆ; ವೈಜ್ಞಾನಿಕ ಪ್ರಯೋಗಗಳ ಮೂಲಕ ತೋರಿಸಿಕೊಟ್ಟು ಅಂಥ ಭಯ ನಿವಾರಣೆ ಸಾಧ್ಯವೆಂಬುದನ್ನು ಈ ಕಾದಂಬರಿಯ ಮೂಲಕ ಕಾರಂತರು ತೋರಿಸಿಕೊಟ್ಟಿದ್ದಾರೆ.

45"೧೯೨೫ರಲ್ಲಿ ವಸಂತ ಪತ್ರಿಕೆಯಲ್ಲಿ ಪ್ರಕಟಗೊಂಡ ಕ್ರೌನ್ ಚತುರ್ಥ ಆಕಾರದ ೪೯ ಪುಟಗಳ ಕಾರಂತರ ಸಾಮಾಜಿಕ ಕಾದಂಬರಿಯೇ ನಿರ್ಭಾಗ್ಯ ಜನ್ಮ"45 ವೇಶ್ಯಾವೃತ್ತಿಯಿಂದಾಗುವ ಸಾಮಾಜಿಕ ಹಾನಿಯನ್ನು ತಿಳಿಸುವ ಈ ಕಥೆ ಸಮಾಜ ಸುಧಾರಣೆಯ ಧ್ಯೇಯೋದ್ದೇಶದಿಂದ ಕೂಡಿದೆ. ದೇವದೂತರು ಎಂಬ ಕಾದಂಬರಿ ಕಟುವಾದ ವಿಡಂಬನೆ ಹಾಸ್ಯದ ಲೇಪದಿಂದ ಕೂಡಿದ್ದು ನಮ್ಮ ಸಾಮಾಜಿಕ ಲೋಪದೋಷಗಳ ಕುರಿತ ವ್ಯಂಗ್ಯ ಚಿತ್ರಣವನ್ನು ಒಳಗೊಂಡಿದೆ. 46"೧೯೩೫ರಲ್ಲಿ ಕಾರಂತರು ಬರೆದ 'ದೇವದೂತರು' ಕಾದಂಬರಿಯು ಜನತೆಯ ಮತಿಯ ಜಡತ್ವವನ್ನು ತನ್ನ ಬೆಚ್ಚನೆಯ ಶಾಖವಾದರೂ ಕರಗಿಸುತ್ತದೇನೋ ಎನ್ನುವ ಆಶಯವನ್ನು ಹೊಂದಿದೆ."46

'ವಸಂತ'ದಲ್ಲಿ ಪ್ರಕಟವಾದ ಸೂಳೆಯ ಸಂಸಾರ ಕಾರಂತರ ಮೊದಲ ತುಸು ಗಂಭೀರ ಸ್ವರೂಪದ ಕಾದಂಬರಿ. [47]"ಸಾಮಾಜಿಕ ಜೀವನದಲ್ಲಿ ತೊಡಗಿದ ಮನುಷ್ಯನ ನಡೆನಡಾವಳಿಗಳನ್ನು ಕುರಿತ ವಿಮರ್ಶೆ ವಿಡಂಬನೆಗಳನ್ನೊಳಗೊಂಡ ಕಾದಂಬರಿ ಸೂಳೆಯ ಸಂಸಾರ"[47] ವಿಧವೆಯರನ್ನು ಸಮಾಜ ಅಮಾನವೀಯ ರೀತಿಯಲ್ಲಿ ನಡೆಸಿಕೊಳ್ಳುವದರಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಕಾದಂಬರಿಯಲ್ಲಿ ತೀಕ್ಷ್ಣವಾದ, ತೀವ್ರವಾದ ಸ್ಪಂದನವಿದೆ.

ಕಾರಂತರ ಕಾದಂಬರಿಗಳಲ್ಲಿಯೇ ಜನಪ್ರಿಯತೆಯ ಉತ್ತುಂಗ ಶಿಖರಕ್ಕೇರಿದ ಕಾದಂಬರಿ 'ಚೋಮನ ದುಡಿ' ಇದನ್ನು ೧೯೩೩ರಲ್ಲಿ ಪ್ರಕಟಿಸಿದರು. [48]"ಚೋಮನ ದುಡಿಯಲ್ಲಿ ಯಾವ ಕೃತಕೃತೆಯ ಸುಳಿವೂ ಇಲ್ಲದೆ ನಿರೂಪಿಸಲಾದ ಅನುಭವದ ನೇರ ವಾಸ್ತವತೆಯೇ ಅದರ ಶಕ್ತಿಯಾಗಿದೆ."[48] ಪುತ್ತೂರು ತಾಲೂಕಿನ ಆರ್ಥಿಕ ಸಮೀಕ್ಷೆಯ ಕೆಲಸದಲ್ಲಿ ತೊಡಗಿದ್ದಾಗ ಬಂದ ಪ್ರತ್ಯಕ್ಷಾನುಭವ ಬರೆದ ಕಥೆಗೆ ಪ್ರಾಮಾಣ್ಯವನ್ನು ಒದಗಿಸುತ್ತದೆ. ಅಸ್ಪೃಶ್ಯನೊಬ್ಬನ ದುರಂತವನ್ನು ಚಿತ್ರಿಸುವ ಈ ಕಾದಂಬರಿ ನಲವತ್ತಾರು ವರ್ಷಗಳ ಹಿಂದೆ ಬರೆದುದಾದರೂ ಓದುಗನನ್ನು ಅಲುಗಾಡಿಸುವ ಅದರ ಶಕ್ತಿ ಕುಗ್ಗಿಲ್ಲ.

ಕಾರಂತರ ಇನ್ನೊಂದು ಪ್ರಸಿದ್ಧ ಕಾದಂಬರಿ ಸರಸಮ್ಮನ ಸಮಾಧಿ. [49]"೧೯೩೭ರಲ್ಲಿ ಪ್ರಕಟವಾದ "ಸರಸಮ್ಮನ ಸಮಾಧಿ" ದಾಂಪತ್ಯ ಜೀವನದಲ್ಲಿಯ ವಿರಸಗಳ ಚಿತ್ರವನ್ನು ಕೊಡುತ್ತದೆ."[49] ಸತಿಯೊಬ್ಬಳ ಪತಿಯಾದವನು ಮಡಿದಾಗ, ಅವನ ಚಿತೆಗೆ ಬಲವಂತವಾಗಿ ನೂಕಲ್ಪಟ್ಟು ಅದೇ ಜನರಿಂದ ಗುಡಿ ಕಟ್ಟಿಸಿಕೊಂಡು 'ಮಹಾಸತಿ ಎನಿಸಿಕೊಂಡರೂ ದೇಹದ ಬಯಕೆಯಿಂದ ಅತೃಪ್ತಿಗೊಂಡು ಪ್ರೇತಸ್ವರೂಪಿಯಾಗಿ ಅಲೆಯುತ್ತಿದ್ದಾಳೆ, ಎಂಬ ವಿಡಂಬನೆ ಈ ಕಾದಂಬರಿಯ ಕಥಾವಸ್ತು.

೧೯೪೧ರಲ್ಲಿ ಕಾರಂತರು ಬರೆದಿದ್ದ 'ಮರಳಿ ಮಣ್ಣಿಗೆ' ಧಾರವಾಡದ ಮನೋಹರ ಗ್ರಂಥಮಾಲೆಯಲ್ಲಿ ಧಾರವಾಹಿಯಾಗಿ ಮೊದಲು ಬೆಳಕು ಕಂಡು, ಬಳಿಕ ಪುಸ್ತಕ ರೂಪದಲ್ಲಿ ಪ್ರಕಟವಾಯಿತು. [50]"ಆಂಗ್ಲ ಕಾದಂಬರಿಕಾರ್ತಿ ಪರ್ಲ್‌ಬಕ್ ಎಂಬಾಕೆಯ ಗುಡ್ ಅರ್ಥ್ ಕಾದಂಬರಿಯನ್ನೋದಿ, ಸ್ಫೂರ್ತಿಗೊಂಡು ರಚಿಸಿದ ಈ ಕಾದಂಬರಿ ಮೂರು ತಲೆಮಾರುಗಳ ಕಥಾನಕವನ್ನು ಹೆಣೆದಿದ್ದರೂ ಕಥೆ ಸಂಪೂರ್ಣವಾಗಿ ಕಾರಂತರು ಹುಟ್ಟಿದ ಕೋಟದ ಮಣ್ಣಿನ ವಾಸನೆಯಿಂದ ಕೂಡಿದೆ."[50]

ಕಾದಂಬರಿ ಕ್ಷೇತ್ರದಲ್ಲಿ ಕಾರಂತರ ಹೆಸರನ್ನು ಚಿರಸ್ಥಾಯಿಗೊಳಿಸಿದ್ದ ಕೀರ್ತಿ ಮರಳಿ ಮಣ್ಣಿಗೆಯದು. ದಕ್ಷಿಣ ಕನ್ನಡ ಜಿಲ್ಲೆಯ ಪಡುಗಡಲ ತೀರದ ಕೋಡಿ ಎಂಬ ಹಳ್ಳಿಯ ಬಡ ಬ್ರಾಹ್ಮಣ ಮನೆತನದ ಮೂರು ತಲೆಮಾರುಗಳಲ್ಲಿ ಕಂಡ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳೇ ಕತೆಯ ಮುಖ್ಯ ವಸ್ತು. ರಾಷ್ಟ್ರೀಯ ಚಳುವಳಿಯ ಕಾವು ಈ ಕತೆಯ ಮೂರನೇ ತಲೆಮಾರಿನ ಚಿತ್ರಣದಲ್ಲಿ ಕಾಣಿಸಿಕೊಂಡಿದೆಯಲ್ಲದೆ ಈ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಕಾರಂತರು ತಾವೇ ಬಂದು ಪ್ರಮುಖ ಪಾತ್ರವಾಗಿ ಈ ಕಾದಂಬರಿಯಲ್ಲಿ ಕಾಣಿಸಿಕೊಂಡಿದ್ದಾರೆ.

[51]"೧೯೪೩ರಲ್ಲಿ ಮನೋಹರ ಗ್ರಂಥಮಾಲೆಯಲ್ಲಿ ಧಾರವಾಹಿಯಾಗಿ ಪ್ರಕಟವಾದ 'ಬೆಟ್ಟದ ಜೀವ' ಕಾರಂತರ ಇನ್ನೊಂದು ಪ್ರಸಿದ್ಧ ಕಾದಂಬರಿ."[51] ಮನುಷ್ಯ ತನ್ನ ಅನ್ನಕ್ಕಾಗಿ ನಿಸರ್ಗದೊಂದಿಗೆ ನಡೆಸಿದ ಹೋರಾಟದ ಕತೆಯನ್ನು ಬಿತ್ತರಿಸುವ ಕಾದಂಬರಿ ಹೇಳಿಕೊಳ್ಳುವಂತಹ ಕತೆಯೇನೂ ಇಲ್ಲದಿರುವ ಈ ಕಾದಂಬರಿ ವಿಶಿಷ್ಟ ನಿರೂಪಣಾ ಶೈಲಿಯ ಮೂಲಕ ಓದುಗನನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದೆ.

ದಾಂಪತ್ಯ ವಿರಸದ ಇನ್ನೊಂದು ಮುಖವನ್ನು 'ಹೆತ್ತಳಾ ತಾಯಿ' (೧೯೪೫) ಕಾದಂಬರಿಯಲ್ಲಿ ಕಾರಂತರು ಚಿತ್ರಿಸಿದ್ದಾರೆ. ೧೯೪೫ರಲ್ಲಿ ಪ್ರಕಟವಾಗಿದ್ದ ಮುಗಿದ ಯುದ್ಧ ಅಧ್ಯಾಪಕನೊಬ್ಬನ ಬಡತನದ ಚಿತ್ರ. ಬಾಳಿನ ಬವಣೆಗಳು, ಮನೋದೈಹಿಕ ಸಂಘರ್ಷ, ಅನಾರೋಗ್ಯ, ಪೀತಿ ತುಂಬಿದ ಸಾಂಸಾರಿಕ ಬದುಕು ಇವೆಲ್ಲ ಕೊನೆಗೊಂದು ದಿನ ಸಾವಿನೊಂದಿಗೆ ಪರ್ಯವಸಾನವಾಗುವುದನ್ನು ಮನಮುಟ್ಟುವಂತೆ ಚಿತ್ರಿಸಿರುವ ಕಾದಂಬರಿ.

52"ವಸ್ತುವಿನ ಮಾನದಿಂದ ರಾಜಕೀಯ ಕಾದಂಬರಿಯ ವರ್ಗಕ್ಕೆ ಸೇರುವ "ಗೊಂಡಾರಣ್ಯ" ಕೃತಿಯಲ್ಲಿ ಕಾರಂತರು ವ್ಯಂಗ್ಯಾಭಿವ್ಯಕ್ತಿಯ ಕ್ರಮವನ್ನು ಆಯ್ದುಕೊಂಡಿದ್ದಾರೆ."52 ಒಂದು ದೃಷ್ಟಿಯಿಂದ ಕಾರಂತರು ಪ್ರಕೃತಿಯಷ್ಟೆ ನಿಗೂಢರೂ, ಅನೂಹ್ಯರೂ ಆಗಿದ್ದರೆನ್ನಬೇಕು. ಕಾರಂತರದು ಶೀಘ್ರವಾಗಿ ಕೋಪಿಸಿಕೊಳ್ಳುವ ಸ್ವಭಾವವೆಂದುಕೊಳ್ಳುವಾಗಲೇ ಮುಕ್ತವಾಗಿ ನಗುವ ಅವರ ಮುಖ ಎದುರಾಗುತ್ತದೆ. ಅವರದು ನಿಷ್ಠುರವಾದ ವಾಸ್ತವ ಪ್ರಜ್ಞೆಯ ಚಿಂತನ ವಿಧಾನವೆನ್ನುವ ನಿಲುವಿಗೆ ತಲುಪುವಾಗ ಅತೀಂದ್ರಿಯ ಅನುಭವಗಳನ್ನೇ ಲಕ್ಷಿಸುವ ಅವರ ಬರಹಗಳು ಕಾಣಿಸುತ್ತವೆ.

53"೬೨೩ ಪುಟಗಳ ಬೃಹತ್ ಕಾದಂಬರಿ ಔದಾರ್ಯದ ಉರುಳಲ್ಲಿ (೧೯೪೭) ರಾಜಕೀಯ ಕಾದಂಬರಿಯಾಗಿದ್ದು ವಿಮರ್ಶಾ ವಲಯದಲ್ಲಿ ಬಹುವಾಗಿ ಚರ್ಚಿಸಲ್ಪಟ್ಟ ಕಥಾನಕ"53 ಭಾರತ ದೇಶದ ಸ್ವಾತಂತ್ರ್ಯ ಚಳವಳದ ಹಲವು ಮುಖಗಳನ್ನು ಚಳವಳದ ನೇತಾರರಲ್ಲಿ ಅನೇಕರ ದ್ವಿಮುಖ ನೀತಿಯನ್ನು ಸಮರ್ಥವಾಗಿ ಬಿಂಬಿಸುವಲ್ಲಿ ಕಾದಂಬರಿ ಸಫಲವಾಗಿದೆ.

ಮೊಗ ಪಡೆದ ಮನ (೧೯೪೮) ನೃತ್ಯ, ನಾಟಕಗಳ ಗೀಳನ್ನು ಅಂಟಿಸಿಕೊಂಡ ಕಲಾವಿದನೊಬ್ಬನ ಕಲಾ ಜೀವನ ಮತ್ತು ಭಾವ ಜೀವನದ ಪರಿಚಯವನ್ನು ನೀಡುತ್ತದೆ. ಕಲಾಸಕ್ತಿಗೆ ಸಂಬಂಧಿಸಿದ ಮನಸ್ಸಿನ ಭಾವನೆಗಳು ಕಾರ್ಯಗತವಾಗುವ ಸೂಚನೆಯೊಂದಿಗೆ ಕತೆ ಮುಕ್ತಾಯವಾಗುತ್ತದೆ.

54"೧೯೪೮ರಲ್ಲಿ ಪ್ರಕಟವಾದ 'ಸನ್ಯಾಸಿಯ ಬದುಕು' ಸಹಾ ವಿಮರ್ಶಕರ ಗಮನ ಸೆಳೆದಿರುವ ಕಾದಂಬರಿ. ಸೋಗಿನ ಸನ್ಯಾಸತನಕ್ಕಿಂತ ಮಾನವೀಯ ಅಂತಃಕರಣದ ಸಾಂಸಾರಿಕ ಬದುಕೇ ಸಾರ್ಥಕ ಮತ್ತು ಸುಂದರ ಎಂಬ ಸಂದೇಶವನ್ನು ಈ ಕಾದಂಬರಿ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ."54 'ಸನ್ಯಾಸಿ ಬದುಕಿನ' ಕಾದಂಬರಿ ನಂತರ ಹನ್ನೆರಡು ವರ್ಷಗಳ ನಂತರ ಪ್ರಕಟವಾದ 'ಜಗದೋದ್ಧಾರನಾ' ಕಾವಿ ಬಟ್ಟೆಯ ಕಪಟವನ್ನು ತನ್ನ ವಿಷಯವನ್ನಾಗಿಸಿಕೊಂಡಿದೆ.

೧೯೪೯ರಲ್ಲಿ ಪ್ರಕಟವಾದ ಕರುಳಿನ ಕರೆ ಸಾಂಸಾರಿಕ ಬದುಕಿನ ಹಲವು ಮುಖಗಳ ಸಂಘರ್ಷ ಸುಖ ದುಃಖಗಳನ್ನು ಚಿತ್ರಿಸಿ ತಾಯಿ ಮಕ್ಕಳ ಮಿಲನದೊಂದಿಗೆ ಸುಖಾಂತವಾಗುವ ಕಥಾನಕ.

55"೧೯೫೧ರಲ್ಲಿ ಪ್ರಕಟವಾದ ಕುಡಿಯರ ಕೂಸು ಮಲೆ ಕುಡಿಯರ ಜೀವನದ ರೀತಿ, ರಿವಾಜು, ಕಷ್ಟ, ಸುಖ, ಪ್ರೀತಿ, ದ್ವೇಷ, ಧಾರ್ಮಿಕ ನಂಬಿಕೆ, ಕಟ್ಟುಕಟ್ಟಲೆಗಳ ಬಗ್ಗೆ ಸುಂದರವಾಗಿ ಹೆಣೆದೊಂದು ಕಥಾನಕ"55 ೧೯೭೮ರಲ್ಲಿ ಕಾರಂತರು ಸ್ವಂತ ನಿರ್ದೇಶನದಲ್ಲಿ ಈ ಕಾದಂಬರಿಯ ಕಥಾನಕವನ್ನು ಬಳಸಿಕೊಂಡು 'ಮಲೆಯ ಮಕ್ಕಳು' ಎಂಬ ಚಲನಚಿತ್ರವನ್ನು ರಚಿಸಿದ್ದಾರೆ. ಬುಡಕಟ್ಟು ಜನಾಂಗವೊಂದರ ಸುತ್ತ ಹೆಣೆದಿರುವ ಈ ಕತೆ ಅಂತರಾಷ್ಟ್ರೀಯ ಮಾನವಕುಲ ತಜ್ಞರ ಗಮನವನ್ನು ಸೆಳೆದಿರುವುದೊಂದು ವಿಶೇಷ.

[56]“ಚಿಗುರಿದ ಕನಸು (೧೯೫೧) ಮುಂಬಯಿ, ನವದೆಹಲಿಗಳಂತಹ ಪಟ್ಟಣಗಳಲ್ಲಿ ಜೀವಿಸುತ್ತಿದ್ದರೂ ಹಳ್ಳಿಯ ಬದುಕಿನ ಕುರಿತು ಆಕರ್ಷಣೆ ತಳೆದಿದ್ದ ಕಾಡು, ಗುಡ್ಡ, ಜಲಪಾತ, ತೆಂಗು, ಕಂಗಿನ ತೋಟ, ಗದ್ದೆ, ಬೇಸಾಯಗಳ ಕುರಿತು ವಿಶೇಷ ಬಲವನ್ನು ಹೊಂದಿದ್ದ ವಿದ್ಯಾವಂತ ತರುಣ ಶಂಕರನೆಂಬಾತ ಬಂಗಾಡಿ ಎಂಬ ಹಳ್ಳಿಯಲ್ಲಿ ನೆಲೆಸಿ, ಭಾರೀ ಕಷ್ಟಪಟ್ಟು ಕಾಡಿನಂತಾಗಿದ್ದ ಭೂಮಿಯನ್ನು ಹಸನು ಮಾಡಿ ತಾನು ಗಳಿಸಿದ್ದ ವೈಜ್ಞಾನಿಕ ಜ್ಞಾನವನ್ನು ಪ್ರಯೋಗಿಸಿ ಕೃಷಿಯಲ್ಲಿ ತೊಡಗಿ ಪ್ರಕೃತಿಯ ವಿಕೋಪದ ನಡುವೆಯೂ ಭೂಮಿಯನ್ನು ಹಸನಾಗಿಸಿದ ಸಾಹಸಮಯ ಕಥಾನಕವನ್ನೊಳಗೊಂಡ ಕಾದಂಬರಿ.”[56]

೧೯೫೨ರಲ್ಲಿ ಪ್ರಕಟವಾದ ಜಾರುವ ದಾರಿಯಲ್ಲಿ ತನ್ನ ಬದುಕಿನ ಪಯಣ ಸಾಗುತ್ತಿದ್ದಾಗಲೂ ತನ್ನ ಆದರ್ಶಗಳನ್ನು ಬಲಿಕೊಡದೆ ಅಂಥ ಆದರ್ಶವನ್ನು ಆದರ್ಶವೆಂದು ತೋರಿಸಿಕೊಳ್ಳದೆ ತನ್ನ ನಡತೆಯ ಅಂಗವಾಗಿ ಆಚರಣೆಯಲ್ಲಿ ತಂದುಕೊಂಡು ಕೊನೆಯ ತನಕವೂ ಆದರ್ಶಮಯವಾದ ಬದುಕನ್ನು ಬಾಳಿದ್ದ ಶಿವಪ್ಪನೆಂಬ ಕಥಾನಾಯಕನ ಸುತ್ತ ಹೆಣೆದಿರುವ ಕಾದಂಬರಿ [57]“ನೈತಿಕ ಮಟ್ಟದಲ್ಲಿ ಅಧಃಪಾತದ ದಾರಿಯಲ್ಲಿ ಜಾರುತ್ತಿರುವ ಒಂದು ಊರಿನ ಇದೇ ಜನಸಮುದಾಯದ ಚಿತ್ರವನ್ನು ಕೊಡುವುದರ ಜೊತೆಗೆ ಹಾಗೇ ಹದಗೆಡುತ್ತಿದ್ದ ಜೀವನದ ಮಧ್ಯದಲ್ಲಿಯೇ ಹಟದಿಂದೆಂಬಂತೆ ತನ್ನ ಮಾನವೀಯತೆಯನ್ನು ಉಳಿಸಿಕೊಂಡು ಬದುಕಿದ ಒಂದು ವ್ಯಕ್ತಿಯನ್ನು ಚಿತ್ರಿಸುವುದು ಕಾದಂಬರಿಯ ಉದ್ದೇಶವಾಗಿದೆ.”[57]

[58]“೧೯೫೩ರಲ್ಲಿ ಪ್ರಕಟವಾದ ‘ಭತ್ತದ ತೊರೆ’ ಎಂಬ ಕಾದಂಬರಿ ಮಗುವಿನ ಹಂಬಲದಿದಂದ ಕಂಗಾಲಾದ ಹೆಣ್ಣಿನ ಪಾಡನ್ನು ತಿಳಿಸುತ್ತದೆ. ನಂದಿನಿ, ಆಶಾ, ವಿನತೆ, ಮಂಜುಳೆ, ಮಾಧವಿ, ಊರ್ವಶಿ, ಮೊದಲಾದ ಹೆಣ್ಣು ಮಕ್ಕಳ ಬಾಳಿನ ಸುತ್ತ ಹೆಣೆದಿರುವ ಕಥಾನಕವಿದು.”[58] ಹೆಣ್ಣು ಗಂಡಿನ ಪ್ರೀತಿ ಪ್ರೇಮಗಳಲ್ಲಿ ಅಡಗಿರುವ ಮೋಸ, ವಂಚನೆ, ನಟನೆ, ಸ್ವೇಚ್ಛಾಚಾರಗಳ ವಾಸ್ತವಿಕ ಚಿತ್ರಣ ಕಲಾತ್ಮಕವಾಗಿ ಈ ಕಾದಂಬರಿಯಲ್ಲಿ ಬಿಚ್ಚಿಕೊಂಡಿದೆ.

ಸಮೀಕ್ಷೆ ೧೯೫೬ರಲ್ಲಿ ಪ್ರಕಟವಾಯಿತು. ಕಾಲೇಜು ಕಲಿಯುತ್ತಿದ್ದ ಹುಡುಗರು ಒಂದಲ್ಲ ಒಂದು ಕನಸನ್ನು ಹೊತ್ತುಕೊಂಡು ಆದರ್ಶವಾದಿಗಳಾಗಿರುತ್ತಾರೆ. ಮುಂದೆ ಅವರೆಲ್ಲ ತಂತಮ್ಮ ಬದುಕನ್ನು ರೂಪಿಸಿಕೊಳ್ಳತ್ತಾರೆ. ಅಂತೆಯೇ ಕಥಾನಾಯಕ ಶ್ರೀನಿವಾಸನೂ ತನ್ನ ಬದುಕನ್ನು ರೂಪಿಸಿಕೊಳ್ಳುತ್ತಾನೆ. ಅವನಿಗೆ ತನ್ನ ಸಹಪಾಠಿ ಗೆಳೆಯರು ತಂತಮ್ಮ ಆದರ್ಶಗಳನ್ನು ಯಾವ ರೀತಿಯಲ್ಲಿ ಕಾರ್ಯರೂಪಕ್ಕೆ ತಂದಿದ್ದಾರೆಂಬುದನ್ನು ನೋಡುವ ಕುತೂಹಲವಾಗಿ ಅವರೆಲ್ಲರ ಜೀವನವನ್ನು ಪರಿಶೀಲಿಸುತ್ತಾನೆ. ಅನೇಕ ವ್ಯಕ್ತಿಗಳ ಜೀವನದರ್ಶನ ಅವನಿಗುಂಟಾಗುತ್ತದೆ. ಅವನು ನಡೆಸಿದ್ದ ಬಾಳಿನ ಸಮೀಕ್ಷೆಯಲ್ಲಿ ಜೀವನದ ಹೊಳ್ಳು, ಜಳ್ಳುಗಳ ಕಲ್ಪನೆ ಅವನ ಮನಸ್ಸಿಗೆ ಸ್ಪಷ್ಟವಾಗುತ್ತದೆ.

[59]"ಒಡಹುಟ್ಟಿದವರು ಕಾದಂಬರಿಯ ಬಂಧದೊಳಗೇ ಕಾರಂತರು ಇಬ್ಬರು ಅಕ್ಕ ತಂಗಿಯರ ದಾಂಪತ್ಯದ ಸೋಲು ಗೆಲುವುಗಳನ್ನು ಅಕ್ಕ ಪಕ್ಕಗಳಲ್ಲಿಟ್ಟು ತೋರಿಸುತ್ತಾರೆ."[59] ಇದರಲ್ಲಿ ಬರುವ ವಾಸಂತಿ ಸೇವಂತಿಯರಿಬ್ಬರ ಬದುಕುಗಳಲ್ಲೂ ಸಮಸ್ಯೆಗಳಿವೆ. [60]"ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ್ದರೂ ತದ್ವಿರುದ್ಧವಾದ ಗುಣಶೀಲಗಳನ್ನು ಬೆಳೆಯಿಸಿಕೊಂಡು ತಂತಮ್ಮ ಸಾಂಸಾರಿಕ ಬದುಕಿಗೆ ಚೆಲುವನ್ನೋ, ಅಸಹ್ಯವನ್ನೋ ತಂತಮ್ಮ ನಡತೆಗಳ ಕಾರಣದಿಂದಾಗಿಯೇ ಸೃಷ್ಟಿಸಿಕೊಂಡ ವಾಸಂತಿ ಮತ್ತು ಶೇವಂತಿ ಎಂಬ ಅಕ್ಕ ತಂಗಿಯರ ಸುತ್ತ ಸುತ್ತ ಹೆಣೆದಿರುವ ಕಥಾನಕ ಒಡಹುಟ್ಟಿದವರು."[60]

ಶೇವಂತಿಯ ಸಮಸ್ಯೆಗಳಿಗೆ ಅವಳ ತಿಳಿವಿನ ಮಿತಿಗಳು, ಬದುಕಿನ ಸರಳೀಕೃತ ನಿರ್ವಚನವನ್ನಷ್ಟೇ ಆಯುವ ಸ್ವಭಾವ ಹಾಗೂ ಸ್ತ್ರೀತ್ವದ 'ಅಹಂ'ಗಳು ಕಾರಣವಾಗುತ್ತವೆ.ವಾಸಂತಿಗಾದರೆ ಗಂಡನ ಹುಂಬತನ, ಅನ್ಯಾಕರ್ಷಣೆ, ಧನದಾಹಗಳೇ ಮುಂತಾದ ಮಿತಿಗಳನ್ನು ನಿವಾರಿಸಿಕೊಳ್ಳುವ ಸವಾಲುಗಳಿವೆ.

[61]"೧೯೫೭ರಲ್ಲಿ ಪ್ರಕಟವಾದ ನಂಬಿದವರ 'ನಾಕ ನರಕ' ಕಾದಂಬರಿ ಧಾರ್ಮಿಕ ರೀತಿ ರಿವಾಜು, ಜಾತಿ, ಧರ್ಮ, ಮೇಲ್ಜಾತಿ, ಕೀಲ್ಜಾತಿ, ಮುಂತಾದ ಸಾಮಾಜಿಕ ಪದ್ಧತಿಗಳನ್ನು ರೂಢಿಸಿಕೊಂಡು ಬೆಳೆದಿದ್ದ ಬ್ರಾಹ್ಮಣ ಕುಟುಂಬವೊಂದರ ಹೆಣ್ಣ ಮಗಳನ್ನು ಮೋಸದಿಂದ ಕೆಳಗಿನ ಜಾತಿಯವನೊಬ್ಬನಿಗೆ ಮದುವೆ ಮಾಡಿ ಕೊಟ್ಟಾಗ ಆಕೆಗೆ ಆ ವಿಷಯ ತಿಳಿದು ಬಂದಾಗ ಉಂಟಾದ ಮಾನಸಿಕ ಆಘಾತದ ಪರಿಣಾಮಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ ಕಾದಂಬರಿ."[61]

[62]"೧೯೫೫ರಲ್ಲಿ 'ಕರ್ಮವೀರ'ದಲ್ಲಿ ಧಾರವಾಹಿಯಾಗಿ ಬೆಳಕು ಕಂಡ ಜಗದೋದ್ಧಾರ......ನಾ ವಿಡಂಬನಾತ್ಮಕ ಶೈಲಿಯ ಕಾದಂಬರಿ"[62] ದೇವರು ಧರ್ಮಗಳ ಹೆಸರಿನಲ್ಲಿ ಜನರು ಬರೇ ನಂಬಿಕೆಯ ಅನುರಕ್ತಿಗೊಳಗಾಗಿ ವಿಚಾರಹೀನತೆಯಿಂದ ಸನ್ಯಾಸಿಗಳನ್ನು, ಸಾಧುಸಂತರೆನಿಸಿಕೊಂಡವರನ್ನು ಅನುಕರಿಸಿ ಮೋಸ ಹೋಗುವ ಚಿತ್ರಣ ಈ ಕಾದಂಬರಿಯಲ್ಲಿದೆ.

[63]"ಜಗದೋದ್ಧಾರ.....ನಾ'ದಲ್ಲಿಯ ಸನ್ಯಾಸಿ ನೀಚನಾದವ. ಆತ ಮೋಸ ಮಾಡುವ ಜನಗಳ ಸಂಖ್ಯೆ ದೊಡ್ಡದಾಗಿದ್ದಂತೆ ಆತನಿಂದ ಒದಗುವ ಅಪಾಯಗಳ ಸ್ವರೂಪವೂ ಗಂಭೀರ."[63] ತನ್ನ ಸ್ವಾರ್ಥ ಲಾಭಗಳಿಗಾಗಿ ಬುದ್ಧಿಪೂರ್ವಕವಾಗಿ ಕುಟಿಲ ಸಂಚುಗಳಲ್ಲಿ ತೊಡಗಿ ಕೆಡಕನ್ನುಂಟುಮಾಡುವವ ಎಂದಿಗೂ ಬೇರೆಯವರನ್ನು ಮೋಸ ಮಾಡುವುದರಲ್ಲಿ ನಿಷ್ಣಾತನಾದ ಆತ ಮೋಸಕ್ಕೆ ಬಲಿಯಾಗದ ಧೂರ್ತ ಬುದ್ಧಿಯವ.

[64]"ಶನೀಶ್ವರನ ನೆರಳಲ್ಲಿ (೧೯೬೦) ವನಜೀವನದ ಕತೆ. ಕಾನನದ ದಟ್ಟಣೆಯಲ್ಲಿ ಬೆಳೆಯುವ ಮರಗಳಲ್ಲಿ ಸ್ಪರ್ಧೆ ಇರುವಂತೆ ದಟ್ಟವಾದ ಕಾಡಿನ ತಪ್ಪಲಿನಲ್ಲಿರುವ ನೂರೊಕ್ಕಲು ಗ್ರಾಮದಲ್ಲಿ ವಾಸಿಸುತ್ತಿದ್ದ ಜನಗಳ ಬದುಕಿನ ಹೋರಾಟದ ಕತೆ."[64] ನಾಗರಿಕತೆಯ ಸೋಂಕಿಲ್ಲದ ಕಾಡಿನ ಕೊಂಪೆಯೊಂದರ ಹಳ್ಳಿಯ ಜನಜೀವನದ ಬದುಕಿನ ಮುಖ್ಯ ಸಮಸ್ಯೆಯಾದ ಅನ್ನಕ್ಕೆ ಸಂಬಂಧಿಸಿದ ಆಸ್ತಿಯ ಕಲಹವೇ ಪ್ರಧಾನ ವಸ್ತುವಾಗಿದ್ದು ಆ ಕಲಹದ ನಾನಾ ಮುಖಗಳ ಪರಿಚಯವನ್ನು ಇದು ಕೊಡುತ್ತದೆ.

೧೯೬೦ರಲ್ಲಿ ಪ್ರಕಟವಾದ ಅಳಿದ ಮೇಲೆ ಕಾರಂತರ ಪ್ರಸಿದ್ಧ ಕಾದಂಬರಿಗಳಲ್ಲೊಂದು. 65"ಅಳಿದು ಹೋದ ಒಂದು ಬಾಳಿಗೆ ಸಂಬಂಧಿಸಿದ ತುಂಡುತುಣುಕುಗಳನ್ನು ಸಂಗ್ರಹಿಸಿ ಅದರ ಒಂದು ಚಿತ್ರವನ್ನು ಕಟ್ಟುವುದಕ್ಕಿಂತ ಹೆಚ್ಚಾಗಿ ಒಂದು ಜೀವ ಕೆಲಕಾಲ ಬದುಕಿ ಹೊರಟು ಹೋದ ಮೇಲೆ ಅರ್ಥಯುತವಾದದ್ದೆನ್ನಬಹುದಾಗಿ ಉಳಿಯುವ ಅಂಶ ಯಾವುದು? ಅಂಥ ಯಾವುದಾದರೊಂದು ಅಂಶ ಇರುತ್ತದೆಯೇ? 'ಮಾನವ ಬಾಳಿನಲ್ಲಿ ಉಳಿಯುವುದೇನೆಂದು ಹುಡುಕಿ ನೋಡುವ ಪ್ರಯತ್ನ' ಎಂದು ಕಾರಂತರೇ ಹೇಳಿದ್ದಾರೆ."65

ಬಾಳಿನ ಲೆಕ್ಕಾಚಾರದಲ್ಲಿ ಸೋತವರಾರು, ಗೆದ್ದವರಾರು ಎಂಬುದರ ಸಮೀಕ್ಷೆ ಈ ಕಾದಂಬರಿಯಲ್ಲಿದೆ. ಮನುಷ್ಯ ಅಳಿದ ಮೇಲೆ ಉಳಿಯುವುದೇನು ಎಂಬುದನ್ನು ಶೋಧಿಸಲು ಹೊರಟ ಕಥಾನಕವಿದು.

66"ಆಳ, ನಿರಾಳ (೧೯೬೨) ದೇವರು, ಧರ್ಮ, ನಂಬಿಕೆಗಳನ್ನು ಹೊತ್ತುಕೊಂಡು ಬದುಕಿನಲ್ಲಿ ಮಾತ್ರ ಹಾಗೆ ಇರದೆ, ಅದಕ್ಕೆ ತದ್ವಿರುದ್ಧವಾಗಿ ವರ್ತಿಸುತ್ತಿದ್ದ ಜನರು ಮತ್ತು ನಂಬಿಕೆಯನ್ನು ನಿಜವಾದ ಅರ್ಥದಲ್ಲಿ ಅಳವಡಿಸಿಕೊಂಡು ಬಾಳುತ್ತಿದ್ದ ಜನರ ನಂಬಿಕೆಯ ಆಳ ಮತ್ತು ಆಳವಿಲ್ಲದಿರುವಿಕೆಯನ್ನು ಹಲವಾರು ದೃಷ್ಟಿಕೋನಗಳಿಂದ ವಿಶ್ಲೇಷಿಸಿರುವ ಕಾದಂಬರಿ."66

67"ಆಳ ನಿರಾಳವನ್ನು ಪೂರ್ತಿಯಾಗಿ ವಿಡಂಬನೆಯನ್ನೇ ಗುರಿಯಾಗಿಸಿಕೊಂಡ ಕಾದಂಬರಿ ಎಂದು ಹೇಳಲಾಗುವುದಿಲ್ಲ. ವಿಮರ್ಷೆಯ ವ್ಯಂಗ್ಯ ವಿನೋದದ ವಿಡಂಬನೆಯ ದೃಷ್ಟಿ ಅಲ್ಲಲ್ಲಿ ಇಣುಕುತ್ತದಾದರೂ ಕಾದಂಬರಿಯ ಉದ್ಧೇಶ ಇನ್ನೂ ಆಳವಾಗಿದೆ, ಗಂಭೀರವಾಗಿದೆ."67

೧೯೬೪ರಲ್ಲಿ ಪ್ರಕಟವಾದ ಇದ್ದರೂ ಚಿಂತೆಯ ಸೀಗೆ ಮನೆ ಗಣಪತಿ ಹೆಗ್ಗಡೆಯವರು ಭಾರೀ ಶ್ರೀಮಂತರು. ವ್ಯವಹಾರ ಕ್ಷೇತ್ರದಲ್ಲಿ ನಂಬಿಕೆಯ ನೌಕರರಿಂದ ವಂಚನೆಗೊಳಗಾಗಿ ಜಿಗುಪ್ಸೆಪಟ್ಟು ವ್ಯಪಾರವನ್ನು ಸ್ಥಗಿತಗೊಳಿಸಿ,ತನ್ನ ಹುಟ್ಟೂರಿಗೆ ಹಿಂದುರಿಗಿ ಕೃಷಿಕ ವೃತ್ತಿಯನ್ನು ಕೈಗೊಳ್ಳುತ್ತಾರೆ. ಇದ್ದೊಬ್ಬ ಮಗ ಮೊದಲು ಮತಿಭ್ರಮಣೆಗೊಳಗಾಗಿಯೂ, ಮುಂದೆ ಸಾವಿಗೀಡಾಗಿಯೂ ಇಲ್ಲವಾದುದರಿಂದ ತನ್ನ ಬಂಧುಗಳ ಸಂಸಾರಕ್ಕೆ ಸಹಾಯ ಮಾಡುತ್ತಾರೆ. ಆ ಬಂಧುಗಳು ಗಣಪತಿ ಹೆಗ್ಗಡೆಯವರ ಆಸ್ತಿಗಾಗಿ ಬಾಯಿಬಿಡುತ್ತಾ ಅವರ ನಂತರ ಅದು ತಮಗೆ ಸಿಗಬೇಕೆಂದು ಒತ್ತಾಯ ತರುತ್ತಾರೆ. ಆದರೆ ಹೆಗ್ಗಡೆಯವರಿಗೆ ತನ್ನ ಆಸ್ತಿಯನ್ನು ಹಾಗೆ ಬಟವಾಡೆ ಮಾಡಲು ಇಷ್ಟವಿರುವುದಿಲ್ಲ. ತನ್ನ ಸಂಪತ್ತನ್ನು ಸಾರ್ಥಕಗೊಳಿಸಲು ದುಡಿಯಬಲ್ಲ ಶಂಕರಯ್ಯನಿಗೆ ಮತ್ತು ಜ್ಞಾನಪಿಪಾಸೆಯಿಂದ ಕೃಷಿಯಲ್ಲಿ ಹೊಸ ಸಂಶೋಧನೆ ನಡೆಯಿಸಿ, ದೇಶಕ್ಕೆ ನೆರವಾಗಬಲ್ಲ ಯೋಗ್ಯತೆಯಿರುವ ಸೀತಾರಾಮನಿಗೆ ಅದನ್ನು ಧಾರೆಯೆರೆಯಲು ನಿರ್ಧರಿಸುತ್ತಾರೆ.

68"ಇದ್ದರೂ ಚಿಂತೆ'ಯಲ್ಲಿ ಎರಡು ಪರಸ್ಪರ ವಿರುದ್ಧವಾದ ಜೀವನ ದೃಷ್ಟಿಗಳು ಇದಿರಾಗಿ ನಿಲ್ಲುತ್ತವೆ. ಒಂದು ಪ್ರಾಮಾಣಿಕ ದುಡಿಮೆಯ ದೃಷ್ಟಿ, ಇನ್ನೊಂದು ದಾರಿ ಯಾವುದಾದರೂ ಸರಿ, ಧನ ಜೀವನಾನುಕೂಲ, ಸುಖ ಸಂತೋಷ ಪಡೆಯಬೇಕೆಂಬ ದೃಷ್ಟಿ."68

69"೧೯೬೬ರಲ್ಲಿ ಪ್ರಕಟವಾದ ಸ್ವಪ್ನದ ಹೊಳೆಯ ಕಥಾನಾಯಕ ಕಿಟ್ಟಣ್ಣ ಬಾಲ್ಯದಿಂದಲೂ ನಿಸರ್ಗದ ಚೆಲುವಿಗೆ ಮನಸೋತು, ನಿಸರ್ಗದೊಂದಿಗೆ ಒಂದಾಗಿ ಬೆರೆತು ಕಣ್ಮನಗಳ ಸೌಂದರ್ಯಗ್ರಹಣ ಶಕ್ತಿಯನ್ನು ಬೆಳೆಯಿಸಿಕೊಂಡವನು."69

ಅವನು ಹುಟ್ಟಿ ಬೆಳೆದಿದ್ದ ಸೊಪ್ಪಿನ ಹಳ್ಳಿಯಲ್ಲಿ ಹರಿಯುತ್ತಿದ್ದ ಹಳ್ಳ-ಕಿಟ್ಟಣ್ಣನ ಬಾಯಿಯಲ್ಲಿ ಸ್ವಪ್ನದ ಹೊಳೆ-ಎನಿಸಿಕೊಳ್ಳುತ್ತದೆ. ಬೇರೆ ಬೇರೆ ಕಲಾ ಮಾಧ್ಯಮಗಳಲ್ಲಿ ವ್ಯವಸಾಯ ಮಾಡುತ್ತಾ ಒಂದಿಲ್ಲೊಂದು ಬಗೆಯಲ್ಲಿ ಪ್ರಚಾರದಲ್ಲಿರುವ ಹಲವಾರು ವ್ಯಕ್ತಿಗಳ ಒಳಗು ಮತ್ತು ಹೊರಗುಗಳಲ್ಲಿರುವ ಅಂತರವನ್ನು ಬಿಂಬಿಸುವ ಕಾದಂಬರಿ ಒಂಟಿದನಿ (೧೯೬೬). ತಂತಮ್ಮ ಕ್ಷೇತ್ರಗಳಲ್ಲಿ ದುಡಿಯುವಾಗ ಪ್ರಾಮಾಣಿಕವಾಗಿ ತಮಗೆ ಅನಿಸಿದ್ದನ್ನು ಇತರರಿಗೆ ಬರಹದ ಮೂಲಕವಾಗಲೀ, ನೃತ್ಯ, ಸಂಗೀತಗಳ ಮೂಲಕವಾಗಲೀ ತಿಳಿಯಪಡಿಸಬೇಕೆನ್ನುವ ಬಯಕೆಗಿಂತ 'ಲೋಕ ತನ್ನನ್ನು ಕಾಣಬೇಕು, ಕೇಳಬೇಕು' ಎಂಬ ಪ್ರಚಾರಪ್ರಿಯತೆಯೇ ಈ ಕಾದಂಬರಿಯ ಹಲವಾರು ಮುಖ್ಯ ಪಾತ್ರಗಳ ಧ್ಯೇಯ ಧೋರಣೆಗಳಾಗಿರುತ್ತವೆ.

70"ಇನ್ನೊಂದು ದಾರಿ (೧೯೬೮) ಮುಖ್ಯವಾಗಿ ಕಥಾನಾಯಕ ಜಯರಾಮನ ಕತೆ. ಅವನ ನಂಬಿಕೆಗಳು ಮತ್ತು ಜೀವನದ ರೀತಿ ಉಳಿದ ವ್ಯಕ್ತಿಗಳಿಗಿಂತ ಭಿನ್ನ. ಅವನ ಅಜ್ಜಿ ತಾಯಿ, ತಂದೆಯವರು, ಶ್ರದ್ಧೆ,ನಂಬಿಕೆ, ದೇವರು, ಧರ್ಮಗಳ ನೆರಳಿನಲ್ಲಿ ತಮ್ಮ ಬದುಕನ್ನು ಸಾಗಿಸಿದವರಾದರೆ ಜಯರಾಮ ಮಾತ್ರ ಸ್ವತಂತ್ರ, ವಿಚಾರವಾದಿ, ಸಾಂಪ್ರದಾಯಿಕ ವಿಚಾರ ಸರಣಿಯನ್ನು ಅವರು ಒಪ್ಪುವುದಿಲ್ಲವಾದರೂ, ನಿತ್ಯ ಜೀವನದಲ್ಲಿ ಉಳಿದವರ ಶ್ರದ್ಧೆ ನಂಬಿಕೆಗಳ ವಿಚಾರದಲ್ಲಿ ಸಹಾನುಭೂತಿಯನ್ನು ಗೌರವಾಭಾವಗಳನ್ನು ತಿಳಿದಿರುತ್ತಾನೆ."70

ಜ್ಞಾನಪೀಠ ಪ್ರಶಸ್ತಿ ವಿಜೇತ ಕಾದಂಬರಿ ಮೂಕಜ್ಜಿಯ ಕನಸುಗಳು (೧೯೬೮)ಒಂದು ವಿಶಿಷ್ಟ ಸಾಮಾಜಿಕ ಕಾದಂಬರಿ. ಮೂಕಜ್ಜಿಯ ಕನಸಿನಲ್ಲಿ ಕಾರಂತರಿಗೆ ಪ್ರಿಯವಾದ 71"ನಂಬಿದ್ದನ್ನು ತಿಳಿದುಕೊಂಡು ಅದರಂತೆ ಬಾಳುವ ಬುದ್ಧಿ ಇರಬೇಕು."71 ಎನ್ನುವ ಸಾರ್ವಕಾಲಿಕ ಸತ್ಯವನ್ನೇ ಎನ್ನುವುದು ಇಲ್ಲಿಯ ವೈಶಿಷ್ಟ್ಯವಾಗಿದೆ. ಮೂಕಜ್ಜಿಯ ಹಿನ್ನೆಲೆಗೆ ಅಪೂರ್ವವೆನಿಸುವ ವಿಚಾರವಂತಿಕೆ, ವಾಸ್ತವವಾದ , ತಾರ್ಕಿಕ ಸಿದ್ಧಾಂತಗಳ ಹೊರ ಹರಿವಿಗಾಗಿ ಅವಳು ತನ್ನ 'ಕನಸು'ಗಳ ಆಶ್ರಯವನ್ನೋ, ಅವಕುಂಠನವನ್ನೋ ನಂಬಿಕೊಳ್ಳುತ್ತಾಳೆ. ಆ ಭರವಸೆಯ ಬಲದಿಂದಲೇ ಕರ್ಮಕ್ಷಯ ಪುನರ್ಜನ್ಮ, ವಿಧಿವಾದ, ಗೀತೋಪದೇಶಗಳಂತಹ ಹಲವು ಸಾಂಪ್ರದಾಯಿಕ ವಿಶ್ವಾಸದ ನೆಲೆಗಳನ್ನು ಹೊಸ ದೃಷ್ಟಿಯಿಂದ ನೋಡುತ್ತಾಳೆ.ಒಂದರ್ಥದಲ್ಲಿ ಈ ಮೂಕಜ್ಜಿಯು ಕಾಲಯಾನಿಯಾಗಿದ್ದಾಳೆ.

72"೧೯೭೦ರಲ್ಲಿ ಪ್ರಕಟವಾಗಿದ್ದ ಮೈಮನಗಳ ಸುಳಿಯಲ್ಲಿ ಅತ್ಯಪೂರ್ವವಾದೊಂದು ಲೈಂಗಿಕ ಕಾದಂಬರಿ. ಯಾವುದೇ ಅಶ್ಲೀಲತೆಯ ಭಾವನೆ ಓದುಗರಲ್ಲಿ ಉಂಟಾಗದಂತೆ ಇದರಲ್ಲಿ ಶೃಂಗಾರರಸ ಪ್ರತಿಪಾದಕ ವಸ್ತುವನ್ನು ಅತ್ಯಂತ ಸಂಯಮದಿಂದ ನಿರ್ವಹಿಸಿದ್ದಾರೆ.."72 ಪ್ರಣಯದ ವಿವಿಧ ಸನ್ನಿವೇಶಗಳೇಕಾದಂಬರಿಯ ಉದ್ದಕ್ಕೂ ಕಾಣಿಸಿಕೊಂಡರೂ ವರ್ಣನೆಗಳಲ್ಲಾಗಲೀ, ಶಬ್ದಗಳ ಬಳಕೆಯಲ್ಲಾಗಲೀ ಅಶ್ಲೀಲತೆಯ ಸೋಂಕಿಲ್ಲದಂತೆ ಅತ್ಯಂತ ಪರಿಣಾಮಕಾರಿಯಾಗಿ ಹೆಣೆಯಲ್ಪಟ್ಟ ಕಾದಂಬರಿ.

73"ಧರ್ಮರಾಯನ ಸಂಸಾರ (೧೯೬೨) ಕಾರಂತರ ಪ್ರಸಿದ್ಧ ಕಾದಂಬರಿಗಳಲ್ಲೊಂದೆನಿಸಿದೆ. ದುಷ್ಪತನ, ದುಷ್ಚಟ, ಅನಾಚಾರಗಳಿಗೆ ಹೆಸರುವಾಸಿಯಾಗಿದ್ದ ವ್ಯಕ್ತಿ ಮಹಾಬಲಯ್ಯ ಸಂಪ್ರದಾಯಸ್ಥರ ಮನೆತನದಲ್ಲಿ ಹುಟ್ಟಿ ಬೆಳೆದಿದ್ದ ಸರಸ್ವತಿಯನ್ನು ಮದುವೆಯಾಗಿ ಬಾಳನ್ನು ಸಾಗಿಸುತ್ತಾನೆ."73 ಮದುವೆಯಿಂದ ಅವನ ಜೀವನ ವಿಧಾನದಲ್ಲಾಗಲೀ, ಮನೋಧರ್ಮಗಳಲ್ಲಾಗಲೀ ಯಾವುದೇ ಬದಲಾವಣೆ ಉಂಟಾಗದು. ಆದರೆ ಅವನನ್ನು ಮದುವೆಯಾಗಿದ್ದ ಸರಸ್ವತಿ ಮಾತ್ರ ಕಂಗಾಲಾಗುತ್ತಾಳೆ. ಆಕೆಯ ತಾಯಿ ಮಹಾಲಕ್ಷ್ಮಿಗೂ ಮಗಳ ಪಾಡನ್ನು ಕಂಡು ತುಂಬಾ ಸಂಕಟವಾಗುತ್ತದೆ. ತಾಯಿ ಮಗಳ ಮನೋದೈಹಿಕ ಸಂಕಟಗಳನ್ನು ಕಾದಂಬರಿ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದೆ.

೧೯೬೪ರಲ್ಲಿ ಪ್ರಕಟವಾದ ಮೂಜನ್ಮ ಕಾದಂಬರಿ ಭಾರತ ದೇಶದ ಸ್ವಾತಂತ್ರ್ಯಪೂರ್ವದ ಚರಿತ್ರೆ, ಸ್ವಾತಂತ್ರ್ಯ ನಂತರದ ರಾಜಕೀಯ ಕುರಿತು ವಿಶೇಷ ಬೆಳಕನ್ನು ಚೆಲ್ಲುತ್ತದೆ. ಕಥಾನಾಯಕ ಚಂದ್ರಕಾಂತ ಬಾಪಟ್ ಎಂಬಾತ ಪತ್ನಿ ಚಂಪಾವತಿಯೊಂದಿಗಿನ ದಾಂಪತ್ಯ ವಿರಸದಿಂದಾಗಿ ದೇಶದ ಸ್ವಾತಂತ್ರ್ಯ ಚಳವಳಕ್ಕೆ ಧುಮುಕಿ ಚಂದ್ರಕಾಂತಗುಪ್ತ ಎಂಬ ಹೆಸರಿನಿಂದ ರಚನಾತ್ಮಕ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾನೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಅಧಿಕಾರಕ್ಕಾಗಿ ಆಸೆ ಪಡದೆ ಆಡಳಿತದ ಆಗುಹೋಗುಗಳನ್ನು ದೂರದಂದಲೇ ಪರಿಶೀಲಿಸುತ್ತಾನೆ. ಕುಟಿಲ ರಾಜಕಾರಣಿಗಳ ಅಸೂಯೆಯಿಂದಾಗಿ ಕೊಲೆಗೈಯಲ್ಪಡುತ್ತಾನೆ. ಅವನುಮಡಿದ ಬಳಿಕ ಅವನ ದ್ವಿತೀಯ ಪತ್ನಿ ನಳಿನಿ ಗುಪ್ತ ಅವನ ಜೀವನ ಚರಿತ್ರೆಯನ್ನು ಶೋಧಿಸುವ ಕೆಲಸದಲ್ಲಿ ತೊಡಗಿದಾಗ ಚಂದ್ರಕಾಂತ ಗುಪ್ತನ ಮೊದಲ ಪತ್ನಿ ಮತ್ತು ಆಕೆಯ ಮಗಳು ಇಂದಿರೆಯನ್ನು ಸಂಧಿಸುತ್ತಾಳೆ. ಅವರೆಲ್ಲರೂ ಪರಸ್ಪರರನ್ನು ಪ್ರೀತ್ಯಾದರಗಳಿಂದ ಉಪಚರಿಸುತ್ತಾರೆ. 74"ಕತೆಗಾಗಿಯೇ ಒಂದಿಷ್ಟು ಕಥಾಂಶವನ್ನು ಪೋಣಿಸಿದಂತಿರುವ ಈ ಕಾದಂಬರಿ ಮುಖ್ಯತಃ ಭಾರತ ದೇಶದ ಅತಂತ್ರ ಭಾರತ, ಸ್ವತಂತ್ರ ಭಾರತ, ಕುತಂತ್ರ ಭಾರತದ ರಾಜಕೀಯ ನೋಟಗಳನ್ನು ನೀಡುವ ಧ್ಯೇಯದಿಂದ ಕೂಡಿದೆ."74

75"೧೯೮೦ರಲ್ಲಿ ಪ್ರಕಟವಾದ ನಾವು ಕಟ್ಟಿದ ಸ್ವರ್ಗ, ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಮತ್ತು ಸಾರ್ವಜನಿಕ ರಂಗಗಳಲ್ಲಿ ಬದಲಾವಣೆಗೊಂಡ ಬದುಕಿನ ಮೌಲ್ಯಗಳ ಬಗ್ಗೆ ವಿಶೇಷ ದೃಷ್ಟಿ ಹರಿಯಿಸಿದ ಕಥಾನಕ."75

೧೯೮೧ರಲ್ಲಿ ಪ್ರಕಟವಾದ 'ಕಣ್ಣಿದ್ದೂ ಕಾಣರು' ಕಾದಂಬರಿಯಲ್ಲಿ ಹಿಂದೂ ಧರ್ಮದ ಭಕ್ತರು ತಾವು ನಂಬಿದ ದೇವರು, ಸ್ವಾಮೀಜಿಯವರ ಕುರಿತು ಯಾವುದೇ ಪ್ರಶ್ನೆ ಮಾಡದೆ ಕಣ್ಮುಚ್ಚಿ ನಂಬುವ ಪ್ರವೃತ್ತಿಯ ಕುರಿತು ವೈಚಾರಿಕ ಚರ್ಚೆಯಿದೆ.

76"ಕಾರಂತರ ಕೊನೇಯ ಕಾದಂಬರಿಯೇ 'ಅಂಟಿದ ಅಪರಂಜಿ' (೧೯೮೬)"76 ಈ ಕಥಾನಕವೂ ನಮ್ಮ ಧಾರ್ಮಿಕ ಮತ್ತು ಸಾಮಾಜಿಕ ರಂಗಗಳಲ್ಲಿನ ನೈತಿಕ ಅಧಃಪತನವನ್ನು ಬಣ್ಣಿಸುವಂತದ್ದು.

77"ಈಗೆ ಶಿವರಾಮ ಕಾರಂತರು ಒಟ್ಟು ೪೭ ಕಾದಂಬರಿಗಳನ್ನು ರಚಿಸಿದ್ದಾರೆ. ವಿಷಯ ವೈವಿಧ್ಯದ ದೃಷ್ಟಿಯಿಂದ ಕಾದಂಬರಿಗಳು ವ್ಯಕ್ತಪಡಿಸುವ ಮೌಲ್ಯಗಳ ಪ್ರತಿಪಾದನೆಯ ದೃಷ್ಟಿಯಿಂದ ಕಾದಂಬರಿಕಾರರ ವಿವಿಧ ವಿಷಯ ಜ್ಞಾನದ ದೆಸೆಯಿಂದ ದಟ್ಟ ಜೀವನಾನುಭವಗಳ ಕಾರಣದಿಂದ ಕನ್ನಡದ ಕಾದಂಬರಿ ಕ್ಷೇತ್ರದಲ್ಲಿ ಶಿವರಾಮ ಕಾರಂತರು ಅನನ್ಯ ಸಾಧಕರೆನಿಸಿಕೊಂಡಿದ್ದಾರೆ."77

ಒಳ್ಳೆಯ ಕೃತಿಗಳೆಂದು ಹೆಸರಿಸಬಹುದಾದ ಅನೇಕ ಕಾದಂಬರಿಗಳನ್ನು ಕಾರಂತರು ಬರೆದಿದ್ದರೂ ಮರಳಿ ಮಣ್ಣಿಗೆ, ಚೋಮನ ದುಡಿ, ಅಳಿದ ಮೇಲೆ, ಬೆಟ್ಟದ ಜೀವ· ಧರ್ಮರಾಯನ ಸಂಸಾರ ಮುಂತಾದ ಕೆಲವೇ ಕೃತಿಗಳು ಭಾರೀ ಭಾರೀ ಚರ್ಚಿತವಾಗಿವೆ. ಮೂಕಜ್ಜಿಯ ಕನಸುಗಳು ಮತ್ತು ಮೈಮನಗಳ ಸುಳಿಯಲ್ಲಿ ಪ್ರಸಿದ್ಧ ಪ್ರಶಸ್ತಿ ವಿಜೇತ ಕೃತಿಗಳು, ಎಂಬ ಕಾರಣದಿಂದಾಗಿಯೇ ವಿಶೇಷ ಮೌಲ್ಯಮಾಪನಕ್ಕೆ ಒಳಗಾಗಿವೆ.

[78]"ಕಾರಂತರ ಕಾದಂಬರಿಗಳದು ಒಂದು ವಿಶಿಷ್ಟವಾದ, ಶಕ್ತಿ ಸಂಪುಷ್ಟವಾದ ಜಗತ್ತಾಗಿದೆ. ಅವುಗಳ ಅಧ್ಯಯನದ ಸಾಧ್ಯತೆಗಳಂತೂ ಅಪಾರವಾಗಿವೆ. ಆಳ ಅಗಲಗಳೆರಡನ್ನೂ ಹೊಂದಿರುವ ಈ ಪ್ರಕಾರದ ಕೃತಿಗಳ ಪ್ರತ್ಯಪ್ರತ್ಯೇಕವಾದ ಅಭ್ಯಾಸ ವಿಶ್ಲೇಷಣೆಗಳು ಪ್ರಸ್ತುತ ಸಾಹಿತ್ಯಿಕ ಸಂದರ್ಭದ ಅಗತ್ಯಗಳಾಗಿವೆ."[78]

## ಅಡಿ ಟಿಪ್ಪಣಿ

41–41 ಶಿವರಾಮ ಕಾರಂತ ಕಾದಂಬರಿ ಪ್ರಪಂಚ ಮಾಲಿನಿ ಮಲ್ಯ. ಪುಟ – ೩೬

42–42 ಶಿವರಾಮ ಕಾರಂತ –ಡಾ। ತಾಳ್ತಜೆ ವಸಂತ ಕುಮಾರ್ ಪುಟ – ೮೪

43–43 ಶಿವರಾಮ ಕಾರಂತ ಕಥನಕಾರ. ಪುಟ – ೮೫

44–44 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೩೬

45–45 ಶಿವರಾಮ ಕಾರಂತ ಕಾದಂಬರಿ ಪ್ರಪಂಚ ಪುಟ – ೩೭

46–46 ಶಿವರಾಮ ಕಾರಂತ –ಡಾ। ತಾಳ್ತಜೆ ವಸಂತ ಕುಮಾರ್ ಪುಟ – ೮೭

47–47 ಶಿವರಾಮ ಕಾರಂತ ಬದುಕು–ಬರೆಹ ವಿ.ಎಂ.ಇನಾಂದಾರ್. ಪುಟ – ೫೬

48–48 ಶಿವರಾಮ ಕಾರಂತ ಬದುಕು–ಬರೆಹ ವಿ.ಎಂ.ಇನಾಂದಾರ್. ಪುಟ – ೫೭

49–49 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೩೮

49–49 ಶಿವರಾಮ ಕಾರಂತ ಬದುಕು–ಬರೆಹ ವಿ.ಎಂ.ಇನಾಂದಾರ್. ಪುಟ – ೫೮

50–50 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೩೮

51–51 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೩೮

52–52 ಶಿವರಾಮ ಕಾರಂತ –ಡಾ। ತಾಳ್ತಜೆ ವಸಂತ ಕುಮಾರ್ ಪುಟ – ೮೮

53–53 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೩೯

54–54 ಶಿವರಾಮ ಕಾರಂತ ಬದುಕು–ಬರೆಹ ವಿ.ಎಂ.ಇನಾಂದಾರ್. ಪುಟ – ೫೯

54–54 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೩೯

55–55 ಶಿವರಾಮ ಕಾರಂತ – ಮಾಲಿನಿ ಮಲ್ಯ ಪುಟ – ೩೯

56–56 ಶಿವರಾಮ ಕಾರಂತ ಕಾದಂಬರಿಕಾರ ಪುಟ – ೪೦

57–57 ಶಿವರಾಮ ಕಾರಂತ ಬದುಕು–ಬರೆಹ ವಿ.ಎಂ.ಇನಾಂದಾರ್. ಪುಟ – ೮೦

58–58 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೪೦

59–59 ಶಿವರಾಮ ಕಾರಂತ –ಡಾ। ತಾಳ್ತಜೆ ವಸಂತ ಕುಮಾರ್ ಪುಟ – ೯೩

60–60 ಶಿವರಾಮ ಕಾರಂತ – ಮಾಲಿನಿ ಮಲ್ಯ. ಪುಟ – ೪೦

61–61 ಶಿವರಾಮ ಕಾರಂತ ಕಾದಂಬರಿ ಪ್ರಪಂಚ ಪುಟ – ೪೧

62–62 ಶಿವರಾಮ ಕಾರಂತ – ಮಾಲಿನಿ ಮಲ್ಯ ಪುಟ – ೪೧

63–63 ಶಿವರಾಮ ಕಾರಂತ ಬದುಕು–ಬರೆಹ ವಿ.ಎಂ.ಇನಾಂದಾರ್. ಪುಟ – ೬೦

64–64 ಶಿವರಾಮ ಕಾರಂತ – ಮಾಲಿನಿ ಮಲ್ಯ ಪುಟ – ೪೧

65–65 ಶಿವರಾಮ ಕಾರಂತ ಬದುಕು–ಬರೆಹ ವಿ.ಎಂ.ಇನಾಂದಾರ್. ಪುಟ – ೯೯

66–66 ಶಿವರಾಮ ಕಾರಂತ – ಮಾಲಿನಿ ಮಲ್ಯ ಪುಟ – ೪೧

67–67 ಶಿವರಾಮ ಕಾರಂತ ಬದುಕು–ಬರೆಹ ವಿ.ಎಂ.ಇನಾಂದಾರ್. ಪುಟ – ೬೨

68–68 ಶಿವರಾಮ ಕಾರಂತ ಬದುಕು–ಬರೆಹ ವಿ.ಎಂ.ಇನಾಂದಾರ್. ಪುಟ – ೧೦೪

69–69 ಶಿವರಾಮ ಕಾರಂತ ಕಾದಂಬರಿಕಾರ ಪುಟ – ೪೨

70–70 ಶಿವರಾಮ ಕಾರಂತ – ಮಾಲಿನಿ ಮಲ್ಯ ಪುಟ – ೪೪

71–71 ಶಿವರಾಮ ಕಾರಂತ –ಡಾ। ತಾಳ್ತಜೆ ವಸಂತ ಕುಮಾರ್ ಪುಟ – ೧೧೫

72–72 ಶಿವರಾಮ ಕಾರಂತ ಕಾದಂಬರಿಕಾರ ಪುಟ – ೪೬

73–73 ಶಿವರಾಮ ಕಾರಂತ – ಮಾಲಿನಿ ಮಲ್ಯ ಪುಟ – ೪೮

74–74 ಶಿವರಾಮ ಕಾರಂತ – ಮಾಲಿನಿ ಮಲ್ಯ ಪುಟ – ೪೮

75–75 ಶಿವರಾಮ ಕಾರಂತ ಕಾದಂಬರಿಕಾರ ಪುಟ – ೫೧

76–76 ಶಿವರಾಮ ಕಾರಂತ – ಮಾಲಿನಿ ಮಲ್ಯ ಪುಟ – ೫೩

77–77 ಶಿವರಾಮ ಕಾರಂತ – ಮಾಲಿನಿ ಮಲ್ಯ ಪುಟ – ೫೩

78–78 ಶಿವರಾಮ ಕಾರಂತ –ಡಾ। ತಾಳ್ತಜೆ ವಸಂತ ಕುಮಾರ್ ಪುಟ – ೧೩೪

# ಅಧ್ಯಾಯ ೫.

## ಡಾ। ಕೆ. ಶಿವರಾಮ ಕಾರಂತರ

## “ಮರಳಿ ಮಣ್ಣಿಗೆ” ಕಾದಂಬರಿಯ

## ಸಂಕ್ಷಿಪ್ತ ಪರಿಚಯ

## ಡಾ। ಕೆ. ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯ ಸಂಕ್ಷಿಪ್ತ ಪರಿಚಯ

[79]"ಮರಳಿ ಮಣ್ಣಿಗೆ'ಯಲ್ಲಿ ಮೂರು ತಲೆಮಾರುಗಳ ಕಥೆ ಒಂದಕ್ಕೆ ಒಂದು ಬೆಸೆದು ಬೆಳೆದಿದೆ. ಬಡತನದ ಕೋಟಲೆಯಲ್ಲಿ ಈ ತಲೆಮಾರಿನವರು ಬೆಂದು ಬಣ್ಣಬಣ್ಣವಾಗಿ ಬಾಡಿ ಬದುಕಿನ ಮರ್ಮವೇನೆಂಬುದನ್ನು ಕಂಡುಕೊಂಡ ಕಥೆ ಇದರ ಮುಖ್ಯ ವಸ್ತು."[79]

ರಾಮ ಐತಾಳರು ಕೋಡಿಯ ವೈದಿಕ ಬ್ರಾಹ್ಮಣರು. ತಂದೆ ಗಳಿಸಿದ ಕೊಂಚ ಆಸ್ತಿ ಹೊರತು ಬೇರೇನು ಇಲ್ಲದವರು. ಶ್ರಾದ್ಧಗಳನ್ನೂ ಮದುವೆಗಳನ್ನೂ ಮಾಡಿಸುವ ಪುರೋಹಿತರು. ಅದರಿಂದ ಅವರ ಬದುಕು ಸಾಗಬೇಕು. ರಾಮ ಐತಾಳರಿಗೆ ಯೌವನ ಕೂಡಿ ಬಂದಾಗ ಮಣೂರು ಗ್ರಾಮದ ನಾರಾಯಣ ಮಯ್ಯರ ಮಗಳಾದ ಪಾರ್ವತಿಯೊಂದಿಗೆ ಲಗ್ನವಾಯಿತು.

ಪಾರ್ವತಿಗೆ ಲಗ್ನವಾಗಿ 3 ವರ್ಷಗಳಲ್ಲಿ ಮುಪ್ಪಿನ ನಾರಾಯಣ ಮಯ್ಯರು ತೀರಿಕೊಂಡರು. ಅವಳ ತಾಯಿ ಮದುವೆ ಸಮಯದಲ್ಲಿ ಬದುಕಿರಲಿಲ್ಲ. ಅವಳ ಮದುವೆಯಾಗಿ 5 ವರ್ಷ ಕಳೆಯುವಷ್ಟಕ್ಕೆ ಮಾವಂದಿರಾದ ಕೋದಂಡ ಐತಾಳರು ಗತಿಸಿಯಾಯಿತು. ಈಗ ಅವರ ಮನೆಯಲ್ಲಿದ್ದವರು ಮೂವರು ಮಾತ್ರ. ಕೋದಂಡರಾಮ ಐತಾಳರ ಏಕಮಾತ್ರ ಪುತ್ರ ರಾಮ ಐತಾಳರು. ಇನ್ನೊಬ್ಬಳು ಐತಾಳರ ತಂಗಿ. ಚಿಕ್ಕಂದಿನಲ್ಲೆ ಗಂಡ ಸತ್ತು ನಿರ್ಗತಿಕಳಾದ ಸರಸೋತಿ. ಮೂರನೆಯವಳು ರಾಮ ಐತಾಳರ ಹೆಂಡತಿ ಪಾರೋತಿ. ಪಾರೋತಿಗೆ ಮನೆಯಲ್ಲಿ ಹೇಗೆ ಸಮಯ ಹೋದೀತು ಎಂಬ ಚಿಂತೆಯಿಲ್ಲ.

[80]"ಐತಾಳರು ಊರಿನ ಪೌರೋಹಿತ್ಯ ಕಟ್ಟಿಕೊಂಡು ಅಲೆಯುವವರು. ಅವರ ಹಗಲಿನ ಊಟಗಳೆಲ್ಲ ಪರಾಭಾರೆ, ಸಾಮಾನ್ಯವಾಗಿ ಹಾಗೆ, ಪೌರೋಹಿತ್ಯದ ಊಟ ಮುಗಿಸಿಕೊಂಡು ಸಂಜೆ ನಾಲ್ಕು ಗಂಟೆ ಸುಮಾರಿಗೆ ಮನೆಗೆ ಬಂದು ಸೇರುತ್ತಾರೆ. ಬರುವಾಗ ಬರಿಗೈಯಿಂದ ಬರುವ ವಾಡಿಕೆಯಿಲ್ಲ. ಒಂದಿಷ್ಟು ಅಕ್ಕಿ ಕಾಯಿ, ಏನಾದರೂ ಹಸುರುವಾಣಿ ತರುವ ನಿಯಮವಿದೆ. ಅದನ್ನು ತಂದಿರಿಸಿ ಕಾಲು ತೊಳೆದು ಚಾವಡಿಯ ಜಾಜಿ ಬರೆದ ನೆಲದ ಮೇಲೆ ಉಸ್ಸೆಂದು ಮೈಚಾಚಿ ಒಂದು ಗಳಿಗೆ ಕಾಲ ಗೊರಕೆ ಹೊಡೆಯುತ್ತಾರೆ. ಆ ಬಳಿಕ ನಿದ್ದೆಯಿಂದೆದ್ದು ಊರಿನ ಪಾರುಪತ್ಯ ನಡೆಸಲು ಹೊರಟರೆಂದರೆ ತಿರುಗಿ ಮನೆಯನ್ನು ಸೇರುವಾಗ ರಾತ್ರಿ ಜಾವ ಹೊತ್ತು ಕಳೆಯುತ್ತದೆ."[80]

ಸಾಲ ಮಾಡದೆ ಇದ್ದದ್ದರಲ್ಲೆ ತಾವು ಬೆಳೆದದ್ದರಲ್ಲೆ ಹೇಗೋ ಬಾಳುತ್ತಿದ್ದರು. ಅತ್ತಿಗೆ ನಾದಿನಿಯರ ದೇಹಗಳು ಎರಡಾಗಿದ್ದರೂ ಜೀವ ಒಂದೇ ಎಂಬಂಥ ಪ್ರೀತಿ ಅವರಲ್ಲಿ. ಐತಾಳರು ದಿನ ಬೆಳಗಾದರೆ ಅವರ ವೃತ್ತಿಗಾಗಿ ಹೊರಟು ಬಿಡುತ್ತಾರೆ. ಊಟ ಎಲ್ಲಾದರಲ್ಲಿ, ಮನೆಯಲ್ಲಿದ್ದ ಎರಡು ಜೀವಿಗಳು ಗಂಜಿ ಕುಡಿದೋ ಅರೆ ಹೊಟ್ಟೆ ಉಂಡೋ ಹೇಗೋ ಇದ್ದರಾಯಿತು ಎಂದು ತಿಳಿದಿದ್ದವರು. .

ಐತಾಳರಿಗೆ ಇದ್ದ ಕೊರಗು ತಮ್ಮ ಸಂತತಿ ಬೆಳೆಯದಿದ್ದದ್ದೇ, ಇದಕ್ಕಾಗಿ ಸರಸೋತಿ ಪೌರೋತಿಗೆ [81]"ಅವನ ಮನಸ್ಸಿಗೇ ಬರಲಿಲ್ಲವೆಂದು ಕಾಣುತ್ತದೆ. ಅದಕ್ಕೇನು ಮಾಡುವುದು? ಈಗ ನಿನ್ನ ಕರುಳೇ ಪೆರಬೇಕೆಂಬುದೇನು? ಹೋಗಲಿ, ದತ್ತು ಮಾಡಿಕೊಂಡರೆ ಏನು ತಪ್ಪು? ಎಂದು ಸಮಾಧಾನ ಹೇಳುವಳು."[81]

ಈ ವಿಷಯವನ್ನು ಐತಾಳರಿಗೆ ತಿಳಿಸಿದಾಗ [82]"ಐತಾಳರು ಮೆಲ್ಲಗೆ ಸರಸೋತಿ ನಿನಗೆ ಮರುಳು! ಯಾವ ಯಾವ ಮನೆಯ ಕಾಗೆ ಮರಿಯನ್ನು ತಂದು ನಮ್ಮ ಮನೆಯ ಕೋಗಿಲೆ ಮರಿ ಮಾಡಬೇಕು

ಅನ್ನುತ್ತಿಯೋ? ಅದು ಆಗುವ ಹೋಗುವ ವ್ಯಾಪಾರವೇ? ಎಷ್ಟ ಕಡೆ ನಾನೇ ಉಪನಯನ, ದತ್ತು ಮಾಡಿಸಿದ ಎಲ್ಲ ಕಡೆಯಲ್ಲೂ ಒಂದೇ ಕತೆ! ಆ ಮಕ್ಕಳ ಗುಣ ಹಿಡಿಯಲಿಲ್ಲ ಎಂದರೆ ಮತ್ತೆ ಮನಸ್ಸು ಮುರಿಯುವುದೇ, ನಮ್ಮ ಕುಟುಂಬದಲ್ಲೆ ಎಲ್ಲಾದರೂ ಇದ್ದರೆ ಆ ಲೆಕ್ಕ ಬೇರೆ, ಎಂದರು. 'ದೇವರು ನನ್ನ ಹಣೆಯಲ್ಲಿ ಬರೆದರೆ ನನ್ನ ಹೊಟ್ಟೆಯಲ್ಲೇ ಹುಟ್ಟೀತು' ಎಂದರು"[82]

ಅದಕ್ಕಾಗಿ ಪಡುಮುನ್ನೂರಿನ ಸತ್ಯಭಾಮೆಯನ್ನು ಎರಡನೆಯ ಹೆಂಡತಿಯಾಗಿ ಮನೆಗೆ ತಂದರು. ಮನೆಯಲ್ಲಿ ಹೊಸ ಸಮಸ್ಯೆಗಳು ಏಳಲು ಮೊದಲಾಗುತ್ತದೆ. ಸವತಿಯರು ತಮ್ಮ ತಮ್ಮಲ್ಲಿ ಮೊದಲು ಹುಟ್ಟಿದ ನಂಜನ್ನು ಉಂಡು ಆಮೇಲೆ ಹಿತವರಾದರು. ರಾಮ ಐತಾಳರಿಗೆ ಎರಡನೆಯ ಹೆಂಡತಿಯಿಂದ ಲಚ್ಚ, ಸುಬ್ಬಿ ಎಂಬ ಮಕ್ಕಳು ಆಗುತ್ತವೆ. ಇದರಿಂದ ಅವರ ಬಾಳು ಇನ್ನೂ ಕಠಿಣವಾಗುತ್ತವೆ. ಲಚ್ಚ ಬೆಳೆಯುವುದು ಅವನ ವಿಧ್ಯಾಭ್ಯಾಸ, ಉಪನಯನ ಮುಂತಾದ್ದಕ್ಕೆಲ್ಲ ಐತಾಳರು ಹಣವನ್ನು ಒದಗಿಸಿದರು. ಹೊಟ್ಟೆ ಬಟ್ಟೆ ಕಟ್ಟಿ ತಮ್ಮ ಶ್ರಮವನ್ನು ಲೆಕ್ಕಿಸದೆ ಮಗ ಬೆಳೆದಾನು, ಕಲಿತಾನು, ಮುಂದಕ್ಕೆ ಬಂದಾನು, ತನ್ನ ಹೆಸರನ್ನು ಉಳಿಸಿಯಾನು ಎಂಬ ಆಸೆಯಿಂದ ಅವನಲ್ಲೇ ಪ್ರಾಣವನ್ನಿರಿಸಿದ್ದರು.

ಇದೇ ಸಮಯದಲ್ಲಿ ಐತಾಳರ ಮದುವೆಯ ಸಮಯದಲ್ಲಿ ಅವರಿಗೆ ಸಹಾಯಕನಾದ ಶೀನ ಮಯ್ಯನ ಸವಾರಿ ಐತಾಳರ ಮನೆಗೆ ಬಂದು ಹೋಗುವುದು ಹೆಚ್ಚುತ್ತದೆ. ಬಂದೊಡನೆಯೇ ಐತಾಳರ ಮಗ ಲಚ್ಚನ ಕ್ಷೇಮ ಸಮಾಚಾರ, ಅದಾಗಲು ಸತ್ಯಭಾಮೆಯ ಪ್ರಶಂಸೆ. ಅನಂತರ ತನ್ನ ನೂರಾರು ತಾಪತ್ರಯಗಳ ವಿಸ್ತಾರ ಮುಂತಾದುವುಗಳ ಬಗ್ಗೆ ಮಾತು ಮುಂದುವರಿಸುತ್ತಾನೆ. ಶೀನ ಮಯ್ಯನು ಐತಾಳರ ಮನೆಗೆ ಬರುವುದನ್ನು ಮುಂದುವರಿಸಿ ಮನೆಗೆ ಬಂದಾಗ ಸತ್ಯಭಾಮೆಯನ್ನೂ ಹೊಗಳುತ್ತಾನೆ. ಮತ್ತು ಅದರ ಪರಿಣಾಮ ಯಾವ ರೀತಿಯಲ್ಲಿ ಐತಾಳರಲ್ಲಿ ಉಂಟಾಗುತ್ತವೆ ಎಂದು ತಿಳಿದುಕೊಂಡ. ಲಚ್ಚನನ್ನು ಕಂಡರೆ ತನ್ನ ಮನೆಯ ಮಕ್ಕಳಿಗೂ ಅಧಿಕವಾದ ಪ್ರೇಮವನ್ನು ನಟಿಸತೊಡಗಿದನು.

ಪರಿಸ್ಥಿತಿಯ ಲಾಭ ಪಡೆದ ಶೀನ ಮಯ್ಯ ಮುಂದೆ ಐತಾಳರಲ್ಲಿ ಹಣವಿದೆ ಎಂದು ತಿಳಿದು ಅವರಲ್ಲಿ ಸಾಲದ ಪ್ರಸ್ತಾಪವನ್ನೂ ಮುಂದಿಟ್ಟ. ಕೊನೆಗೆ ಅನಿವಾರ್ಯವಾಗಿ ಐತಾಳರು ಶೀನ ಮಯ್ಯನಿಗೆ ಸಾಲ ನೀಡಿದರು. ಈ ವಿಚಾರ ಅವರ ಮನೆಯವರಿಗೂ ತಿಳಿಸಲಿಲ್ಲ.

ಸಾಲ ಕೊಟ್ಟ ಆರು ತಿಂಗಳ ಅವಧಿಯಲ್ಲಿ, ಸಾಲ ಎತ್ತಿದ ಒಂದು ಹೆಳೆ ಮಾತ್ರ ಬದಲಾಯಿತು. ಆ ದಿನಗಳಲ್ಲಿ ಅವರ ಕೋಡಿ ಗ್ರಾಮದಲ್ಲಿ ಮಾಡಿಗೆ ಓಡ್ಲು ಹಾಕಿದವರುಯಾರೂ ಇದ್ದಿರಲಿಲ್ಲ. ಎಲ್ಲರೂ ಹುಲ್ಲಿನ ಮನೆಯವರೇ, ಆದರೆ ಶೀನ ಮಯ್ಯ ಐತಾಳರಿಂದ ಸಾಲ ಪಡೆದು ತನ್ನ ಮನೆಗೆ ಓಡನ್ನು ಹಾಕಿದನು. ನಂತರ ಹೆಬ್ಬಾಗಿಲನ್ನೂ ಮಾಡಿದನು. ಈಗೆ ಐತಾಳರ ದಡ್ಡಿನಿಂದ ಶೀನ ಮಯ್ಯ ಅನುಕೂಲಸ್ಥರ ರೀತಿ ಆ ಊರಲ್ಲಿ ಗೋಚರಿಸಿದರೂ ಈ ವಿಚಾರ ಐತಾಳರಿಗೆ ತಿಳಿಯಲಿಲ್ಲ.

ಒಂದು ದಿವಸ ಐತಾಳರು ನದಿಯ ಮೂಡಣದ ಒಂದು ಹಳ್ಳಿಗೆ ಒಂದು ವೈದಿಕ ಮಾಡಿಸಲು ಹೋಗಿದ್ದರು. ಸತ್ಯಭಾಮೆಯ ನೆನಮು ಹುಟ್ಟಿ ಸಂಜೆಗೆ ಮುಂಚಿತವಾಗಿಯೇ ಮನೆಗೆ ಹೊರಟರು.

ಅವರು ನದಿಯನ್ನು ದಾಟಲು ಕಾಲಿರಿಸಿದ್ದಾರೆ.ತಮ್ಮ ಕಡಲುಕರೆಯಲ್ಲಿ ಒಂದು ಹೊಸ ಓಡ್ಲಿನ ಮಾಡು ಕಾಣಿಸಿತು. 'ಇದ್ಯಾರಪ್ಪಾ, ನಮ್ಮ ಅರಾಲಿನಲ್ಲಿ ಓಡ್ಲು ಹಾಕಿದವರು ಎಂದು ವಿಸ್ಮಯಪಟ್ಟರು. ಹೊಳೆಯನ್ನು ದಾಟಿ ಮನೆಗೆ ಹೊರಟರೆ ಅವರ ಕಾಲು ಅಲ್ಲಿಗೇನೇ ಸೆಳೆಯತೊಡಗಿತು, ಯಾರದ್ದಿರಬಹುದು ಈ ಬಂಗ್ಲೆ? ಎಂದು ತಿಳಿಯುವ ಆತುರವಾಯಿತು. ಆದರೆ ಅವರ ಅಗೇಡಿಯ ಬಳಿ ನಾಲ್ಕಾರು ದನಗಳು ದನಗಳು ಮೇಯುವುದನ್ನು ಕಂಡು, ಅವುಗಳನ್ನು ಓಡಿಸ ಹೋಗಿ ಈ ವಿಷಯವನ್ನು ಮರೆತು ತಮ್ಮ ಮನೆಯನ್ನು ಸೇರಿದರು.

ಇದಾದ ಒಂದು ದಿವಸ ಯಾಕೋ ಐತಾಳರಿಗೆ ಶೀನಪ್ಪನ ನೆನಪಾಯಿತು. ಸತ್ಯ ನಮ್ಮ ಶೀನ ಮಯ್ಯ ರೂಪಾಯಿ ತೆಗೆದುಕೊಂಡು ಹೋದ ಗಳಿಗೆಯಿಂದ ಈ ಕಡೆ ಮುಖ ಹಾಕಲಿಲ್ಲ. ಕೊಟ್ಟಾನೋ ಹಿಂದಕ್ಕೆ? ಎಂದು ಅನುಮಾನಿಸಿದರು. ಅದೇ ಕ್ಷಣಕ್ಕೆ ತೊಡಮೆಯನ್ನು ದಾಟಿಕೊಂಡು ಶೀನನ ಸವಾರಿ ಬಂತೇ ಬಂತು. ಐತಾಳರೇ, ಶೀನ ಹೋದನೋ, ಇದ್ದನೋ, ಎಂದು ಸಂಶಯ ಬರಲಿಲ್ಲವೇ ನಿಮಗೆ! ಎಂದು ಹೇಳಿದನು.

ಇತ್ತ ಶೀನನೊಡನೆ ಮಾತನಾಡುತ್ತಿರಬೇಕಲ್ಲ. ಅವನ ಮಾತಿಗೆ ತಾವು ಪ್ರತಿಯಾಗಿ ಅಲ್ಲವಾದರೆ ಶೀನ ದಿನಕ್ಕೆ ನಾಲ್ಕು ಸಾರಿ ಸುಳಿಯುತ್ತಿದ್ದ ಮಹಾರಾಯ ನೀನು ಎಂಟು ದಿವಸವಾದರೂ ಕಾಣಿಸಲಿಲ್ಲವೆಂದರೆ ಏನು ಹೇಳಬೇಕು? ಎಂದರು.

ಶೀನನು ತನ್ನ ಪುರಾಣ ಪ್ರವಚನವನ್ನು ತೊಡಗಿದನು. ಅಂದರೆ ನೋಡಿ ಐತಾಳರೇ, ನನ್ನ ಮನೆಯ ರಗಳೆ ಒಂದಲ್ಲ, ಎರಡಲ್ಲ. ಮನೆಯ ಮುಂದಿನ ಹಳೆಯ ಕೊಟ್ಟಿಗೆಯನ್ನು ಅಳಿದು ಒಂದು ಹೆಬ್ಬಾಗಿಲನ್ನು ಶಾಸ್ತ್ರ ಮಾಡುವ ಎಂದು ಶುರು ಮಾಡಿದೆ. ನಮ್ಮ ಮನೆ ಕಂಡವರೆಲ್ಲ 'ಶೀನ, ಈ ಬೊಬ್ಬರ್ಯನ ಗುಡಿ ಹೀಗೇ ಇರುವುದೇನು? ಎಂದು ನಕಲಿ ಮಾಡಿ ಹೋಗುತ್ತಾರೆ. ನಾಲ್ಕು ಮಕ್ಕಳು ಮನೆಯಲ್ಲಿರುತ್ತ ಮಳೆಗಾಲದಲ್ಲಿ ರಾತ್ರಿ ಬಿದ್ದಿರಲಿಕ್ಕಾದರೂ ಸಮನಾದ ತಾವು ಬೇಡವೇ? ಎಂದು ಪೀಠಿಕೆ ಹಾಕಿದ. ಮುಂದೆ ವಿಷಯ ಬದಲಿಸಿದ ಶೀನ ತನ್ನ ಮಕ್ಕಳನ್ನು ಬೆಂಗಳೂರಿಗೆ ಉದ್ಯೋಗಕ್ಕಾಗಿ ಕಳುಹಿಸುವ ಬಗ್ಗೆ ಐತಾಳರಲ್ಲಿ ತಿಳಿಸುತ್ತಾನೆ.

ನಿನಗೆ ಮರುಳು ಶೀನ! ಯಾವ್ಯಾವ ಜಾತಿಯವರು ತಿಂದು ಬಿಟ್ಟ ಎಂಜಲನ್ನು ತೆಗೆಯಲಿಕ್ಕೆ ದೇವರು ನಮಗೆ ಬ್ರಾಹ್ಮಣ ಜನ್ಮ ಕೊಟ್ಟದ್ದೇನು? ಹೇರ್ಳೆಯವರಿಗೇನು? ಅನ್ನವನ್ನು ಮಾರಿ ಹಣ ಸಂಪಾದಿಸಿದರೂ ಚಿಂತೆಯಿಲ್ಲ. ಬಟ್ಟನಿಂದ ಮನೆಗೆ ಉಪ್ಪರಿಗೆ ಬಿದ್ದರಾಯಿತು, ಎನ್ನುವರು.

ಆಗ ಶೇನ ಮಯ್ಯನು ಐತಾಳರೇ ಹೇರ್ಳೆಯವರ ಹೋಟೇಲು ಬೆಂಗಳೂರಿಗೇನೆ ಭಾರಿ ಹೆಸರಾದ ಹೋಟೇಲು, ತಿರುಪತಿಗೆ ಹೋದವರು ಅಲ್ಲಿ ಹೊಕ್ಕು ಬಂದವರು ಹೇಳುತ್ತಾರೆ ಎನ್ನುವನು. ಬೆಂಗಳೂರು ಸಿಟಿಯಲ್ಲೆ ಅಂಥಾ ಮರ್ಯಾದೆಯಂತೆ ಅವರಿಗೆ. ಅಲ್ಲದೆ ಅಲ್ಲಿ ಬ್ರಾಹ್ಮಣರಿಗೆ ಮಾತ್ರ ಊಟವಂತೆ. ಆದ್ದರಿಂದ ಬ್ರಾಹ್ಮಣರಾದರೇನು? ಮನೆಯಲ್ಲೆ ಕುಳಿತುಕೊಂಡರೆ ಹೊಟ್ಟೆ ತುಂಬಿತೇ ಎಲ್ಲಾ ಆಪದ್ಧರ್ಮ ವಿಶ್ವಾಮಿತ್ರನು ಬರಗಾಲಕ್ಕೆ ನಾಯಿ ಮಾಂಸ ತಿಂದನಂತೆ, ಅಂಥವರಿಗೇ ಕಾಲಗತಿಯಿಂದ ಹಾಗಾಯಿತಂತೆ ಎಂದು ಹೇಳುತ್ತಾ ಜೀವನ ನಿರ್ವಹಣೆಗೆ ಯಾವುದಾದರೂ ವೃತ್ತಿ ಮಾಡಲೇಬೇಕೆಂಬ ಅನಿವಾರ್ಯತೆ ಯನ್ನು ಹೇಳುವನು. ಅಂತೆಯೇ ತನ್ನ ಹಿರಿಯ ಮಕ್ಕಳನ್ನು ಬೆಂಗಳೂರಿಗೆ ಉದ್ಯೋಗಕ್ಕೆ ಕಳುಹಿಸುವನು.

ಕ್ರಮೇಣ ಶೀನ ಮಯ್ಯನ ಮಕ್ಕಳು ಬೆಂಗಳೂರಿನಲ್ಲಿ ಹೋಟೇಲ್‌ನಲ್ಲಿ ದುಡಿದು ತಂದೆಗೆ ಹಣ ಕಳುಹಿಸುವರು. ಇದರಿಂದ ಶೀನ ಮಯ್ಯ ಊರಿನಲ್ಲಿ ಹಣವಂತನಾಗಿ ಒಂದೊಂದೆ ಆಸ್ತಿಯನ್ನು ಕ್ರಯಕ್ಕೆ ತೆಗೆದುಕೊಳ್ಳುವನು. ಆಗ ಐತಾಳರಿಗೂ ಆಸ್ತಿ ಮಾಡಬೇಕು ಎಂದು ಮನಸ್ಸಾಗಿ ಅವರೂ ಆಸ್ತಿ ಪಡೆದುಕೊಳ್ಳವರು.ಇದು ಕ್ರಮೇಣ ಅವರಲ್ಲಿ ವೈಮನಸ್ಸಿಗೆ ಕಾರಣವಾಗಿ ಪರಿಣಮಿಸುವುದು.

ಶೀನ ಮಯ್ಯನ ಮತ್ತು ಐತಾಳರ ಕಾಳಗವು ಬಲವಾಗಿ ಅವರೊಡನೆ ಮಾತುಕತೆಗಳೂ ಕ್ರಮೇಣ ನಿಲ್ಲುತ್ತ ಬಂದವು. 'ಯಾರ್‍ಯಾರ ದುಡ್ಡಿನಿಂದ ಹೆಬ್ಬಾಗಿಲನ್ನು ಮಾಡಿದನೆಂದು ಐತಾಳರು ಹೇಳಿದರೆ, ಹೊಟ್ಟೆಗೂ ತಿನ್ನದೆ ಕಾಸು ಮಾಡಿದರು' ಎಂದು ಐತಾಳರ ವಿಷಯ ಶೀನ ಮಯ್ಯ ಹೇಳುವನು.

ಇತ್ತ ಲಚ್ಚ ಬೆಳೆಯುತ್ತಾ ಬಂದನು. ತನ್ನ ತಾಯಿಯ ಮೇಲೆ ಹೆಚ್ಚು ಆಸಕ್ತಿ ವಹಿಸದ ಲಚ್ಚ ದೊಡ್ಡ ತಾಯಿಯಾದ ಪಾರೋತಿಯೊಡನೆ ಹೆಚ್ಚು ಸಮಯ ಕಳೆಯಲು ಇಷ್ಟ ಪಡುತ್ತಾನೆ. ಸ್ನಾನಕ್ಕೆ, ಊಟಕ್ಕೆ, ಮಲಗಿ ನಿದ್ರೆ ಹೋಗುವುದಕ್ಕೆ ಲಚ್ಚನಿಗೆ ದೊಡ್ಡ ತಾಯಿ ಬಳಿಯಿಲ್ಲದಿದ್ದರೆ ಸಮಾಧಾನವೇ ಆಗುತ್ತಿರಲಿಲ್ಲ.

ರಾಮ ಐತಾಳರಿಗೆ ಮಗಳು ಹುಟ್ಟುವ ಕಾಲಕ್ಕೆ ಲಚ್ಚನಿಗೆ ಮೂರುವರೆ ವರ್ಷ ಕಳೆದಿತ್ತು. ಲಚ್ಚನಿಗೆ ನಾಲ್ಕು ವರ್ಷ ತುಂಬಿ ಐದು ಹಿಡಿಯುವಲ್ಲಾಯಿತು ಎಂಬ ಸಮಯಕ್ಕೆ ಒಂದು ಬಿಡುಗಡೆಯ ಹಾದಿ ಅವರಿಗೆ ದೊರೆಯಿತು. ಲಚ್ಚನ ವಿದ್ಯಾಭ್ಯಾಸದ ದೃಷ್ಟಿಯಿಂದ ಅವನನ್ನು ಅಜ್ಜನ ಮನೆಯಲ್ಲಿ ನಿಲ್ಲಿಸಿ, ವಿದ್ಯಾಭ್ಯಾಸ ಮಾಡಲು ನಿರ್ಧರಿಸಲಾಯಿತು. ವಿಜಯದಶಮಿಯ ದಿವಸ ಐತಾಳರು ಕೋಡಿಯಿಂದ ಪಡುಮುನ್ನೂರಿಗೆ ತೆರಳಿ ಅವನ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಿದರು.

ಲಚ್ಚನು ಕೋಡಿಯನ್ನು ಬಿಟ್ಟು ಪಡುಮುನ್ನೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿಷಯವು ಸ್ವ ಗ್ರಾಮದಲ್ಲಿ ಸಾಕಷ್ಟು ಪರಿಹಾಸ್ಯಕ್ಕೆ ಗುರಿಯಾಯಿತು. ಲಚ್ಚನು ಈ ನಡುವೆ ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಂದುವರಿಸಿದ, ಪ್ರಾರಂಭದ ಎರಡು ಮೂರು ತಿಂಗಳ ಕಾಲ ಅವನು ನೀರು ತಪ್ಪಿದ ಮೀನಿನಂತಾಗಿದ್ದನು. ಆದರೆ ಕ್ರಮೇಣ ಅಜ್ಜ ಅಜ್ಜಿಯರ ವಾತ್ಸಲ್ಯ ದಾಸಪ್ಪ ಮಾಸ್ತರರ ಉಬ್ಬಿಸಾಟ ಅವರು ಇತರರಿಗಿಂತ ಅಧಿಕವಾಗಿ ತನಗೆ ಕೊಡುತ್ತಿರುವ ಸಲಿಗೆಯಿಂದ ಅವನು ಪಡುಮುನ್ನೂರೇ ತನ್ನ ಮನೆಯೆಂದು ತಿಳಿದುಕೊಂಡನು. ರಜೆ ಬಂದಾಗಲೆಲ್ಲ ಊರಿಗೆ ಹೋಗಿ ಬರುತ್ತಿದ್ದನು. ಅಪರೂಪಕ್ಕೆ ಬಂದ ಕುಮಾರನ ವಿಷಯವಾಗಿ ಮನೆಯಲ್ಲಿ ಆದರ, ಉಪಚಾರಗಳು ಬೇಕಷ್ಟು ನಡೆಯುತ್ತಿದ್ದವು. ಪಡುಮುನ್ನೂರಿನ ಶಾಲೆಯ ವಿದ್ಯಾಭ್ಯಾಸ ಮುಗಿದಾಗ ಮುಂದಿನ ವ್ಯಾಸಂಗಕ್ಕಾಗಿ ಉಡುಪಿಗೆ ಪ್ರಯಾಣ ಬೆಳೆಸಬೇಕಾಯಿತು.

ಐತಾಳರಿಗೆ ತನ್ನ ಮಗ ಇಂಗ್ಲಿಷ್ ಕಲಿತು ವಕೀಲನಾಗಿ ಊರಿನಲ್ಲಿ ದೊಡ್ಡ ವ್ಯಕ್ತಿ ಅನಿಸಿಕೊಳ್ಳಬೇಕೆಂಬ ಆಸೆ. ಆದರೆ ಲಚ್ಚ ಬೆಳೆಯುತ್ತಿದ್ದ ಹಾಗೆ ಅವನ ಗುಣ ನಡತೆಯೂ ಬದಲಾಯಿತು. ಅವನು ಉಡುಪಿಯ ನಂತರ ಕುಂದಾಪುರದಲ್ಲಿ ತನ್ನ ವ್ಯಾಸಂಗ ಮುಂದುವರಿಸಿದಾಗ ಅಲ್ಲೇ ನಿಲ್ಲುವ ನಿರ್ಧಾರ ಮಾಡಿದರು. ಇದೇ ಸಮಯದಲ್ಲಿ ಲಚ್ಚನಿಗೆ ಅಲ್ಲಿನ ಗೆಳೆಯರ ಸಹವಾಸದಿಂದ ಹೋಟೇಲು ತಿಂಡಿಗಳನ್ನು ತಿನ್ನುವುದು, ಇಸ್ಪೀಟ್ ಆಡುವುದು ಮುಂತಾದ ಕೆಟ್ಟ ಗುಣಗಳೂ ಸೇರಿಕೊಂಡವು.

ತನಗೆ ಹಣ ಅಧಿಕವಾಗಿ ಬೇಕಾದಾಗ ತನ್ನ ಅಜ್ಜನ ಮನೆಯಿಂದಲೂ, ಕೆಲವು ಸಲ ತಂದೆಯ ಮನೆಯಿಂದಲೂ ಹಣವನ್ನು ಪಡೆಯುತ್ತಿದ್ದನು. ಲಚ್ಚನು ಹಾಗೂ ಹೀಗೂ ಇಂಗ್ಲೀಷನ್ನು ಕಲಿತು ವಿದ್ಯೆಯಲ್ಲಿ ಮುಂದುವರಿದನು. ಆದರೆ ಅವನಿಗೆ ತಂದೆಯ ಮೇಲೆ ಅಸಮಾಧಾನ. ಕಾರಣ ಅವರು ಜಿಪುಣರೆಂದು. ತಾನು ಕೇಳಿದ ಹಾಗೆ ತನಗೆ ಬೇಕಾದಷ್ಟು ಹಣ ಒದಗಿಸಲಿಲ್ಲವೆಂದು, ಓದಿನಲ್ಲಿ ಆಸಕ್ತಿಯುಳ್ಳವರು ಮತ್ತಾವ ಹವ್ಯಾಸಕ್ಕೂ ಸಿಕ್ಕಬಾರದೆಂಬುದನ್ನು ಮರೆತು ಕುಂದಾಪುರದಲ್ಲಿ ಅವನು ಕೆಟ್ಟ ದಾರಿಗೆ ಬಿದ್ದನು. ಅವನಿಗೆ ಅಂಥ ಗೆಳೆಯರು ದೊರೆತರು. ತನ್ನ ಈ ವ್ಯಾಪಾರಗಳಿಗೆ ತಂದೆ ಹಣ ಕೊಡಲಿಲ್ಲವೆಂಬುದು ಅವನ ಅಸಂತೃಪ್ತಿಗೆ ಕಾರಣವಾಯಿತು. ತನ್ನ ಮಗಳಾದ ಸುಬ್ಬಿಗೆ ಮಾತ್ರ ಅಷ್ಟು ಹಣವನ್ನು ಚೆಲ್ಲಿದನಲ್ಲಾ ಎಂದು ಅಸೂಯೆ. ಮನೆಗೆ ಬಂದರೆ ತಂದೆಯೊಡನೆ ಮಾತಿಲ್ಲ. ಆಡಿದವು ಕೆಲವು ನಂಜು ನುಡಿಗಳು. ತಾಯನ್ನು ಗೆಣಿಸದೆ ಹಿರಿಯರ ಅಂಕೆಗೆ ಸಿಕ್ಕದೆ ಅವನು ತನ್ನ ದಾರಿಯನ್ನೇ ಹಿಡಿದನು. ಹೀಗಾಗಿ ಐತಾಳರ ಆಸೆಯೆಲ್ಲಾ ಮಣ್ಣುಪಾಲಾಗುವ ಸ್ಥಿತಿ ಬಂತು. ಮದುವೆಯಾದರೆ ದಾರಿಗೆ ಬಂದಾನೆಂದು ಅದನ್ನೂ ಮಾಡಿಯಾಯಿತು.

[83]"ಮದುವೆಯ ನಾಲ್ಕು ದಿವಸ ಕಾಲ ಅಷ್ಟೊಂದು ಹಿಗ್ಗಿನಲ್ಲಿ ಕಳೆದು ಮದುಮಕ್ಕಳು ತಮ್ಮ ಮನೆಗೆ ಬಂದರು. ಮನೆಯನ್ನು ತುಂಬಿದರು. ಈ ಮದುವೆಯು ಕಳೆದ ಅನಂತರವೇ ಐತಾಳರು ಮಗನೊಡನೆ ಚಂದವಾಗಿ, ಮಾತನಾಡತೊಡಗಿದ್ದು."[83]

ಮಂಗಳೂರಿನ ವಕೀಲರು ವಾಸುದೇವಯ್ಯನವರು ಬೀಗರಾದರು. ಲಚ್ಚ ಅವರ ಮನೆಯಳಿಯನಾಗಿ ಅಲ್ಲೇ ಓದಿದನು. ಎಫ್.ಎ. ಪರೀಕ್ಷೆಯಲ್ಲಿ ಉತ್ತೀರ್ಣನೂ ಆದನು. ಅವನ ಸಂಸರ್ಗದಿಂದ ಅವನ ಹೆಂಡತಿ ನಾಗವೇಣಿ ಕಾಯಿಲೆಯಿಂದ ನರಳುವಂತಾಯ್ತು. ಆಮೇಲೆ ಮದ್ರಾಸಿಗೆ ಬಿ.ಎ. ಓದಲಿಕ್ಕೆ ಅವನು ಹೊರಟನು. ಐತಾಳರ ಬೊಕ್ಕಸ ಬರಿದಾಗುವುದೇ ಅವನ ಹಂಬಲವಾಗಿತ್ತು. ಬಿ.ಎ. ಮುಗಿಸಿ ಮನೆಗೆ ಬಂದನು. ಅಲ್ಲಿ ನಿಲ್ಲಲು ಮನಸ್ಸಿಲ್ಲದೆ ಅತ್ತ ಇತ್ತ ಅಲೆದಾಡಿ ಹಿರಿಯರ ಆಸೆಗಳನ್ನು ಚಿವುಟಿ, ಪ್ರೀತಿಯನ್ನು ತಳ್ಳಿ, ಸೇವೆಯನ್ನು ತೊರೆದು, ಸ್ವೇಚ್ಛಾ ವೃತ್ತಿಯಲ್ಲಿ ಬಾಳತೊಡಗಿದನು. ಈ ಕೊರಗಿನಿಂದ ಅವನ ದೊಡ್ಡ ತಾಯಿ ಪಾರೋತಿ ಗತಿಸಿದಳು. ಐತಾಳರು ಕಣ್ಣುಮುಚ್ಚಿದರು. ಲಚ್ಚನಾದರೋ ತಿಂಗಳಿಗೆ ಒಂದೂರಂತೆ ಸುತ್ತಾಡಿ ಸಾಲ ಮಾಡಿ ಕಾಯಿಲೆಯ ಕುಪ್ಪೆಯಾಗಿ ಭಂಡ ಬದುಕನ್ನು ಸಾಗಿಸುತ್ತಿದ್ದನು. ತಂದೆ ಸಾಯುವಾಗ ಅವನು ಎಲ್ಲೋ ಯಾರಿಗೂ ತಿಳಿಯದು.

ಐತಾಳರು ಸಾಯುವ ಮುಂಚೆ [84]"ನನ್ನ ಆಸ್ತಿಯಲ್ಲಿ ಮುಕ್ಕಾಲು ಮೂರು ವೀಸ ನನ್ನ ಸ್ವಾರ್ಜಿತ. ಅದನ್ನು ಸೊಸೆಯ ಹೆಸರಿಗೆ ಮಾಡುತ್ತೇನೆ. ಒಂದು ಸ್ವಲ್ಪ ನಮ್ಮ ಸುಬ್ಬಿಗೂ ಕೊಡುತ್ತೇನೆ. ನನ್ನ ಅಜ್ಜಿ ನನಗೆ ಬಿಟ್ಟ ಆಸ್ತಿಯ ಚೂರನ್ನು ಮುಟ್ಟುವುದಿಲ್ಲ. ಅವನದನ್ನು ತಿನ್ನಲಿ, ಮಾರಲಿ, ಈ ಹೊಸ ಮನೆಯ ಹಂಚನ್ನು ಕಿತ್ತು ಆಟವಾಡಲಿ"[84] ಎಂದು ಮನೆಯ ಆಸ್ತಿಯನ್ನು ಪಾಲು ಮಾಡಿದ್ದರು.

ಇದನ್ನು ತಿಳಿದ ಲಚ್ಚ ಸತ್ತ ತಂದೆಯ ಮೇಲೆ ವಿಷವನ್ನು ಕಾರಿದನು. ಹೆಂಡತಿಯನ್ನು ಮರುಳು ಮಾಡಿ ಅವಳಿಂದ ಹಣದ ಸುಳಿಗೆಗೆ ತೊಡಗಿದನು. ನಾಗವೇಣಿಗೆ ಇವನ ನಡತೆಯನ್ನು ಕಂಡು ದ್ವೇಷವೇ ದಿನದಿನಕ್ಕೆ ಬೆಳೆಯುತ್ತಿದ್ದರೂ ಒಂದೊಂದು ಸಲ ಕೈಹಿಡಿದ ಗಂಡನಿಗೆ ಸೋಲಬೇಕಾಯ್ತು. ಇದರ ಫಲವಾಗಿ ಪಡೆದ ಮೊದಲೆರಡು ಮಕ್ಕಳು ಬೇನೆಗೆ ತುತ್ತಾಗಿ ಸತ್ತವು. ಆಸ್ತಿ ಲಚ್ಚನ ಕೈಗೆ ಸಿಕ್ಕಿ ಹಾಳಾಯ್ತು.

[85]"ಲಚ್ಚ ಎಲ್ಲವನ್ನು ಯಾರಿಗೋ ಮಾರಿ ಊರು ಬಿಟ್ಟು ಹೋಗಿ ಆ ಹಣದಿಂದ ಹೋಟೇಲೊಂದನ್ನು ಸ್ಥಾಪಿಸಿ, ಜೂಜಿನಲ್ಲಿ, ಇಸ್ಪೀಟಿನಲ್ಲಿ, ಕುಲಟೆಯರಲ್ಲಿ ನಿರತನಾದನು. ಇಟ್ಟ ಹೋಟೆಲೂ ಹಾಗೆಯೇ ಕರಗಿತು."[85]

ಇತ್ತ ಕಡೆ ನಾಗವೇಣಿ ತಂದೆಯ ಆರೈಕೆಯಲ್ಲಿ ಕಷ್ಟವನ್ನು ತಿಳಿಯದೆ ಬೆಳೆದವಳು. ತನ್ನ ಹೊಟ್ಟೆಗಾಗಿ ವ್ಯವಸಾಯದ ಕೆಲಸ ಮಾಡಬೇಕಾಯ್ತು. ಅವಳಿರುವ ಮನೆ, ಸ್ವಲ್ಪ ಗದ್ದೆ ಹೊರತಾಗಿ ಎಲ್ಲವೂ ಲಚ್ಚನ ಬಾಯಿಗೆ ಆಹುತಿಯಾದವು. ಅವಳ ಅತ್ತೆ ಸತ್ಯಭಾಮೆಯೂ, ಸರಸೋತಿಯೂ ಕಾಶೀಯಾತ್ರೆ ಹೋದ ಸಮಯದಲ್ಲಿ ಲಚ್ಚ ಬಂದು ಇದ್ದ ಮನೆಯನ್ನು ಮಾರಿ ಹೋದನು. ನಾಗವೇಣಿ ಮೂರನೆಯ ಸಲಕ್ಕೆ ಬಸಿರಾಗಿ ಒಂದು ಮಗುವನ್ನು ಹಡೆದಳು.

ಕಾಶೀಯಾತ್ರೆಯಿಂದ ಹಿಂದಿರುಗಿದ [86]"ಸತ್ಯಭಾಮೆ, ಸರಸೋತಿಯರು ತಮ್ಮ ಮನೆಯನ್ನು ಸೇರಿದರು. ಆ ಎರಡು ದಿನ ಅವರ ಮನೆಯು ಜಾತ್ರೆಯ ಮನೆಯಾಯಿತು. ಊರ ಮುತ್ತೈದೆಯರೂ, ಮುದುಕರೂ ಬಂದು ಬಂದು ತಂಬಿದರು. 'ಅಜ್ಜಿ ನಿಮ್ಮ ಯೋಗ್ಯತೆ ದೊಡ್ಡದು! ಇಲ್ಲವಾದರೆ ಈ ವಯಸ್ಸಿನಲ್ಲಿ ನೀವು ಯಾತ್ರೆ ಮುಗಿಸಿ ಬಂದಿರೆಂದರೆ ದೇವರದ್ದೇ ಆಟ!' ಎಂದು ಅವಳ ಕಾಲಿಗೆರಗಿದರು. ಸತ್ಯಭಾಮೆಯೂ 'ಧನ್ಯೆ' ಎನಿಸಿಕೊಂಡಳು."[86]

ಇದೇ ಸಮಯದಲ್ಲಿ ಲಚ್ಚ ಮನೆಗೆ ಬಂದು ಸತ್ಯಭಾಮೆ ಸರಸೋತಿಯರಲ್ಲಿ ಅಸಹ್ಯವಾಗಿ ಮಾತನಾಡಿ ಅವರ ಮನವನ್ನು ನೋಯಿಸಿ ಮತ್ತೆ ಮನೆ ಬಿಟ್ಟು ತೆರಳುವನು. ಅದೇ ಸಮಯದಲ್ಲಿ ಲಚ್ಚ ಪಡೆದ ಹಿಂದಿನ ಸಾಲಕ್ಕೆ ಅವನನ್ನು ಜೈಲಿಗೆ ಒಯ್ಯುವ ಕಾರ್ಯವೂ ನಡೆಯುತ್ತದೆ. ಆದರೆ ನಾಗವೇಣಿ ಇದನ್ನು ತಪ್ಪಿಸಿದಳು. [87]"ಇನ್ನಾದರೂ ನೀನು ಸಂಭಾವಿತನಾಗಿ ಮನೆಯಲ್ಲಿ ಬಿದ್ದಿರುವುದಾದರೆ ನಿನ್ನ ಆರೋಗ್ಯವನ್ನು ಗುಣಪಡಿಸಿಕೊಂಡು ಮನೆಯವರಿಗೆ ಹಿಂಸೆ ಕೊಡದೆ ಇರುವುದಾದರೆ ಈ ಸಾಲ ತೀರಿಸುತ್ತೇನೆ. ಇಲ್ಲವಾದರೆ ನೀನು ಊರಲ್ಲಿರುವುದಕ್ಕಿಂತ ಆ ಊರಲ್ಲಿರುವುದೇ ವಾಸಿ"[87] ಎಂದಳು. ಆದರೆ ಒಮ್ಮೆ ಒಪ್ಪಿಕೊಂಡ ಲಚ್ಚ ಮುಂದೆ ತನ್ನ ಹಾದಿಯಲ್ಲೇ ಮುಂದುವರೆದು ಮನೆಯನ್ನು ತ್ಯಜಿಸುವನು.

[88]"ನಾಗವೇಣಿ ಮೂರನೆಯ ಹೆರಿಗಾಗಿ ತಾಯಿ ಮನೆಗೆ ಹೋಗಲು ಇಷ್ಟಪಡಲಿಲ್ಲ.. ಸರಸೋತಿಯು ಒತ್ತಾಯಪಡಿಸಿದಳು, ಯಾರಿದ್ದಾರೆ ಮನೆಯಲ್ಲಿ? ನಾನು ಹೋಗುವುದು ಸಮವಲ್ಲ ಎಂದು ಹೇಳಿದಳು. ಆದರೆ ತಿಂಗಳು ತಿಂಗಳು ತುಂಬುವ ಮೊದಲೇ ಅವಳಿಗೆ ಬೇನೆ ತೊಡಗಿತು. ಅವಳ ಆರೋಗ್ಯವು ಕ್ಷೀಣಿಸಿ ಬಂದಿತು. ಆದರೂ ದೇವರ ದಯೆಯಿಂದ ಅಪಾಯವಿಲ್ಲದೆ ಹಡೆದಳು. ಹಡೆದುದು ಗಂಡು ಮಗುವನ್ನು ಮಗುವು ದುರ್ಬಲವಾಗಿತ್ತು."[88]

ಹುಟ್ಟುವಾಗ ತಂದೆಯಿದ್ದರೂ ಇಲ್ಲದಂತಾಯಿತು. ಗಂಡ ಬದುಕಿದ್ದರೂ ತಾನು ವಿಧವೆ ಎಂಬ ಭಾವನೆ ನಾಗವೇಣಿಗೆ ಬಂತು. ಹುಡುಗನಿಗೆ ನಾಮಕರಣವಾಗುವಾಗ ತಂದೆಯ ಮುಖವಿಲ್ಲ. ಕರುಣೆ ಅವನ ಬಳಿ ಸುಳಿಯಲೇ ಇಲ್ಲ. ನಾಗವೇಣಿಗೆ ಬಡತನ ಇನ್ನೂ ಭಯಂಕರವಾಯಿತು. ಯಾರು ಎಷ್ಟು ಕರೆದರೂ ತನ್ನ ಊರನ್ನು ಬಿಡುವವಳಲ್ಲ ಅವಳು. ಇನ್ನೊಬ್ಬರ ಹಂಗಿನ ಅನ್ನ ಅವಳಿಗೆ ನರಕವೆನಿಸಿತು. ತನ್ನ ಬಾಳನ್ನು ಸತ್ಯಭಾಮೆ, ಸರಸೋತಿಯರ ಸೇವೆಗೆ ಸವೆಸಿದಳು. ಕೊಂಚ ಕಾಲದ ಮೇಲೆ ವಯಸ್ಸಾಗಿದ್ದ ಸರಸೋತಿಯು ತೀರಿಕೊಂಡಳು.

ದಿನಗಳು ಉರುಳಿದಂತೆ ನಾಗವೇಣಿಯ ಕಷ್ಟಗಳು ಬೆಳೆಯುತ್ತಾ ಹೋಯಿತು. ಒಂದು ದಿನ ನಾಗವೇಣಿ ತನಗೆ ಈ ಬದುಕೇ ಬೇಡ ಎಂದು ಅಳುವೆಯಲ್ಲಿ ಹಾರಿ ಸಾಯಲು ಪ್ರಯತ್ನಿಸುವಳು ಆದರೆ ಅದೇ ಸಮಯಕ್ಕೆ ಅಲ್ಲಿಗೆ ಬಂದ ಬೆಸ್ತರು ಅವಳನ್ನು ರಕ್ಷಿಸುವರು. ಇದಾಗಿ ಕೆಲವು ಸಮಯದಲ್ಲೇ ಮತ್ತೆ ಅವಳ ತಂದೆ ಅವಳನ್ನು ಬಲವಂತದಿಂದ ಮಂಗಳೂರಿಗೆ ಕರೆದುಕೊಂಡು ಹೋಗುವರು.

ನಾಗವೇಣಿ ತನಗಲ್ಲದಿದ್ದರೂ ತನ್ನ ಮಗುವಿಗಾಗಿ ಮಂಗಳೂರಿಗೆ ಹೋಗುವಳು.ಅಲ್ಲಿ ರಾಮನ ವಿದ್ಯಾಭ್ಯಾಸವೂ ಮುಂದುವರಿಯುತ್ತದೆ. ನಾಗವೇಣಿ ಸಂಗೀತ ಕಲಿತು ತನ್ನ ದುಃಖವನ್ನು ಮರೆಯಲು ಪ್ರಯತ್ನಿಸುತ್ತಾಳೆ. ಮುಂದೆ ನಾಗವೇಣಿ ತನ್ನ ತಂದೆಯನ್ನು ಕಳೆದುಕೊಳ್ಳುವಳು ನಂತರ ಅಣ್ಣನ ಮನೆಯಲ್ಲಿ ಸ್ವಲ್ಪ ದಿನವಿದ್ದರೂ ಅತ್ತಿಗೆಯ ಗುಣನಡತೆಯಿಂದ ಬೇಸತ್ತ ನಾಗವೇಣಿ ತಾಯಿಯನ್ನು ಕರೆದುಕೊಂಡು ಮತ್ತೆ ತನ್ನ ಹಿಂದಿನ ಮನೆ ಕೋಡಿಗೆ ಬಂದು ವಾಸಿಸಲಾರಂಭಿಸುತ್ತಾಳೆ.

[89]"ನಾಗವೇಣಿ ಎಲ್ಲರನ್ನು ಕರೆದುಕೊಂಡು ತಮ್ಮ ಮನೆಗೆ ನಡೆದಳು. ಆ ಕೆರೆಯ ದಂಡೆಯನ್ನು ತುಳಿಯುವಾಗ ಹೂವಿನ ಹಾಸಿಗೆಯಲ್ಲಿ ನಡೆದಂತಾಯಿತು. ಮಗು ರಾಮಾ, ಇದು ಯಾರ ಮನೆ ನೆನಪಿದೆಯೋ ಎಂದಳು."[89] ಹೀಗೆ ಮತ್ತೆ ನಾಗವೇಣಿಗೆ ಕೋಡಿ ಮನೆ ವಾಸಸ್ಥಾನವಾಯಿತು. ಮುಂದೆ ಯಾವುದೇ ಕಷ್ಟ ಬಂದರೂ ತನ್ನ ಮನೆ ಬಿಟ್ಟು ಹೋಗುವುದಿಲ್ಲವೆಂದು ನಾಗವೇಣಿ ನಿರ್ಧರಿಸಿ, ಅಲ್ಲೇ ವಾಸಿಸಲು ಪ್ರಾರಂಭಿಸಿದಳು.

ಇದೇ ಸಮಯದಲ್ಲಿ ರಾಮನೂ ಬೆಳೆಯುತ್ತಿದ್ದ ಅವನಿಗೆ ತನ್ನ ತಾಯಿಯ ಕಷ್ಟಗಳೂ ಅರ್ಥವಾಗುತ್ತಿತ್ತು. ಇನ್ನೊಂದೆಡೆಯಿಂದ ತಾನು ಚೆನ್ನಾಗಿ ಕಲಿತು ವಿದ್ಯಾವಂತನಾಗಿ ತನ್ನ ತಾಯಿಯ ಕಷ್ಟವನ್ನು ಕಡಿಮೆ ಮಾಡಬೇಕೆಂದು ಯೋಚಿಸುವರು.

ರಾಮನು ತನ್ನ ಮುಂದಿನ ವಿಧ್ಯಾಭ್ಯಾಸಕ್ಕಾಗಿ ಮದ್ರಾಸಿಗೆ ಹೋಗಲು ನಿರ್ಧರಿಸುವನು. ಆದರೆ ಯಾರದೇ ಪರಿಚಯವಿಲ್ಲದೆ ಮಾಸ್ತರ ಸಹಾಯದಿಂದ ಮದ್ರಾಸಿಗೆ ಪಯಣ ಬೆಳೆಸುವನು.

[90]"ಒಂಟಿಯಾಗಿ, ಯಾರದೂ ಗುರುತಿಲ್ಲದ ರಾಮನು, ರಾಮರಾಯನಾಗಿ ರೈಲು ಬಂಡಿಯಿಂದ ಕತ್ತನ್ನು ಹೊರಕ್ಕೆ ಆಗಾಗ ತೂರುತ್ತಾ ಸುತ್ತಲಿನ ಬಯಲನ್ನು ನೋಡುತ್ತಾ ಸಾಗಿದನು. ರಾತ್ರಿ ಬಂದಿತು. ಬಂಡಿಯಲ್ಲಿ ಮಲಗಿಕೊಂಡರೂ ಬರಿ ಬಾನಿನಂತೆ ಬೋಳಾಗಿತ್ತು ಅವನ ಮನಸ್ಸು. ಎಲ್ಲಾ ಹೊಸ ಆವರಣ, ಎಲ್ಲ ಅನಿಶ್ಚಿತತೆಯ ಆಟ, ಮರುದಿನ ಬೆಳಗ್ಗೆ ಮದ್ರಾಸು ರೈಲು ನಿಲ್ದಾಣ ಬರುತ್ತಲೇ ತನ್ನ ಹಾಸಿಗೆ ಕಟ್ಟನ್ನು ಸುರುಳಿ ಸುತ್ತಿ ಹಿಡಿದುಕೊಂಡು ಕೆಳಗೆ ಇಳಿದನು."[90]

ರಾಮನು ಎಷ್ಟು ಸಮಯದ ತನಕ ಹಾಗೆ ರೈಲ್ವೆ ನಿಲ್ದಾಣದ ಗೇಟಿನಿಂದ ಬೀದಿಯನ್ನು ನೋಡುತ್ತಾ ನಿಂತನೋ, ಆದರೆ ಯಾರೊಬ್ಬರೂ ಪರಿಚಯವಿದ್ದವರೂ ಸಿಗಲಿಲ್ಲ. ಮಧ್ಯಾಹ್ನ ಸರಿದು ಸಂಜೆ ಬಂದಿತು. ತಾನು ಕೇಳಿದ ಒಂದೆರಡು ಬೀದಿಯ ಹೆಸರುಗಳನ್ನು ಹುಡುಕಿಕೊಂಡು ಅಲೆಯತೊಡಗಿದನು. ತನ್ನ ಗುರುಗಳು ಕೊಟ್ಟ ಪರಿಚಯ ಪತ್ರಗಳ ಉಪಯೋಗ ಮಾಡಲು ಹವಣಿಸಿದನು. ಅವೆಲ್ಲ ಅವನ ಕಾಲೇಜು ಪ್ರವೇಶಕ್ಕಾಗಿ ಬೇಕಾಗಿದ್ದುವೇ ಹೊರತು ವಸತಿಯ ಏರ್ಪಾಡಿಗಲ್ಲ.

ಕೊನೆಗೆ ನಿರಾಶೆಗೊಂಡು ಕಾಲೇಜು ಇರುವುದೆಲ್ಲೆಂದು ಕೇಳಿ ತಿರುವಲ್ಲಿಕ್ಕೇಣಿಯ ಕಡಲ ಕಿನಾರೆಯನ್ನು ಸೇರಿದನು. ಅಲ್ಲೂ ಕಡಲು ವಿಶಾಲವಾಗಿ, ಸುಂದರವಾಗಿ ಅದರ ಎದುರು ಮರಳಿನ ಚಾಪೆ ಹರಡಿತ್ತು.

ಪ್ರೆಸಿಡೆನ್ಸಿ ಕಾಲೇಜು ವಿದ್ಯಾಮಂದಿರದ ಮುಂದುಗಡೆ ಹೋಗಿ ಮರಳಿನ ರಾಶಿಯಲ್ಲಿ ಕುಳಿತು ನೋಡುತ್ತಾ ಕುಳಿತನು. ನಾಳೆ ತನಗೆ ಅದೃಷ್ಟವಿರುವುದಾದರೆ ಆ ಸ್ಥಳದಲ್ಲಿ ಜೀವನ ಸಾಗಿಸಬೇಕೆಂಬ ಕನಸು ಕಾಣತೊಡಗಿದನು.ಆ ಸಮಯಕ್ಕೆನೇ ಅವನ ಹೆಗಲ ಮೇಲೆ ಯಾರೋ ಬಲವಾಗಿ ಬಡಿದರು. 'ರಾಮಾ' ಎಂದರು. ಮೈಮೇಲೆ ಹುಲಿ ಎರಗಿದರೆ ಆಗುವಷ್ಟು ಭೀತಿ ಅವನಿಗಾಯಿತು. ಏನಿದು? ಇಲ್ಲಿ? ಎಂಬ ಪ್ರಶ್ನೆ ಕೇಳಿಸಿತು.ಹಿಂದಿರುಗಿ ನೋಡುತ್ತಾ ತನ್ನ ಚಿಕ್ಕಮ್ಮನ ಗಂಡ ಮಾಧವ ತನ್ನೆರಡೂ ಮಕ್ಕಳನ್ನು ಕರೆದುಕೊಂಡು ·ಕಡಲಿನ ಕಿನಾರೆಗೆ ವಿಹಾರಕ್ಕೆ ಬಂದಿದ್ದನು.

ರಾಮನು ತನ್ನ ಚಿಕ್ಕ ತಾಯಿ ಕೃಷ್ಣವೇಣಿ ಮದ್ರಾಸಸಿನಲ್ಲಿರುವಳೆಂಬ ನೆನವರಿಕೆಯನ್ನು ಕೂಡಾ ಮಾಡಿರಲಿಲ್ಲ. ನಂಟರ ಹಂಗೇ ತನಗೆ ಬೇಡ ಎಂಬ ಭಾವನೆ ಬಲವಾಗಿತ್ತು. ಆದರೆ ಆ ಗಳಿಗೆಯಲ್ಲಿ ಮಾಧವನ ಮುಖವನ್ನು ನೋಡಿ ಅಷ್ಟು ಆನಂದವಾಗಲಿಲ್ಲ. ತಾನು ಬಂದ ಕತೆಯನ್ನು ತಿಳಿಸಿದನು. ಅನಂತರ ಇರುವುದಕ್ಕೊಂದು ತಾವನ್ನು ಹುಡುಕುತ್ತಿದ್ದೇನೆ. ಇನ್ನೂ ಸಿಗಲಿಲ್ಲ·ಎಂದನು. ಮಾಧವ ನಕ್ಕನು. 'ಏನಿದು ನಿನ್ನ ಚಿಕ್ಕಮ್ಮನ ಮನೆಯಲ್ಲಿ ನಿನಗೆ ಸಾಕಾಗುವಷ್ಟು ಜಾಗ ಇಲ್ಲವೇನು? ಒಂದು ಕಾರ್ಡು ನನಗೆ ಬರೆದಿದ್ದರೆ ನಾನು ರೈಲ್ವೆ ಸ್ಟೇಶನಿಗೆ ಬರುತ್ತಿರಲಿಲ್ಲವೇ? ಇತ್ತ ಸದಾಶಿವನೂ ನೀನು ಬರುತ್ತೀಯೆಂದು ಕಾಗದ ಬರೆಯಲಿಲ್ಲ' ಎಂದು ಅವನನ್ನು ಮೈಲಾಪುರ ತನಕ ಎಳೆದುಕೊಂಡು ಹೋದನು. ಅಲ್ಲಿ ತನ್ನ ಮಕ್ಕಳನ್ನು ಬಿಟ್ಟು ಇಬ್ಬರೂ ಛತ್ರಕ್ಕೆ ಬಂದರು ಆದರೆ ಅಲ್ಲಿ ಅವನು ತಂದ ಯಾವ ವಸ್ತುಗಳೂ ಇರಲಿಲ್ಲ.

ಹಾದಿಯಲ್ಲಿ ಮಾಧವ ತನಗೆ ಆಂಧ್ರ ಪ್ರದೇಶದಿಂದ ಮದ್ರಾಸಿಗೆ ಕಳೆದ ತಿಂಗಳಲ್ಲಿ ವರ್ಗವಾದ ಕತೆಯನ್ನು ತಿಳಿಸಿದನು. ಅಲ್ಲಿಗಿಂತ ಈ ಊರು ಅನುಕೂಲವಾಗಿದೆ. ಇಲ್ಲಿ ನಮ್ಮ ಊರವರು ಬಹಳವಾಗಿ ಕಾಣಸಿಗುತ್ತಾರೆ. ಎಂದು ಹೇಳಿದನು.

ಕೃಷ್ಣವೇಣಿಯು ರಾಮನನ್ನು ಬಹುವಾಗಿ ಉಪಚರಿಸಿದನು. ಅವರ ಊಟ ಮುಗಿಯಲು ಅಮ್ಮ, ಅಕ್ಕ ಎಲ್ಲ ಮಂಗಳೂರಲ್ಲೇ ಇದ್ದಾರೋ? ಎಂದು ಕೇಳಿದಳು. ರಾಮನು ಅವರ ಕತೆಯನ್ನು ಹೇಳಿದನು. ಆಕೆಗೆ ಏನೂ ಸೋಜಿಗವೆನಿಸಲಿಲ್ಲ. ಹೌದು ಅಪ್ಪ ಇರುವಲ್ಲಿಯವರೆಗೆ ಸಮ ಈಗೇನು ಉಳಿಯಿತು? ಎಂದಳು. ಆದರೆ ನಾಗವೇಣಿಯು ಗಟ್ಟಿಗಿತ್ತಿ, ಬೆಂಗಾಡಿನಲ್ಲೂ ಬದುಕುವವಳು. ಅಮ್ಮನಿಗೆ ಮಾತ್ರ ಈ ವಯಸ್ಸಿನಲ್ಲಿ ಊರೆಂಬುದು ಕನ್ನಾಮೂರು ಆಗುತ್ತದೋ ಏನೋ, ಎಂದಳು.

ಮರುದಿನ ರಾಮನಿಗೆ ಉಡುಗೆಗಳನ್ನು ಒದಗಿಸಿಕೊಟ್ಟಾಯಿತು. ಮುಂದಿನ ಹಾದಿಯೇನೆಂದು ಅವನನ್ನು ವಿಚಾರಿಸಿಯಾಯಿತು. ಮಾಧವ 150 ರೂಪಾಯಿ ಸಂಬಳ ಗಳಿಸುತ್ತ ನಾಲ್ಕಾರು ಮಕ್ಕಳೊಡನೆ ಅಲ್ಲಿ ಸಂಸಾರಿಗನಾಗಿ ಇದ್ದುದರಿಂದ ಅವನಿಂದ ಎಷ್ಟು ಮಟ್ಟಿಗೆ ಸಹಾಯ ಮಾಡಲು ಸಾಧ್ಯವೋ ತಳಿಯದು. ಆದರೆ ಇಲ್ಲಿ ಊಟಕ್ಕೆ ತೊಂದರೆ ಬರಲಾರದು. ಮಂಗಳುರವರು ಸ್ವಲ್ಪ ಸಹಾಯ ಮಾಡಿದರೆ ನಿನಗೆ ಬಿ.ಎ. ಕಲಿಯಲು ಏನೂ ತೊಡಕಾಗದು ಎಂಬ ಭರವಸೆಯಿತ್ತನು.

ಮಾಧವನು ಆಫೀಸಿಗೆ ಹೋದಾಗಲೆಲ್ಲ ಇವನಿಗೆ ಪರಿಚಯ ಪತ್ರದ ಉಪಯೋಗ ಮಾಡುವ ಕೆಲಸ. ಮೇಲೆ 'ತನಗೆ ಎಲ್ಲಿ ಹಣದ ನೆರವು ಸಿಕ್ಕೀತು' ಎಂಬ ಹಂಬಲ. ಅದಕ್ಕಾಗಿ ಅವನು ಅಲೆದಾಡತೊಡಗಿದನು. ಅವನ ಕಾಲೇಜಿನ ಪ್ರವೇಶವು ಸುಲಭದಲ್ಲಾಯಿತು. ಮುಂದೆ ವೇತನ ಇತರ ವಸ್ತುಗಳಿಗಾಗಿ ಮನೆಯಲ್ಲಿ ಕೇಳಬಾರದೆಂದೆಣಿಸಿ, ಮೈಲಾಪುರದಲ್ಲಿ ನೆಲೆಸಿದ ಒಬ್ಬಿಬ್ಬರು ಮಂಗಳೂರವರ ಮನೆಯನ್ನು ಸೇರಿ ಟ್ಯೂಶನ್ ಗಂಟು ಹಾಕಿಕೊಂಡನು. ಎರಡುಮೂರು ಕಡೆಗಳಲ್ಲಿ ಚಿಕ್ಕ ಮಕ್ಕಳಿಗೆ ಪಾಠ ಹೇಳುತ್ತ ಇಪ್ಪತ್ತು ರೂಪಾಯಿಗಳನ್ನು ದೊರಕಿಸಲು ನಿರ್ಧರಿಸಿದನು. ಅದು ಮಾಧವನಿಗೂ ತಿಳಿದು ಆನಂದವಾಯಿತು.

ರಾಮ ಎರಡು ತಿಂಗಳ ಕಾಲ ತನ್ನ ಮನೆಗೆ ಕಾಗದ ಬರೆಯಲಿಲ್ಲ. ಅದಕ್ಕಿಂತ ಮೊದಲು ಮಾಧವನಿಂದ ರಾಮನು ಮದ್ರಾಸಿನಲ್ಲಿದ್ದಾನೆ. ಎಂದು ತಿಳಿದುಕೊಂಡ ಸದಾಶಿವನು ಬೇಸರದಿಂದ ಅವನಿಗೊಂದು ಪತ್ರ ಬರೆದಿದ್ದನು. ರಾಮ ಉತ್ತರ ಬರೆಯಲೂ ಇಲ್ಲ. ಬದಲು ಮಾಧವನ ಮೂಲಕ ತನಗೆ ಕಳುಹಿಸಿದ ಇಪ್ಪತ್ತು ರೂಪಾಯಿಗಳನ್ನು ಅವನಿಗೆ ಹಿಂದಕ್ಕೆ ಕಳುಹಿಸಿ ಇನ್ನು ನಮ್ಮವರಿಂದ ಯಾವ ಸಹಾಯವೂ ನನಗೆ ಬೇಡ, ಎಂದು ಬರೆದಿದ್ದ.

ಕೃಷ್ಣವೇಣಿಯು ರಾಮನ ವಿಚಾರವಾಗಿ ತಾಯಿಗೆ ಕಾಗದ ಬರೆದಳು. ಅಲ್ಲಿಂದ 'ರಾಮ ನನಗೇಕೆ ಕಾಗದ ಬರೆಯಬಾರದು?' ಎಂಬ ಮರು ಓಲೆ ಬಂದಿತು. ಅದನ್ನು ಕೃಷ್ಣವೇಣಿಯು ಅವನ ಕೈಮೇಲೆ ಇರಿಸಲು, ರಾಮ ನಕ್ಕನು. ಏಕೆ ಹೀಗೆ ಮಾಡುತ್ತೀ? ಎಂದು ಚಿಕ್ಕಮ್ಮ ತಿರುತಿರುಗಿ ಅವನನ್ನು ಕೇಳಲು 'ನೀನು ಸಿಟ್ಟಾಗದಿದ್ದರೆ ಹೇಳುತ್ತೇನೆ' ಎಂದನು. ಏನು? ನನ್ನ ಅನ್ನವನ್ನು ನಾನು ಗಳಿಸಿದ ಮೇಲೆಯೇ ಅವಳಿಗೆ ಕಾಗದ ಬರೆಯುವುದು. ಅವಳಿಗೆ ಈಗ ಏನೆಂದು ಬರೆಯಲಿ? ಬೇರೆಯವರ ಅನ್ನದ ಬಾಯಿ ಕಾದಿದ್ದೇನೆಂದೇ? ಅವಳೇಕೆ ಮಂಗಳೂರು ಬಿಟ್ಟದ್ದು? ಎಂದನು. ಕೃಷ್ಣವೇಣಿಗೆ ಬೇಸರವಾಯಿತು.

ಕೆಲವು ದಿನಗಳ ನಂತರ ರಾಮನೇ ನಾನು ಅಮ್ಮನಿಗೆ ಕಾಗದ ಬರೆಯಬೇಡವೇ? ಎಂದನು. ಆಗ ಕೃಷ್ಣವೇಣಿಯು ನೀನು ಯಾವಾಗಲೋ ಬರೆಯಬೇಕಿತ್ತು ಎಂದಳು. ಆಗ ರಾಮ ಹಾಗಾದರೆ ಬರೆಯುತ್ತೇನೆ. ಇನ್ನು ಬರೆಯಬಹುದು. ನಾಳೆಯಿಂದ ನಾನು ಇಲ್ಲಿಗೆ ಊಟಕ್ಕೆ ಬರುವುದಿಲ್ಲ. ಒಂದು ಹೋಟೇಲಿಗೆ ಹೋಗುತ್ತೇನೆ. ನನಗೀಗ ಒಂದು ಟ್ಯೂಶನಿಸವರು ಇಪ್ಪತ್ತು ರೂಪಾಯಿ ಕೊಡುತ್ತಾರೆ. ಉಳಿದೆರಡು ಕಡೆಗಳಿಂದ ಹತ್ತು ರೂಪಾಯಿ ಸಿಗುತ್ತದೆ. ಮೂವತ್ತಕ್ಕೆ ಹೇಗೋ ನನ್ನ ಊಟ ನಡೆದೀತು ಎಂದನು.

ಕೃಷ್ಣವೇಣಿಗೆ ಬೇಸರವಾಯಿತು. 'ಮಗು, ಅದೇ ನಿಶ್ಚಯವೇ? ಆದರೆ ಇಲ್ಲಿ ದಿನಕ್ಕೊಂದಾವೃತ್ತಿ ಬರುತ್ತಿದ್ದು ಮುಖ ತೋರಿಸಿ ಹೋಗು. ಪರವೂರಲ್ಲಿ ತಮ್ಮವರು ಇಲ್ಲದೆಯೆ ಇರಬಾರದು. ನಿನಗೆ ಅಹಿತವಾಗದಿದ್ದರೆ ಕಾಫಿಗಾದರೂ ಬಾ, ಮಲಗುವುದಕ್ಕಾದರೂ ಬಾ, ನಮ್ಮ ಮಗು ಆನಂದನಿಗೆ ಯಾವಾಗಲೂ ನಿನ್ನದೇ ಧ್ಯಾನ' ಎಂದಳು.

ಈಗೆ ರಾಮನು ತಾನು ಯಾರ ಹಂಗಿಗೂ ಒಳಗಾಗದೆ ಸ್ವದುಡಿಮೆಯಿಂದ ತನ್ನ ವಿದ್ಯಾಭ್ಯಾಸ ಮುಂದುವರಿಸಲು ನಿರ್ಧರಿಸುವನು ಈ ವಿಷಯವನ್ನು ತನ್ನ ಚಿಕ್ಕಪ್ಪನಲ್ಲಿ ಹೇಳಿ ಒಂದೆರಡು ಮನೆಗಳಿಗೆ ಹೋಗಿ ಅಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುವ ಕೆಲಸ ಮಾಡಿ ಸ್ವಲ್ಪ ಸಂಪಾದನೆ ಮಾಡಿ ಯಾರಿಗೂ ಕಷ್ಟ ಕೊಡದೆ ಓದುವನು. ತನ್ನ ಗಳಿಕೆಯಲ್ಲಿ ಸ್ವಲ್ಪ ತಾಯಿಗೂ ಕಳುಹಿಸುವನು.

91"ಹೀಗೆ ಅವನು ಸ್ವಾವಲಂಬನೆಯನ್ನು ಕಲಿತು ಬಿ.ಎ.ಗೆ ಕಟ್ಟಿದನು. ಪರೀಕ್ಷೆ ಆಗುವುದರೊಳಗೆ ಉಪ್ಪಿನ ಸತ್ಯಾಗ್ರಹ ಪ್ರಾರಂಭವಾಗಿ ರಾಮನು ಆವೇಶಗೊಂಡು ತನ್ನ ತಾಯ ಸಂಕಟ ಎಂಥದಿರಬಹುದೆಂಬುದನ್ನೂ ಲೆಕ್ಕಿಸದೆ ನುಗ್ಗಿ ಕೈದಿಯಾಗಿ ವೆಲ್ಲೂರು ಜೈಲನ್ನು ಕಂಡನು."91 ಮುಂದೆ ಬಿಡುಗಡೆಯಾಗಿ ಮತ್ತೆ ಮನೆಗೆ ಮರಳುವನು. ನಂತರ ಮತ್ತೊಮ್ಮೆ ಮದ್ರಾಸಿಗೆ ಹೋಗಿ ಕಷ್ಟದಿಂದ ಬಿ.ಎ. ಪದವಿಯನ್ನೂ ಗಳಿಸುವನು.

ರಾಮನು ಉದ್ಯೋಗಕ್ಕಾಗಿ ತುಂಬಾ ಪ್ರಯತ್ನ ಪಟ್ಟರೂ ಯಾವುದೇ ಒಳ್ಳೆಯ ಉದ್ಯೋಗ ಅವನಿಗೆ ದೊರಕದೆ ಕೊನೆಗೆ ಶೀನಮಯ್ಯನ ಮಕ್ಕಳು ನಡೆಸುವ ಹೋಟೇಲಿನಲ್ಲಿ ಉದ್ಯೋಗಕ್ಕೆ ಸೇರುವನು. ಅಲ್ಲಿಯ ಕಷ್ಟವನ್ನು ಸಹಿಸಿ ತನ್ನ ತಾಯಿಯನ್ನು ಕರೆದುಕೊಂಡು ಬಂದು ಅವಳನ್ನು ಉತ್ತಮ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಬಯಸುವನು.

ಆದರೆ ಬೆಂಗಳೂರಿನ ವಾಸ ಹೆಚ್ಚಿದಂತೆ ಅಲ್ಲಿಯೇ ತಾಯಿಯನ್ನು ಕರೆಯಿಸಿಕೊಂಡು ಬಿಡಾರ ಮಾಡುವ ಉತ್ಸಾಹ ತಗ್ಗಿದಂತೆ ಕಾಣಿಸತೊಡಗಿತು. ಆ ಆಸೆಯನ್ನು ಅವನು ತನ್ನ ಕಾಗದಗಳಲ್ಲಿ ತೋರಿಸಲಿಲ್ಲ. ಆದರೆ ಮನಸ್ಸು ಆ ತೆರನಾಗಿತ್ತು. ಎಲ್ಲಾದರೊಂದು ಸಂದಿನಲ್ಲಿ ಬಾಡಿಗೆ ಇದ್ದು 20–30 ರೂಪಾಯಿಗಳಲ್ಲಿ ಬದುಕಲು ಬಂದೀತೇ? ಬಂದರೂ ಏನು ಸುಖ ಸಿಕ್ಕೀತು, ಎಂದು ಅವನಿಗೆ ಅನಿಸುತ್ತಿತ್ತು. ಮೇಲೆ ಅದರೊಳಗೇ ನಮ್ಮ ಊರಿನ ಮನೆಯ ಕಾವಲಿಗೂ ಹಣ ಖರ್ಚು ಮಾಡಬೇಕಾಗಿದೆ. ಎಂಬೆಲ್ಲ ಸಂಶಯಗಳು ತುಂಬಿದ್ದವು.

ನಾಗವೇಣಿಯಂತು ಪ್ರತಿಯೊಂದು ಕಾಗದದಲ್ಲಿ ಮಗನ ಸಮಾಚಾರಗಳನ್ನೇ ತಿಳಿಸಬಯಸಿ, ಎಂದು ಬರುವೆ? ಹೇಗಿರುವೆ? ಎಂದು ಕೇಳುವಳೇ ಹೊರತು, ತಾನು ಹೊರಡುವ ಅಪೇಕ್ಷೆಯನ್ನು ಯಾವುದರಲ್ಲೂ ತೋರಿಸಲಿಲ್ಲ. ಅದಕ್ಕೆ ಪುಟವೀಯುವಂತೆ ಆರು ತಿಂಗಳಿನ ಬಳಿಕ ರಾಮನಿಗೊಂದು ಕಾಗದ ಬಂತು. ಅಮ್ಮ ನಿನ್ನನ್ನು ಕರೆಯಿಸಿಕೊಂಡು ಒಟ್ಟಿಗೆ ದಿನ ಕಳೆಯುವ ಎಂದು ಹಂಬಲಿಸುತ್ತಿದ್ದೇನೆ. ಆ ದಿನ ಬರಲಾರದೇ ಎಂದು ಇದಿರು ಕಾಯುತ್ತಿದ್ದೇನೆ. ಆದರೆ ನೀನು ಬಂದರೂ ಇಲ್ಲಿ ಒಂದು ರೀತಿಯ ನರಕ ತಪ್ಪದು. ಬಡತನ ಹೇಗೂ ಬೆನ್ನು ಹತ್ತುವುದೇ ಸರಿ, ಆದರೆ ಮನೆಯಲ್ಲಿ ನಾನಿರಬಹುದಾದ ಗಳಿಗೆ ಎಷ್ಟು? ಬೆಳಿಗ್ಗೆ ಐದು ಗಂಟೆಗೆ ಎದ್ದು ಹೋಟೇಲಿಗೆ ಹೋಗಿ ಕುಳಿತರೆ ಹನ್ನೆರಡರ ತನಕ ಅಲ್ಲಿಯೇ, ಊಟ ಮಾಡಿ ಅರೆತಾಸಿನ ವಿಶ್ರಾಂತಿಯನ್ನು ಪಡೆದರೆ ದೀಪ ನಂದಿಸುವ ತನಕ ತಿರುಗಿ ಅಲ್ಲೇನೆ. ಮಲಗಿಕೊಳ್ಳುವಆಗ ಶರೀರವೆಲ್ಲ ಹೆಣಗುಟ್ಟುತ್ತವೆ. ನೀನು ಬಳಿಯಲ್ಲಿದ್ದರೂ ನಿನ್ನೊಡನೆ ಮಾತನಾಡಲು ಒಂದರಗಳಿಗೆಯಾದರೂ ಅವಕಾಶ ಸಿಕ್ಕೀತೇ? ಹೀಗಿರಲು ತುಂಬ ಗಾಳಿಯಾದರೂ ಬೀಸುವ ನಮ್ಮ ಮನೆಯನ್ನು ಬಿಟ್ಟು, ಇಲ್ಲೊಂದು ಮೂಲೆಯಲ್ಲಿ ಜಪ ಮಾಡುತ್ತಿರು ಅನ್ನ ಬೇಕೇಕೆ? ನಾನೇ ವರ್ಷಕ್ಕೊಮ್ಮೆ ಬಂದು ನಿನ್ನೊಡನೆ ನಾಲ್ಕು ದಿನ ಇದ್ದು ಮಾತನಾಡಬಾರದೇ ಎನಿಸುತ್ತದೆ' ಎಂದಿತ್ತು.

ಇನ್ನೊಮ್ಮೆ ತನ್ನ ಚಾಕರಿ ತಿರುಪೆಯ ವಿಚಾರವಾಗಿ ಬರೆದಿದ್ದ ಇಲ್ಲಿ ಬಂದುದಕ್ಕೆ ಹಲವರ ಪರಿಚಯವೇನೋ ಆಯಿತು. ಹೋಟೇಲಿಗೆ ಬರುವ ಹಲವು ದೊಡ್ಡ ಮನುಷ್ಯರೊಡನೆ ಗೆಳೆತನವಾಗಿದೆ. ಒಬ್ಬಿಬ್ಬರೊಡನೆ ತೀರ ಸಲುಗೆ ಇದ್ದುದರಿಂದ ಏನಾದರೂ ಎಲ್ಲಾದರೂ ಕೆಲಸವಿದೆಯೇ? ಎಂದು ಮಾತನಾಡಿಸಿದೆ. ಮಾತಿನಲ್ಲಿ ಎಲ್ಲರೂ ಬಲು ಭರವಸೆ ಕೊಡುತ್ತಾರೆ. ತಮಗಿರುವ ವರ್ಚಸ್ಸನ್ನು ಕುರಿತು ಹೇಳುತ್ತಾರೆ ಆದರೆ ಕಾರ್ಯದಲ್ಲಿ ಆಗದೆಂದೇ ಅನಿಸುತ್ತದೆ.

ಮತ್ತೊಮ್ಮೆ ತನ್ನ ದಿನದ ಹಾಡು ಕಾಗದದಲ್ಲಿತ್ತು, ಬೆಳಿಗ್ಗೆ ಎದ್ದು ಕುಳಿತಿರುತ್ತೇನೆ. ಹಾಗೊಮ್ಮೆ ಕುರ್ಚಿಗೆ ಅಂಟಿ ಕುಳಿತರೆ ಹಣ ಲೆಕ್ಕ ಮಾಡುವುದು, ಬಿಲ್ಲು ಬರೆಯುವುದೇ ಕೆಲಸ. ಎರಡು ತಾಸಿಗೊಮ್ಮೆ ಮಯ್ಯರ ತಮ್ಮ ಒಂದು ರೂಪಾಯಿ ನೋಟುಗಳನ್ನೆಲ್ಲಾ ತೆಗೆದು ಬೇರೆಯೇ ಪೆಟ್ಟಿಗೆಗೆ ತುಂಬಿಸುತ್ತಾರೆ. ನಾನು ಬಂದು ಆರು ತಿಂಗಳಾಯಿತು. ಆದರೂ ಅವರು ಹಣವನ್ನು ಎಣಿಸುವ ರೀತಿ, ನನ್ನನ್ನು ನೋಡುವ ರೀತಿ ಕಂಡರೆ ಯಾರೋ ಕಳ್ಳನ ಹತ್ತಿರ ಕೀಲಿಕೈ ಕೊಟ್ಟಂತೆ ಅವರಿಗೆ ತೋರುತ್ತಿರಬೇಕು. ಹೀಗಿದ್ದೂ ಯಾಕೆ ನನ್ನನ್ನು ಇಲ್ಲಿ ಕೂಡ್ರಿಸಿದ್ದಾರೆ ಎಂದು ಯೋಚನೆಯಾಗುತ್ತಿದೆ.

ರಾಮನ ಜೀವ ವಿಶ್ರಾಂತಿಯನ್ನು ಬೇಡುತ್ತಿತ್ತು. ಅವನಿಗೆ ಹೋಟೇಲಿನ ದುಡಿತ ಸಾಕಾಗಿತ್ತು. ಆದರೆ ಊರಿಗೆ ಹೋಗಿ ಬರಲು ಹಣ ಬೇಕು. ಅಲ್ಲಿ ಹೋಗಿ ಉಳಿದರೆ ಒಂದು ತಿಂಗಳ ವೇತನವೂ ಇಲ್ಲ. ಈ ನಡುವೆ ನಾಗವೇಣಿಗೆ ಮಗನನ್ನು ಕಾಣಲು ಮನಸ್ಸಾಗದೇನು? ಮಗು ರಜೆ ತೆಗೆದುಕೊಂಡು ಬೇಸಗೆಗೆ ಮನೆಗೆ ಬಾ. ಹಣದ ಯೋಚನೆಯಲ್ಲೇ ಕೂದಲು ಹಣ್ಣಾದೀತು. ಅದೃಷ್ಟವಿದ್ದರೆ ದಿನ ಹೇಗೂ ಸಾಗುತ್ತದೆ. ಇಲ್ಲವಾದರೆ ಹೇಗೂ ಇಲ್ಲ. ಎಂದು ಆತುರ ತೋರಿಸಿ ಅವಳು ಕಾಗದ ಬರೆದಳು. ಮುಂದೆ ರಾಮ ಹೋಟೇಲು ಉದ್ಯೋಗ ತೊರೆದು ಬೊಂಬಾಯಿಗೆ ಹೋಗಲು ನಿರ್ಧರಿಸಿದನು.

ಕ್ರಿಸ್‌ಮಸ್ ಜನರ ಸಂದಣಿಯಲ್ಲಿ ಅವನೂ ಒಬ್ಬನಾಗಿ ಮುಂಬಯಿ ಪ್ರಯಾಣ ಬೆಳೆಸಿದನು. ಹೊರಡುವ ಮೊದಲು ಮದ್ರಾಸಿಗೆ ಪತ್ರ ಬರೆದು, ಮಾಧವನಿಂದ ಮುಂಬಯಿಯ ಕೆಲವು ಗೆಳೆಯರಿಗೆ ಪತ್ರ ಬರೆಯಿಸಿದ್ದನು. ಮೊದಲೇ ತನ್ನೊಬ್ಬ ಮಿತ್ರನಿಗೂ ಕಾಗದ ಬರೆದಿದ್ದನು. ಮುಂಬಯಿ ನಗರವನ್ನು ಸೇರಿದೊಡನೆ ಅರಣ್ಯವನ್ನೇನೂ ಹೊಕ್ಕಂತಾಗಲಿಲ್ಲ. ಆದರೆ ಆ ನಗರದ ಮನೆ, ಮಂದಿರ, ಬೀದಿ, ಜನ ಸಮುದಾಯ ನೋಡುವಾಗ ಮದ್ರಾಸಿಗಿಂತ ಮುಂದಾಗಿ ಕಾಣಿಸಿತು. ಈ ನಾಗರಿಕ ಬಾಳಿನಲ್ಲಿ ತಾನು ಬಂದು ಸೇರುವುದಾದರೆ ತಮ್ಮೂರಿನ ಕಡಲಿನ ಮುಂದೆ ಹರವಿ ಬಿದ್ದ ಮರಳಿನ ಕಣದಂತೆಯೇ ಎನಿಸಿತು.ತಾನು ಅಷ್ಟು ಅಲ್ಪ ಎಂಬುದು ನಿಜ. ಆದರೆ ಆ ಯೋಚನೆ ನಿರಾಶೆಗೆ ಅವಕಾಶ ಕೊಡಬೇಕೇ? ಅಷ್ಟು ಜನಸಂದಣಿಗೂ ತುತ್ತನ್ನೀಯುತ್ತಿರುವ ನಗರ ತನ್ನಂತಹ ಅಶನಾರ್ಥಿಗೆ ಹಾದಿ ತೋರಿಸಲಾರದೇನು? ತನ್ನ ಊರಿನವರು ಅಲ್ಲಿ ಎಷ್ಟು ಮಂದಿಯಿಲ್ಲ, ಎಂಬ ಆಸೆಯೂ ತೋರಿತು.

ಮಾರುತಿರಾಯ ದಾದರು ರೈಲ್ವೆ ನಿಲ್ದಾಣದಲ್ಲೇ ಮೈಸೂರಿನಿಂದ ಬರುತ್ತಿರುವ ರಾಮನಿಗಾಗಿ ಕಾದು ನಿಂತಿದ್ದ. ಒಬ್ಬರಿಗೆ ಇನ್ನೊಬ್ಬರ ಗುರುತಿಲ್ಲ. ಆದರೆ ಅವರೊಳಗೆ ದೂರದ ಸಂಬಂಧ, ಜಾತಿಯ ಸಂಬಂಧವೂ ಅಲ್ಲ. ಮಾಧವನು ಮದ್ರಾಸಿನಲ್ಲಿ ಕೆಲಸ ಮಾಡುತ್ತಿರುವುದು ಬಣ್ಣ ವಿಕ್ರಯಿಸುವ ಒಂದು ಕಂಪೆನಿಯಲ್ಲಿ. ಅದೇ ಕಂಪೆನಿಯ ಮುಂಬಯಿ ಆಫೀಸಿನಲ್ಲಿ ಮಾರುತಿ ಕೆಲಸಕ್ಕಿರುವುದು. ಅದರಲ್ಲಿಯೂ ಮಾರುತಿರಾಯ ದಕ್ಷಿಣ ಕನ್ನಡ ಜಿಲ್ಲೆಯವನು. ಈ ಆತ್ಮೀಯತೆಯು ಮಾಧವನ ಗೆಳೆಯನಾದ ರಾಮನಿಗೂ ಸ್ವಾಗತವನ್ನು ದೊರಕಿಸಿಕೊಟ್ಟಿತು.

ಮಾರುತಿ ಅವನನ್ನು ಕರೆದುಕೊಂಡು ತನ್ನ ಬಿಡಾರಕ್ಕೆ ಬಂದನು. ಇಬ್ಬರೂ ಮಾತುಂಗದ ತನಕ ನಡೆದು ಹೋದರು. ಒಬ್ಬ ಆಳು ರಾಮನ ಹಾಸಿಗೆ, ಒಂದು ಚಿಕ್ಕ ಪೆಟ್ಟಿಗೆಯನ್ನು ಹೊತ್ತುಕೊಂಡು ಅವರ ಬೆನ್ನಿಗೆ ನಡೆದನು. ಮಾತುಂಗದಲ್ಲೊಂದು ಕಟ್ಟಡದ ಮೆಟ್ಟಲುಗಳನ್ನೇರಿ ಕೊನೆಗೊಂದು ಕಿರಿಯ ಕೋಣೆಯ ಎದುರು ಇಬ್ಬರೂ ನಿಂತರು. ಬಾಗಿಲು ತೆರೆಯಿತು. ಬಾಗಿಲೆದುರಿಗೆ ರಾಮನ ಮನೆಯ ಚಾವಡಿಯಷ್ಟು ವಿಶಾಲವಾದ ಸ್ಥಳ. ಅದರಲ್ಲೇ ಅಡುಗೆಯ ಮನೆ, ಬಚ್ಚಲು, ಆಫೀಸು, ಇಬ್ಬರೂ ಒಳಕ್ಕೆ ಹೋದರು. ಮತ್ತು ಬಣ್ಣವಿಲ್ಲದ ಮಾತಿನಿಂದ ಅವನನ್ನು ಮಾರುತಿಯು ಉಪಚರಿಸಿದನು.

ಬಂದ ದಿನ ರಾಮನ ಊಟವಾದೊಡನೆಯೇ ಮಾರುತಿಯು ಅವನು ಬಂದ ಉದ್ಧೇಶವನ್ನುಮೊದಲೇ ಅರಿತಿದ್ದುದರಿಂದ ನನಗಿಲ್ಲಿ ಪರಿಚಯ ಬಹಳವಿಲ್ಲ. ನಮ್ಮ ಜೀವನವೆಂದರೆ ಈ ಕೊಠಡಿಯಷ್ಟೇ ಇಕ್ಕಟ್ಟಿನ ಬಾಳು, ಆಫೀಸು, ಮನೆಗಳ ನಡುವೆ ಮಾತ್ರ ನನ್ನ ಓಡಾಟ. ಏನಾದರೂ ಆದಿತ್ಯವಾರ ಬಂದರೆ ಒಬ್ಬಿಬ್ಬರು ಸ್ನೇಹಿತರ ಮುಖ ಕಾಣುವುದಾಗುತ್ತದೆ. ಉಳಿದ ವೇಳೆಗಳಲ್ಲಿ ಈ ಜನ ಸಮುದ್ರದ ನಡುವೆ ಇರುತ್ತೇನೆಂಬುದೇ ಒಂದು ಸಂತೋಷ. ನೀವೊಂದು ಕೆಲಸ ಮಾಡಬಹುದು. ಇದೇ ಮಹಡಿಯ ಮೇಲಿನ ಒಂದು ಕೋಣೆಯಲ್ಲಿ ನಮ್ಮೂರ ಹಲವರು ಗೆಳೆಯರಿದ್ದಾರೆ. ಎಲ್ಲರೂ ಏನೋ ಏನೋ ಉದ್ಯೋಗದಲ್ಲಿ ಇರುವವರು, ಇಲ್ಲದವರೂ ಇದ್ದಾರೆ. ಯಾರೂ ಅವರಲ್ಲಿ ಸಂಸಾರಿಗಳಲ್ಲ. ಅವರಲ್ಲಿ ಕೆಲಸ ಹುಡುಕುವವರೂ ಇದ್ದಾರೆ. ಎಲ್ಲಿಗೆ ನೀವು ಅಲೆದಾಡಿದರೆ ಉಪಯೋಗವಾದೀತು ಎಂದು ಅವರು ತಿಳಿಸಬಹುದು ಎಂದು ಹೇಳಿದನು.

ಅದೇ ರಾತ್ರಿ ಮಾರುತಿ ರಾಮನನ್ನು ಮೇಲಿನ ಮಹಡಿಗೆ Friends Room ಎಂದು ಸಮಾಜವಾದಿಗಳಂತೆ ಬೋರ್ಡು ಅಂಟಿಸಿದ್ದ ಒಂದು ಕೋಣೆಗೆ ಕರೆದುಕೊಂಡು ಹೋದನು. ಈಗೆ ಅವರ ಪರಿಚಯವಾಗಿ ಅವರ ನೆರವಿನಿಂದ ರಾಮ ಉದ್ಯೋಗಕ್ಕೆ ಪ್ರಯತ್ನಿಸಿದನು. ಬೊಂಬಾಯಿ ಮಹಾನಗರದಲ್ಲಿ ಅವನಂತೆ ಹಲವರು ಉದ್ಯೋಗ ಹುಡುಕುತ್ತಾ ಕಷ್ಟಪಡುವುದನ್ನು ನೋಡಿ ಕಂಗಾಲಾಗುವನು.

ಅಲ್ಲಿ 'ನೋವಾ' ಎಂಬ ವಿದೇಶಿ ಮಹಿಳೆಯ ಪರಿಚಯವಾಗಿ ಅವಳಲ್ಲಿದ್ದ ತವರಿನ ಬಯಕೆಯನ್ನುನೋಡಿ ತಾನೂ ತನ್ನ ಮನೆಗೆ ಹಿಂದಿರುಗಲು ಮನಸ್ಸು ಮಾಡುವನು. ಇದನ್ನು ತನ್ನ ಗೆಳೆಯರು ಮತ್ತು ನೋವಾಳಿಗೂ ತಿಳಿಸುವನು.

[92]"ಅದಕ್ಕೇನೆ ನಾನು ನನ್ನ ಊರನ್ನು ಸೇರುವುದು. ನನ್ನ ತಾಯಿ, ಆ ನನ್ನ ಕಡಲು ಎರಡರಿಂದಲೇ ನನಗೆ ತೃಪ್ತಿ ದೊರೆತೀತು. ಇನ್ನು ನೀವು ಹೇಳಿಕೊಟ್ಟ ಕಲೆಯಿದೆ. ಅಲ್ಲಿದ್ದು ಅಭ್ಯಸಿಸುತ್ತೇನೆ."[92] ಎನ್ನುವನು.

ಹಳ್ಳಿಗೆ ಬಂದ ರಾಮ ಕಷ್ಟಪಟ್ಟು ಕೆಲಸ ಮಾಡಿ ಹಿಂದಿನ ಜಮೀನನ್ನು ಪಡೆಯಲು ಬಯಸುವನು. ಇದೇ ಸಮಯದಲ್ಲಿ ಅವನ ಅಜ್ಜ ಗೋಡೆಯಲ್ಲಿ ಅವಿತು ಇಟ್ಟ ಸ್ವಲ್ಪ ಹಣವೂ ದೊರೆಯುತ್ತದೆ. ರಾಮನು ತನ್ನ ಹಳ್ಳಿಯಲ್ಲಿಯೇ ಶಾಲೆಯ ಮಾಸ್ತರನಾಗಿ ತಿಂಗಳಿಗೆ ಹತ್ತು ರೂಪಾಯಿಯ ವರಮಾನಕ್ಕೆ ತೃಪ್ತಿಪಟ್ಟುಕೊಂಡನು. ಹೀಗೆ ಜಮೀನಿನಲ್ಲಿ ಕಷ್ಟಪಟ್ಟು ಬೆಳೆಸಿ, ಅವನ ಸಂಪಾದನೆ ಸೇರಿಸಿ, ತನ್ನ ಅಜ್ಜನ ಹಣವನ್ನೂ ಸೇರಿಸಿ ತಮ್ಮಿಂದ ದೂರವಾದ ಆಸ್ತಿಯನ್ನು ಮತ್ತೆ ಗಳಿಸುವಲ್ಲಿ ಯಶಸ್ವಿಯಾಗುವನು.

[93]"ಪಡುಮುನ್ನೂರಿನವರು ನಮ್ಮ ಗೋಳನ್ನು ಕೇಳಿ ಮನೆಯ ಸುತ್ತಲಿನ ಚೂರನ್ನು 1500ಕ್ಕೆ ಸಿಗುವ ಹಾಗೆ ಮಾಡುವ ಎಂದಿದ್ದಾರೆ ಆದರೂ ಅಷ್ಟು ಹಣವೂ ಪೂರ ಇಲ್ಲ. ಈ ವರ್ಷ ಹೊಗೆಸೊಪ್ಪು ಬಹಳ ಚೆನ್ನಾಗಿ ಆಗಿದೆ. ದರ ಈಗೆಯೇ ಉಳಿದರೆ ಈ ವರ್ಷವೇ ಹೇಗಾದರೂ ಮಾಡಿ ಮರ್ಯಾದೆ ಉಳಿಸಿಕೊಳ್ಳಬಹುದು"[93] ಎನ್ನುವನು.

ನಾನು ಮಾವನ ಮಾತು ಮೀರಿದ್ದಕ್ಕೆ ತಿರುಗಿ ಆಸ್ತಿಯನ್ನು ಪಡೆದರೆ ಎಲ್ಲರಿಗೂ ಒಮ್ಮೆ ಪ್ರಾಯಶ್ಚಿತ ಆದ ಹಾಗೆ ಆಯಿತು. ನಾವು ಯಾರ ಹಂಗಿಲ್ಲದೆ ಇರಬಹುದು ಎಂದು ರಾಮನ ತಾಯಿ ಹೇಳುವಳು.

ಸುಬ್ಬತ್ತೆ ತನ್ನ ಅಪ್ಪನ ಭೂಮಿಯು ತಿರುಗಿ ಕುಟುಂಬಕ್ಕೆ ಬಂದರೆ ದೇವರಿಗೆ ಹರಕೆ ಸಲ್ಲಿಸುತ್ತೇನೆ ಎಂದುಕೊಂಡಳು. ಜತೆಗೆ ಪೂಜಾರಿಯ ತೋಟವೂ ಸಿಕ್ಕಿದರೆ ಚೆನ್ನಾಗಿತ್ತು. ಆದರೆ ಹಣ ಬೇಡವೇ? ಅದಕ್ಕೇನೇ ಮನೆಯ ಹಿಂದಿನ ಅರಾಲಿನಲ್ಲಿ ಗೋವೆ ಬೀಜ ಹಾಕಿದ್ದಾನೆ. ಮೂರು ಎಕ್ರೆ ಗುಡ್ಡದ ಮೇಲೆ ಗೋವೆ ಗಿಡವೇ ಇದೆ. ಗಿಡ ಮೇಲಕ್ಕೆ ಬಂದಾಯಿತು. ಇನ್ನು ಎರಡು ವರ್ಷ ಹೋದರೆ ಹಣ್ಣಾದೀತು. ಇನ್ನೆರಡು ಮೂರು ಎಕ್ರೆ ಗಾಳಿ ಮರ ಹಾಕಿದೆ ಅದಾವುದೂ ಕಷ್ಟವಿಲ್ಲ. ಆದರೆ ಈ ನೀರು ಹೊರುವ ಕೆಲಸ ಮಾತ್ರ ಸ್ವಲ್ಪ ಕಷ್ಟದ್ದು ಎನ್ನುವರು.

ಸುಬ್ಬತ್ತೆಯು ರಾಮನಿಗೆ ಉಪದೇಶ ಮಾಡಲಿಕ್ಕೆ ಬಂದಳು. ಅವನು ಒಪ್ಪಿದರೆ ತಮ್ಮ ಕುಟುಂಬದ ಹೆಣ್ಣೊಂದಿದೆ. ಅದನ್ನಾದರೂ ತರಬಹುದು. ಮೊದಲಿನ ಹುಡುಗಿಗೆ ಲಗ್ನವಾಗಿದೆ. ಎರಡನೆಯವಳಿಗೆ ಹದಿನಾರು ವರ್ಷ ಪ್ರಾಯ. ನಮ್ಮ ಮನೆಯವರಗೂ ಅವರಿಗೂ ಬಲು ಹತ್ತಿರ. ಅವರ ಸೋದರಿಕೆಯ ಕುಟುಂಬ ಅದು. ಜಾತಕ ಕೂಡಿದರೆ, ಇವನು ಆಯಿತೆಂದರೆ ಆಯಿತು. ಇವನ ಜಾತಕ ನಾನು ಕೊಟ್ಟಿದ್ದೇನೆ. ಅವರು ಒಳ್ಳೆಯದಾಗಿ ಕೂಡುತ್ತದೆ ಎಂದೂ ಹೇಳಿದ್ದಾರೆ ಎನ್ನುವಳು.

ಆದರೆ ರಾಮ ಮಾತ್ರ ಈ ವಿಚಾರದ ಕುರಿತು ಚಕಾರವೆತ್ತದೆ ಸುಬ್ಬತ್ತೆಗೆ ಅದನ್ನು ರಾಮನಲ್ಲಿ ಪ್ರಸ್ತಾಪಿಸಲು ಸಾಧ್ಯವಾಗಲಿಲ್ಲ.

ರಾಮನಿಗೆ ಮಾತ್ರ ಕೆಲಸದ ಮೇಲೆಯೇ ಆಸಕ್ತಿ. ಅಂತೆಯೇ ಇನ್ನೂ ಹೆಚ್ಚು ಜಮೀನು ಮಾಡಬೇಕು ಎಂಬ ಆಸೆ. ಒಂದು ಬಾರಿ ನೀರೆರೆಯುತ್ತಾ ನಡುನಡುವೆ ತಾಯಿಯೊಡನೆ ತಾನು ಹೋದ ಕೆಲಸ ಪಡುಮುನ್ನೂರಿನ ಅಜ್ಜನಿಂದ ಹೇಗೆಲ್ಲ ಸಾಧ್ಯವಾಯಿತೆಂಬುದನ್ನು ತಿಳಿಸಿದನು. ಆದರೆ ಅವರು 1500ಕ್ಕೆ ಕಾಸು ಕಡಿಮೆಯಾದರೂ ಆಗದು ಎಂದರು. ಆದರೆ ಅಷ್ಟಕ್ಕೆ ಸ್ಥಳವನ್ನು ಮಾತ್ರ ಕೊಡಲು ಒಪ್ಪಿದರೇ, ಮೂರುವರೆ ಮುಡಿ ಗದ್ದೆ, ಮನೆಯಡಿ ಅರಾಲು ಅಲ್ಲದೆ ಆಚೆ ಉಪಾಧ್ಯಾಯರ ಜಾಗಕ್ಕೆ ತಾಗಿರುವ 5 ಎಕ್ರೆ ಅರಾಲನ್ನು ಕೊಡುವೆನೆಂದರು ಎನ್ನುವರು.

ಆಗ ತಾಯಿ ವಿಸ್ತೀರ್ಣವೇನೋ ತುಂಬ ಇದೆ. ಮಗು ಅದರಲ್ಲಿ ಏನಿದೆ? ನಾಲ್ಕು ಮುಂಡಕನ ಗಿಡವೂ ಸಹ ಇಲ್ಲ ಎನ್ನುವಳು. ಆಗ ರಾಮನು ಈಗೇನಿಲ್ಲ ಆದರೆ ಐದು ಎಕ್ರೆಯಲ್ಲಿ ಗೋವೆ ಹಾಡಿ ಮಾಡಿದರೆ ಐದು ವರ್ಷದ ನಂತರ 25 ಮುಡಿ ಗೋವೆ ಬೀಜ ಸಿಗಲಾರದೇನು? ಅದಕ್ಕೋಂದು ಹೆಚ್ಚಿನ ಖರ್ಚಿದಯೇ? ಬೇಲಿ ಒಂದು ಹಾಕಿದರೆ ಆಯಿತು ಈಗ ಗೋವೆ ಬೀಜಕ್ಕಿರುವ ಬೆಲೆ ಬತ್ತಕ್ಕಿಲ್ಲ ಎಂದು ತಾಯಿಗೆ ಸಮಾಧಾನ ಹೇಳಿದಳು.

ನೀರು ಎರೆಯುವ ಕೆಲಸ ಮುಗಿಯಲು ರಾಮನ ಮನಸ್ಸೆಲ್ಲ ಕಡಿಮೆ ಬೀಳುವ 200 ರೂಪಾಯಿಗಳ ವಿಚಾರವಾಗಿಯೇ ತೊಳಲಾಡುತ್ತಿತ್ತು. ಹೊಗೆಸೊಪ್ಪಿಗೆ ಒಳ್ಳೆಯ ಬೆಲೆ ಬಂದರೆ ಮತ್ತೂ 150 ಸಿಗಬಹುದು. ಕೊನೆಗೆ ಹಣಕ್ಕಾಗಿ ಸಾಹುಕಾರರೊಡನೆ ವಹಿವಾಟು ಮುಂದುವರಿಸಬಾರದೆಂದೂ, ಮಾಧವನಿಂದಲಾದರೂ ಸಾಲ ಕೊಂಡು ಮನೆಯ ಬದುಕನ್ನು ಉಳಿಸಬೇಕೆಂದೂ ಅವನು ನಿರ್ಧರಿಸಿದನು.

ರಾಮನು ತನ್ನ ಒಳ್ಳೆಯ ಗುಣನಡತೆ ಮತ್ತು ಪರಿಶ್ರಮದಿಂದ ಮತ್ತೆ ಜಮೀನು ಪಡೆದು ಅದರಲ್ಲಿ ಕಷ್ಟಪಟ್ಟು ದುಡಿಯುವನು.ಮುಂದೆ 5 ಎಕ್ರೆ ಅರಾಲನ್ನೂ ತೆಗೆದುಕೊಳ್ಳುವನು.

ಇದೇ ಸಮಯದಲ್ಲಿ ಮನೆಗೆ ಬಂದ ಸುಬ್ಬತ್ತೆ ರಾಮನ ಮದುವೆಯ ಪ್ರಸ್ತಾಪವನ್ನೂ ಮಾಡುವಳು. 94"ಬ್ರಹ್ಮಾವರದ ನಾಗಪ್ಪಯ್ಯನವರ ಮಗಳ ಲಗ್ನವನ್ನು ಕುರಿತು ಆತುರಳಾಗಿದ್ದಳು. ಹೇಗಾದರೂ ಮಾಡಿ ರಾಮನ ಮದುವೆಯ ಪ್ರಸ್ತಾಪ ತೆಗೆಯಬೇಕೆಂದರೆ, ರಾಮ ಜಾಣನಂತೆ ಪಗಡೆಯಲ್ಲಿ ಕಾಯಿಗಳನ್ನು ಎದುರಿಸುವಂತೆ ಉಪಾಯದಿಂದ ಮಾತಿನ ಸರಣಿಯನ್ನೇ ಮರೆಯಿಸಿಬಿಡುತ್ತಾನೆ."94

ಆದರೆ ಮುಂದೊಂದು ದಿನ ಸುಬ್ಬತ್ತೆ ಬಂದಾಗ ರಾಮನಿಗೆ ಈ ವಿಚಾರ ತಿಳಿಸಿದಾಗಲೂ ಅವನು ಉತ್ಸಾಹ ತೋರಿಸುವುದಿಲ್ಲ. 95"ಅಮ್ಮ, ಅವರ ಮಗಳಿಗೆ ಹೊಗೆಸೊಪ್ಪಿಗೂ, ಹರಿವೆಗೂ ನೀರು ಹೊಯ್ಯಲು ಬರುತ್ತದಂತೇನು,"95 ಎಂದು ರಾಮ ಕೇಳುವನು.

ಒಂದು ದಿನ 96"ರಾಮ ನೇರವಾಗಿ ಕೋಡಿಯ ಅಳಿವೆಯ ಹಾದಿಯನ್ನು ಹಿಡಿದನು, ಅಲ್ಲಿಂದ ಪಡುಮುನ್ನೂರಿಗೆ ಸಾಗಿದನು. ಶನುಭಾಗರು ಮನೆಗೆ ಬಂದ ಅವನನ್ನು ತುಂಬಾ ಉಪಚರಿಸಿದರು. ಉಪಚಾರ ಮತ್ತೆ, ಒಂದು ಕೆಲಸವಿದೆ, ನನ್ನ ಜೊತೆ ಬ್ರಹ್ಮಾವರಕ್ಕೆ ಬರುತ್ತೀರಾ?"96 ಎಂದು ಕೇಳುವನು.

ಶಾನುಭೋಗರನ್ನು ಕರೆದುಕೊಂಡು ರಾಮ ಬ್ರಹ್ಮಾವರದ ನಾಗಪ್ಪಯ್ಯನವರಲ್ಲಿಗೆ ಬಂದು, ಅವಳ ಮಗಳೊಂದಿಗೆ ಮದುವೆಯ ಪ್ರಸ್ತಾಪ ಮಾಡಲು ಬಯಸುವನು.

ಶಾನುಭಾಗರು ಮತ್ತು ರಾಮ ಬ್ರಹ್ಮಾವರದ ನಾಗಪ್ಪಯ್ಯನವರಲ್ಲಿಗೆ ಹೋದಾಗ ಅವರ ಮನೆಯ ಬಾಗಿಲನ್ನು ನುಗ್ಗುವಾಗಲೇ ಮನೆಯಂಗಳವನ್ನು ಗುಡಿಸುತ್ತ ಅವರ ಮಗಳು ಸರಸ್ವತಿ ಕಾಣಿಸಿಕೊಂಡಳು. ಇವರನ್ನು ಕಂಡು ಕಸಬರಿಕೆ ಬಿಟ್ಟು ಅಲ್ಲೇ ಬದಿಗೆ ಸರಿದಳು. ಶಾನುಭಾಗರು 'ಅಪ್ಪಯ್ಯ ಇದ್ದಾರೆಯೇ? ಎಂದು ಅವಳನ್ನು ಕೇಳಲು' ಅಹುದು ಚಾವಡಿಯಲ್ಲೇ ಇರಬೇಕು, ಎಂಬ ಉತ್ತರ ಬರಲು ಇಬ್ಬರೂ ಒಳಕ್ಕೆ ಬಂದರು. ನಾಗಪ್ಪಯ್ಯಗೆ ಶಾನುಭಾಗರದು ಹಳೆಯ ಪರಿಚಯ. ಹೀಗಾಗಿ 'ಅಶೀ! ಅಪೂರ್ವದ ಶಾನುಭಾಗರು! ಏನು ನಿಮ್ಮ ಗ್ರಾಮ ಬಿಟ್ಟು ಈ ಗ್ರಾಮಕ್ಕೆ ಬಂದಿರಲ್ಲ! ಎಂದು ಕೇಳಿ ಅವರೊಂದಿಗಿರುವ ರಾಮ ಯಾರೆಂದು ಅವರಿಗೆ ತಿಳಿಯದೆ ಇವನಾರು? ಎಲ್ಲಿಗೆ ಹೊರಟಿರಿ? ಬಾಯಾರಿಕೆ ತರಲೇ? ಎಂದು ಉಪಚರಿಸಿದರು.

ಮುಂದೆ ರಾಮನ ಜೊತೆ ನಾಗಪ್ಪಯ್ಯನ ಮಗಳಾದ ಸರಸೋತಿಯ ವಿವಾಹ ನಡೆಯುತ್ತದೆ. [97]"ನಾಗವೇಣಿ ನಗುತ್ತ ಕುಳಿತ ರಾಮನನ್ನು ಕಂಡು 'ರಾಮ ಅವಳ ಹೆಸರೂ, ನಿನ್ನ ದೊಡ್ಡಜ್ಜಿಯ ಹೆಸರೂ, ಒಂದೇ! ಎಂದಳು.

ನನ್ನ ಹೆಸರೂ, ಅಜ್ಜನ ಹೆಸರೂ, ಇದ್ದಂತೆ! ಎಂದು ನಕ್ಕು ನುಡಿದ ರಾಮ."[97]

ಈ ರೀತಿ ರಾಮ ಐತಾಳರು ಮತ್ತು ಅವರ ತಂಗಿ ಸರಸೋತಿ ಕಥಾ ನಾಯಕ ನಾಯಕಿಯಾಗಿ ಪ್ರಾರಂಭವಾದ "ಮರಳಿ ಮಣ್ಣಿಗೆ" ಕಾದಂಬರಿ ಅವರ ಮುಂದಿನ ಜನಾಂಗದ ಲಚ್ಚ ಮನೆಯನ್ನು ಬಿಟ್ಟು ದೂರ ಹೋದರೂ ಮೂರನೆಯ ತಲೆಮಾರಿನ ರಾಮ ಮತ್ತೆ ಮನೆಗೆ ಹಿಂದಿರುಗಿ ಅದೇ ಭೂಮಿಯಲ್ಲಿ ಕಷ್ಟಪಟ್ಟು ಹಿಂದಿನ ಸೊಬಗನ್ನು ಮತ್ತೆ ಪಡೆಯುವಲ್ಲಿ ಯಶಸ್ವಿಯಾಗುವುದರೊಂದಿಗೆ ಅದೇ ರಾಮ ಮತ್ತು ಸರಸೋತಿ ಕಥಾ ನಾಯಕ-ನಾಯಕಿಯರಾಗಿ ಕಾದಂಬರಿ ಮುಕ್ತಾಯಗೊಳ್ಳುತ್ತದೆ.

# ಅಡಿ ಟಿಪ್ಪಣಿ

79–79 ಕಾರಂತ ಕೆಲವು ಮುಖಗಳು ಸಂ.ಜಿ.ಎಸ್.ಭಟ್ಟ ಪುಟ – ೮೬

80–80 ಮರಳಿ ಮಣ್ಣಿಗೆ ಪುಟ – ೪

81–81 ಮರಳಿ ಮಣ್ಣಿಗೆ ಪುಟ – ೧೪

82–82 ಮರಳಿ ಮಣ್ಣಿಗೆ ಪುಟ – ೩೬

83–83 ಮರಳಿ ಮಣ್ಣಿಗೆ ಪುಟ – ೧೮೯

84–84 ಮರಳಿ ಮಣ್ಣಿಗೆ ಪುಟ – ೨೦೩

85–85 ಕಾರಂತ ಕೆಲವು ಮುಖಗಳು ಸಂ.ಜಿ.ಎಸ್.ಭಟ್ಟ ಪುಟ – ೮೮

86–86 ಮರಳಿ ಮಣ್ಣಿಗೆ ಪುಟ – ೨೨೭

87–87 ಮರಳಿ ಮಣ್ಣಿಗೆ. ಪುಟ – ೨೩೧

88–88 ಮರಳಿ ಮಣ್ಣಿಗೆ ಪುಟ – ೨೩೪

89–89 ಮರಳಿ ಮಣ್ಣಿಗೆ ಪುಟ – ೨೯೩

90–90 ಮರಳಿ ಮಣ್ಣಿಗೆ. ಪುಟ – ೩೧೧

91–91 ಕಾರಂತ ಕೆಲವು ಮುಖಗಳು ಸಂ.ಜಿ.ಎಸ್.ಭಟ್ಟ ಪುಟ – ೮೯

92–92 ಮರಳಿ ಮಣ್ಣಿಗೆ. ಪುಟ – ೩೯೩

93–93 ಮರಳಿ ಮಣ್ಣಿಗೆ. ಪುಟ – ೩೯೯

94–94 ಮರಳಿ ಮಣ್ಣಿಗೆ. ಪುಟ – ೪೦೫

95–95 ಮರಳಿ ಮಣ್ಣಿಗೆ. ಪುಟ – ೪೦೭

96–96 ಮರಳಿ ಮಣ್ಣಿಗೆ. ಪುಟ – ೪೦೯

97–97 ಮರಳಿ ಮಣ್ಣಿಗೆ. ಪುಟ – ೪೧೧

# ಅಧ್ಯಾಯ ೬.

ಪ್ರಧಾನವಾಗಿ "ಮರಳಿ ಮಣ್ಣಿಗೆ"ಯನ್ನು ಕುರಿತಂತೆ

೬.೧: ಸಾಮಾಜಿಕ ಪರಿಸರ

೬.೨: ಅಂದಿನ ಜನರ ತುಡಿತ,ಮಿಡಿತ, ಸಂಸ್ಕಾರಗಳು

೬.೩: ಡಾ| ಕೆ. ಶಿವರಾಮ ಕಾರಂತರ ಮೇಲೆ ಅವುಗಳ ಪ್ರಭಾವ

೬.೪: 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ವ್ಯಕ್ತವಾಗುವ
ಸಾಮಾಜಿಕ ಕಳಕಳಿ

## ಪ್ರಧಾನವಾಗಿ "ಮರಳಿ ಮಣ್ಣಿಗೆ"ಯನ್ನು ಕುರಿತಂತೆ.

**೬.೧: ಸಾಮಾಜಿಕ ಪರಿಸರ**

[೯೮]"ಮರಳಿ ಮಣ್ಣಿಗೆ" ಕಾರಂತರು ಬರೆದ ಪ್ರಾದೇಶಿಕ ಕಾದಂಬರಿಯಾಗಿದೆ. ಮಂಗಳೂರು ಜಿಲ್ಲೆಯ ಕಡಲ ತೀರದ ಕೋಡಿ ಎಂಬ ಹಳ್ಳಿ ಹಾಗೂಅದರ ಸುತ್ತಮುತ್ತಲ ಪರಿಸರ ಈ ಕಾದಂಬರಿಯಲ್ಲಿ ತನ್ನೆಲ್ಲ ರೂಪು ವೈಶಿಷ್ಟ್ಯಗಳೊಂದಿಗೆ ಎದ್ದು ಕಾಣುತ್ತವೆ."[೯೮]

ಕೈಗಾರಿಕೆ ಹಾಗೂ ನಗರಗಳ ಪ್ರಭಾವದಿಂದ ದೂರದಲ್ಲಿರುವ ಅಲಕ್ಷ್ಯಕ್ಕೆ ಗುರಿಯಾದ ಹಳ್ಳಿಯ ಬಾಳೀಗೆ ಪ್ರಾಧಾನ್ಯ ಕೊಟ್ಟದ್ದರಿಂದ ಕಾದಂಬರಿಗೆ ಒಂದು ಪರಿಸರ ಕೇಂದ್ರಿತವಾದ ವಿಶಿಷ್ಟ ರೂಪ ಬಂದಿದೆ. ಈ ಪರಿಸರ ಇಲ್ಲಿಯ ಅನೇಕಾನೇಕ ಪಾತ್ರಗಳ ಸ್ವಭಾವಗಳು ಹಾಗೂ ಅವುಗಳಿಂದಾಗಿ ತಯಾರಾದ ಘಟನೆಗಳನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

ಶೀನಮಯ್ಯ ಅವರ ಮಕ್ಕಳಾದ ನರಸಿಂಹಮಯ್ಯ ಮತ್ತು ವರಟ ಪಿಟೀಲು ವಾದಕ ಸುಬ್ಬರಾಯ, ಶಿಕ್ಷಕರಾದ ಶಂಕರಮಯ್ಯ ವಕೀಲರಾದ ವಾಸುದೇವಮಯ್ಯ ಹಾಗೂ ಅವರ ಅವರ ಸಹೋದರರಾದ ನಾರಾಯಣಮಯ್ಯ, ಸತ್ಯಭಾಮೆಯ ತಂದೆ ಮಾದಪ್ಪಯ್ಯ, ಐತಾಳರ ಮಗಳು ಸುಬ್ಬಿ, ಬೇಸಾಯದ ಕೂಲಿಯಾಳು ಸೂರ, ಹೋಟೇಲು ನಡೆಸುವ ಕಿಟ್ಟ, ಹಾಗೂ ಅವನ ನಡತೆಗೆಟ್ಟ ಹೆಂಡತಿ ಜಲಜಾ, ಕೃಷ್ಣವೇಣಿ ಹಾಗೂ ಅವಳ ಗಂಡ ಮಾಧವ, ಇಂತಹ ಗದ್ದಲದೊಳಗಿಂದ ಎದ್ದು ಕಾಣುವ ಆರೇಳು ಪಾತ್ರಗಳು ಇವೆ.

ಐತಾಳರು ಅವರ ಹೆಂಡಿರಾದ ಪಾರ್ವತಿ ಹಾಗೂ ಸತ್ಯಭಾಮೆ, ಐತಾಳರ ಮಗ ಲಕ್ಷ್ಮೀನಾರಾಯಣ(ಲಚ್ಚ) ಮತ್ತು ಅವನ ಹೆಂಡತಿ ನಾಗವೇಣಿ, ಐತಾಳರ ಮೊಮ್ಮಗ ರಾಮ, ಐತಾಳರ ತಂಗಿ, ಬಾಲವಿಧವೆ ಸರಸ್ವತಿ.ಮೊದಲಾದ ಈ ಪಾತ್ರಗಳ ವ್ಯಕ್ತಿತ್ವಗಳ ಆಕಾರಗಳು ಉಳಿದ ಪಾತ್ರಗಳಿಗಿಂತ ಹೆಚ್ಚು ನಿಖರವಾಗಿ ಎರಕಹೊಯ್ದವುಗಳಂತೆ ಕಂಡುಬರುತ್ತವೆ. ಒಂದು ಕುಟುಂಬದಲ್ಲಿಯ ನಂಟಿನ ಎಳೆಯಿಂದ ಈ ಪಾತ್ರಗಳೆಲ್ಲ ಒಂದಕ್ಕೊಂದು ಕಟ್ಟಿಹಾಕಲ್ಪಟ್ಟಿವೆ.

"ಮರಳಿ ಮಣ್ಣಿಗೆ"ಗೆ ಬರೆದ ಮೊದಲ ಮಾತಿನಲ್ಲಿ ಕಾರಂತರು [೯೯]"ನನ್ನ ಊರಿನ ಬಡತನದ ಬಾಳ್ವೆಯೇ ಕತೆಯ ವಸ್ತುವಾಗಿದೆ. ಈ ಬಾಳ್ವೆಯ ಪ್ರಶ್ನೆ ಈ ಮೂರು ತಲೆಮಾರುಗಳಲ್ಲಿ ಹೇಗೆ ಪ್ರತ್ಯುತ್ತರಗೊಳ್ಳುತ್ತದೆ ಎಂಬುದು ಇದರಲ್ಲಿ ಚಿತ್ರಿಸಲ್ಪಟ್ಟಿದೆ."[೯೯] ಎಂದು ಹೇಳಿ ಕಾದಂಬರಿಯ ಕೇಂದ್ರವಸ್ತುವನ್ನು ನಿಯಂತ್ರಕ ಉದ್ಧೇಶನ್ನು ಸೂಚಿಸಿದ್ದಾರೆ. ೧೮೫೦ ರಿಂದ ೧೯೫೦ರ ವರೆಗಿನ ಸುಮಾರು ನೂರು ವರ್ಷಗಳ ಕಾಲಾವಧಿಯಲ್ಲಿ ಹಳ್ಳಿಯ ಜೀವನದ ಆರ್ಥಿಕ, ಸಾಮಾಜಿಕ, ನೈತಿಕ ಮುಖಗಳಲ್ಲಾದ ಸ್ಥಿತ್ಯಂತರಗಳನ್ನು, ಆ ಸ್ಥಿತ್ಯಂತರಗಳಿಗೆ ಕಾರಣವಾದ ಶಕ್ತಿ ಮೌಲ್ಯ ಕ್ರಮಗಳನ್ನು ತಾವು ಕಂಡ ಬಾಳಿನ ಮೂಲಕ ಸೃಷ್ಟಿಸುವದೇ ಲೇಖಕರ ಮುಖ್ಯ ಉದ್ಧೇಶವಾಗಿದೆ.

[೧೦೦]"ಈ ಕಾದಂಬರಿಯ ವಸ್ತುವಿನ ವಿಕಾಸ ಕ್ರಮದಲ್ಲಿ ಮೂರು ಅವಸ್ಥೆಗಳಲ್ಲಿ ನಾವು ಕಾಣುವ ಗ್ರಾಮೀಣ ಸಮಾಜ ಪಟ್ಟಿಯಾಗಿ ಬೇರೂರಿದ ನಿರ್ದಿಷ್ಟವಾದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದ ಶಾಶ್ವತ ಮೌಲ್ಯಗಳನ್ನು ನಂಬಿದ ಸಮಾಜ"[೧೦೦]ವನ್ನು ಕಾಣುತ್ತೇವೆ.

[101]"ನಿಸರ್ಗದ ಮಡಿಲಲ್ಲಿಯ ತಲೆತಲಾಂತರಗಳು ಕಳೆದದ್ದರಿಂದ ಈ ಜನ ನಿಸರ್ಗ, ಒಕ್ಕಲುತನ ಹಾಗೂ ನಿಸರ್ಗದ ಮಡಿಲಲ್ಲಿದ್ದ ತಮ್ಮ ಮನೆಗಳ ಮೇಲೂ ವಿಲಕ್ಷಣವಾದ ಆಸಕ್ತಿಯನ್ನು ಹೊಂದಿರುತ್ತಾರೆ."[101] ಐತಾಳರ ಸೊಸೆ ನಾಗವೇಣಿ ಹಾಗೂ ಅವಳ ಮಗ ರಾಮ ಇವರಿಬ್ಬರೂ ಹಗಲು ರಾತ್ರಿಗಳೆನ್ನದೆ ಕಡಲ ತೀರಕ್ಕೆ ಹೋಗಿ ಅಲ್ಲಿ ಗಂಟೆಗಟ್ಟಲೆ ಕುಳಿತುಕೊಳ್ಳುತ್ತಾರೆ. ಎಂತಹ ಕಷ್ಟ ಬಂದರೂ ಐತಾಳರ ಮುದಿ ತಂಗಿ ಮನೆಯನ್ನು ಬಿಟ್ಟು ಹೋಗಲಿಲ್ಲ. ಅರೆಹೊಟ್ಟೆ ಉಂಡು ಬಾಳುವ ಪ್ರಸಂಗ ಬಂದಾಗಲೂ ಐತಾಳರ ಸೊಸೆ ನಾಗವೇಣಿ ತೌರಿಗೆ ಹೋಗದೆ ತಮ್ಮ ಮನೆಯಲ್ಲೆ ಉಳಿಯುತ್ತಾಳೆ. ಇಂತಹ ಸನ್ನಿವೇಶಗಳನ್ನು ನೋಡಿದಾಗ ಅಂದಿನ ಜನರು ಅವರು ಹುಟ್ಟಿ ಬೆಳೆದ ಪರಿಸರ, ಸಮಾಜದ ಬಗ್ಗೆ ಅತೀವ ಪ್ರೀತಿ ಇಟ್ಟುಕೊಂಡಿರುವುದು ತಿಳಿಯುತ್ತದೆ.

ಅಂದಿನ ಸಮಯದಲ್ಲಿ ಸಮಾಜ ಪುರುಷರಿಗೆ ಮಾತ್ರ ಮಣೆ ಹಾಕುವುದು ಮತ್ತು ಸ್ತ್ರೀಯರನ್ನು ನಿರ್ಲಕ್ಷಿಸುವುದನ್ನು ಕಾಣಬಹುದು. ಇದಕ್ಕೆ ಉದಾಹರಣೆಗಳೆಂಬಂತೆ ಐತಾಳರು ಎರಡನೆಯ ಮದುವೆಯಾಗುವಾಗ ತಮ್ಮ ಮನೆಯವರಾದ ಸರಸೋತಿ, ಪಾರ್ವತಿಯವರಿಗೆ ಹೇಳದೆ ತಾನೆ ಮದುವೆಯನ್ನು ನಿರ್ಧರಿಸುವುದು. ಐತಾಳರ ಮದುವೆಯ ಸಮಯದಲ್ಲಿ ಪಾರೋತಿಯು ದುಃಖವನ್ನು ಅನುಭವಿಸುತ್ತಿದ್ದರೂ ಅದನ್ನು ಹೊರಗೆ ತೋರ್ಪಡಿಸದೆ [102]"ಆ ದಿನ ಮನೆಯಲ್ಲೇ ಇದ್ದರೆ ಈ ಲಗ್ನ ಪಾರೋತಿಯ ಮನಸ್ಸಿಗೆ ಬಂದು ನಡೆದಿಲ್ಲ ಎಂಬ ಊಹೆ ಊರಿಗೆ ಹರಡೀತೆಂದು, ಹಾಗಾಗಕೂಡದೆಂದು ತನಗೆ ಉಕ್ಕಿ ಬರುತ್ತಿದ್ದ ದುಃಖವನ್ನು ಹದ್ದಿಗೆ ತಂದುಕೊಂಡು ಅಡಿಗೆ ಚಪ್ಪರಕ್ಕೆ ಹೋದಳು."[102]

ಇಲ್ಲಿ ಸ್ತ್ರೀಯರು ಕೇವಲ ಮನೆಕೆಲಸ ಮಾಡಲು ಮಾತ್ರ ಯೋಗ್ಯ. ಅವರಿಗೆ ಯಾವುದೇ ಪ್ರಾಪಂಚಿಕ ವಿಷಯಗಳು ಗೊತ್ತಿಲ್ಲ. ಆದ್ದರಿಂದ ಅವರಲ್ಲಿ ಅಂತಹ ವಿಷಯ ಹೇಳುವ ಅಗತ್ಯವೂ ಇಲ್ಲ ಎಂಬ ಭಾವನೆ ಅಂದಿನ ಪುರುಷ ಪ್ರಧಾನ ಸಮಾಜವಾಗಿತ್ತು.

ಈ ಸಮಾಜದಲ್ಲಿ ಬಾಳಿ ಬದುಕುವ ವ್ಯಕ್ತಿಗಳು ಸಾಂಪ್ರದಾಯಿಕ ಮೌಲ್ಯಗಳನ್ನು ದೃಢವಾಗಿ ನಂಬಿರುವುದರಿಂದ ಅವರ ವೈಯಕ್ತಿಕ ಕಷ್ಟ ಕಾರ್ಪಣ್ಯಗಳೇನೇ ಇದ್ದರೂ ತಮ್ಮ ಆವರಣದ ಪರಿಮಿತಿಯಲ್ಲಿಯೇ ಸಫಲತೆಯನ್ನು ದೊರಕಿಸುತ್ತಾರೆ. ಜೀವನ ತುಂಬೆಲ್ಲ 'ಮೂಕ ಸಂಕಟ'ವನ್ನನುಭವಿಸಿಯೂ ಪಾರೋತಿ ಸುಖದ ಸಾವನ್ನೇ ಕಾಣುತ್ತಾಳೆ.

[103]"ಬೊಗಸೆಗಣ್ಣುಗಳಿಂದ ತನ್ನ ತಲೆಯನ್ನು ಎತ್ತಿಕೊಂಡು ತೊಡೆಯ ಮೇಲಿರಿಸಿಕೊಂಡು ನಾರಾಯಣ ಸ್ಮರಣೆ ಮಾಡುವ ಐತಾಳರ ಮುಖವನ್ನು ಅವಳು ಚೆನ್ನಾಗಿ ಕಾಣುತ್ತಿದ್ದಳು. ಸರಸೋತಿಯು ಗಂಗಾಜಲವನ್ನು ಅವಳ ಬಾಯಿಗೆ ಎರೆದಳು. ಕಾಲ ಬುಡದಲ್ಲಿ ಸತ್ಯಭಾಮೆ ಬಂದು ಕುಳಿತಳು. ಪಾರೋತಿಯ ಮುಖದಲ್ಲಿ ಶಾಂತಿ ತುಟಿ ನಿಷ್ಕಲ್ಮಷ ಎಳೆ ನಗುವಿನಿಂದ 'ನನಗೇನು ಬೇಕಿನ್ನು!' ಎನ್ನುವ ತೃಪ್ತಿಯನ್ನು ಉದಿಸಿತು, ಸಾರುತ್ತಿತ್ತು."[103]

ಅಂದಿನ ಸಮಾಜದಲ್ಲಿ 'ಶೂದ್ರ' ಎನ್ನುವ ಪದ ಕಥೆಯುದ್ದಕ್ಕೂ ನಡೆದು ಬರುವ 'ಭ್ರಾಹ್ಮಣ' ಪದಕ್ಕೆ ವಿರುದ್ಧವಾಗಿ ನಿಲ್ಲುವ ಪದ. ಶೂದ್ರ ವರ್ಗವು ಅತ್ಯಂತ ಹೀನ ಅಥವಾ ದುರ್ಬಲ ಆರ್ಥಿಕ ಪರಿಸ್ಥಿತಿಯನ್ನು ಹೊಂದಿತ್ತು, ಮತ್ತು ಜೀವನ ರೀತಿಯೂ ಕೆಳಸ್ಥರದಲ್ಲಿತ್ತು.

ಸರಸೋತಿ ಹೇಳುತ್ತಾಳೆ, [104]"ಅಲ್ಲಲ್ಲಿ ಸುಗ್ಗಿ ಬಿತ್ತಿದರೆ ಒಂದು ಕಾಳು ಆಗಲಿಕ್ಕಿಲ್ಲ, ಕಳೆದ ವರ್ಷ ಆದದ್ದೇನು? ಬಿತ್ತಿದ್ದರಲ್ಲಿ ಮುಕ್ಕಾಲು ಪಾಲು ಯಾರ್‍ಯಾರ ಮನೆಯ ಕೋಳಿಗಳ ಬಾಯಿಗೇ ಹೋಯಿತು. ಈ ಶೂದ್ರರ ಹಿಂಡಿನಲ್ಲಿ ನಾವು ಸುಗ್ಗಿ ಗದ್ದೆ ಮಾಡಿ ಬಚಾವಿಲ್ಲ."[104]

ಸತ್ಯಭಾಮೆ ಹೊಯಿಗೆಯಲ್ಲಿ (ಮರಳಿನಲ್ಲಿ) ಬಿಸಿಲಿಗೆ ಏಕೆ ನಡೆದದ್ದು, ಹೆದ್ದಾರಿಯಿಂದ ಬರಬಹುದಿತ್ತು ಎಂದು ಹೇಳಿದಾಗ ಐತಾಳರೆನ್ನುತ್ತಾರೆ, [105]"ಹೆದ್ದಾರಿಯಲ್ಲಿ ಹೊಲೆ ಮೈಲಿಗೆ, ಉದ್ದಕ್ಕೂ ಶೂದ್ರ ಮಕ್ಕಳ ಹಿಂಡು, ಜಾತ್ರೆ ಬಂತೆಂದರೆ ಅವಕ್ಕೆ ಕಣ್ಣೇ ಕಾಣಿಸುವುದಿಲ್ಲ. ಇಲ್ಲಿ ಸಮುದ್ರದ ಬದಿಯಲ್ಲಿ ಯಾರ ತಂಟೆಯೂ ಇಲ್ಲ."[105] ಎನ್ನುವಲ್ಲಿ ಕೆಳಗಿನ ವರ್ಗದ ಜನರ ಸ್ಥಿತಿಗತಿ, ರೀತಿ ರಿವಾಜಿಗಳನ್ನು ತಿಳಿಯಬಹುದು.

ಅಂದಿನ ಸಮಾಜದಲ್ಲಿ ಮಡಿ–ಮೈಲಿಗೆ ಇರುವುದನ್ನು ಗಮನಿಸಬಹುದು. ಭ್ರಾಹ್ಮಣರು ಉನ್ನತ ಸ್ಥರದ ಕೆಲಸಗಳನ್ನು ಮಾತ್ರ ಮಾಡಬೇಕು ಎನ್ನುವ ಕಲ್ಪನೆಯೂ ಅಂದಿನ ಸಮಾಜದಲ್ಲಿತ್ತು. ಶೀನ ತನ್ನ ಹಿರಿಯ ಮಗ ನರಸಿಂಹನನ್ನು ಬೆಂಗಳೂರಿಗೆ ಕಳಿಸಬೇಕಾಗುತ್ತದೆ. ಆಗ ಐತಾಳರು [106]" ಯಾವ್ಯಾವ ಜಾತಿಯವರು ತಿಂದು ಬಿಟ್ಟ ಎಂಜಲನ್ನು ತೆಗೆಯಲಿಕ್ಕೆ ದೇವರು ನಮಗೆ ಭ್ರಾಹ್ಮಣ ಜನ್ಮವನ್ನು ಕೊಟ್ಟಿದ್ದೇನು?"[106] ಎನ್ನುವರು. ಇಲ್ಲಿಯೂ ಭ್ರಾಹ್ಮಣರು ಇಂತಹ ಹೀನ ವೃತ್ತಿಗಳನ್ನು ಮಾಡಬಾರದು ಎಂಬ ಅಂದಿನ ಸಮಾಜದ ದೃಷ್ಟಿಕೋನ ಐತಾಳರ ಮೂಲಕ ಪ್ರಕಟಗೊಂಡಿದೆ.

ಹೀಗೆ ಅಂದಿನ ಸಮಾಜ ಪುರುಷ ಪ್ರಧಾನವಾಗಿ, ಭ್ರಾಹ್ಮಣಶಾಹಿ ವರ್ಗದ ಮೇಲುಗೈ ಮಡಿ ಮೈಲಿಗೆಯಿಂದ ಕೂಡಿತ್ತು.

## ೬.೨: ಅಂದಿನ ಜನರ ತುಡಿತ, ಮಿಡಿತ, ಸಂಸ್ಕಾರಗಳು

ಅಂದಿನ ಜನರು ಅತ್ಯಂತ ತಾಳ್ಮೆಯುಳ್ಳವರು. ಪರರ ಕಷ್ಟಗಳಿಗೆ ಸ್ಪಂದಿಸುವ ಮನೋಭಾವ ಇದ್ದವರು ಎಂದು ತಿಳಿಯಬಹುದು. ಅವರು ಸಮಾಜದ ರೀತಿ ನೀತಿಗಳನ್ನು ಎಷ್ಟು ಕಷ್ಟವಾದರೂ ಪಾಲಿಸಿಕೊಂಡು ಬರುತ್ತಿದ್ದರು.

[107]"ಐತಾಳರ ತಂಗಿ ಸರಸ್ವತಿ ಕರ್ತೃತ್ವಶಾಲಿಯೂ ಸಾಭಿಮಾನಿಯೂ ಅಲ್ಲದೆ ಪ್ರೇಮಮಯಿಯಾದ ಬಾಲವಿಧವೆಯಾಗಿದ್ದಾಳೆ. ಐತಾಳರ ಮೊದಲ ಹೆಂಡತಿಯಾದ ಪಾರ್ವತಿ ಅಪಾರವಾದ ಸಹನೆಯುಳ್ಳವಳು. ಸಾದಾ ಸರಳ ಮನಸ್ಸಿನವಳಲ್ಲದೆ ಮೈಮುರಿದು ದುಡಿಯುವವಳಾಗಿದ್ದಾಳೆ."[107]

ಐತಾಳರ ಸೊಸೆ ನಾಗವೇಣಿಯ ಸ್ವಭಾವ ಚಿತ್ರವಂತೂ ಅವಳು ತಾಳ್ಮೆಯ ಮೂರ್ತಿ ಎಂದು ಸಾರಿ ಹೇಳುತ್ತದೆ. ತನ್ನ ಗಂಡ ಒಬ್ಬ ಸ್ವಾರ್ಥಿ, ವ್ಯಭಿಚಾರಿ, ಕೆಟ್ಟ ಚಾಳಿಯವನಷ್ಟೇ ಅಲ್ಲದೆ ದುಂದುಗಾರನಾಗಿದ್ದರೂ ಅವಳು ಎದೆಗುಂದದೆ ಬಂದ ಎಲ್ಲ ಕಷ್ಟ-ಕಾರ್ಪಣ್ಯಗಳನ್ನು ಗಟ್ಟಿಯಾಗಿ ನಿಂತು ಎದುರಿಸುತ್ತಾಳೆ.

ವಿಧವೆಯರ ಮನಸ್ಸಿನ ನೋವನ್ನು ಅರ್ಥಮಾಡಿಕೊಳ್ಳುವವರೂ ಯಾರೂ ಅಂದು ಇರಲಿಲ್ಲ. ಅವರಿಗೆ ಸಮಾಜದಲ್ಲಿ ಯಾ಼ವ ಸ್ಥಾನಮಾನವೂ ಇರಲಿಲ್ಲ. ಐತಾಳರ ತಂಗಿ ಸರಸ್ವತಿ ಬಾಲವಿಧವೆಯಾಗಿ ತನ್ನ ಅಣ್ಣನ ಮನೆಯಲ್ಲಿ ಕೆಲಸದ ಆಳಿಗಿಂತ ಕಡೆಯಾಗಿ ದುಡಿದರೂ, ಮನೆಯ ಯಾವುದೇ ಮಹತ್ವದ ನಿರ್ಧಾರ ಕೈಗೊಳ್ಳುವಾಗ ಅವಳನ್ನು ಗಣಣೆಗೆ ತೆಗೆದುಕೊಳ್ಳುವುದಿಲ್ಲ. ಐತಾಳರು ಮರುಮದುವೆಯಾಗುವ ಸಮಯದಲ್ಲಿಯೂ ಮನೆಯ ಅಂಗಳಕ್ಕೆ ಚಪ್ಪರ ಹಾಕಿ ನೆಲವನ್ನು ಅಂದವಾಗಿ ಬಪ್ಪ ಮಾಡಲು ಸರಸ್ವತಿ ಬೇಕು, ಆದರೆ ಅವಳಿಗೆ ಮನೆಯ ಯಾವುದೇ ಆಗು ಹೋಗುಗಳು ತಿಳಿಯುವುದಿಲ್ಲ.

ಬಂಜೆಯಾದವಳೂ ಅಂದಿನ ಸಮಾಜದಲ್ಲಿ ಅನಾದರಕ್ಕೆ ಒಳಗಾಗಿದ್ದಳು. ಅವಳಿಗೆ ಒಂದು ಮನಸ್ಸಿದೆ, ಅವಳಿಗೂ ನೋವು ನಲಿವುಗಳಿವೆ ಎಂದು ಅಂದಿನ ಸಮಾಜ ಗಣಿಸುತ್ತಿರಲಿಲ್ಲ. ಅಂತಹವರು ಕಾಲಕಸಕ್ಕಿಂತ ಕಡೆಯಾಗಿದ್ದರು. ಈತಾಳರ ಹೆಂಡತಿ ಬಂಜೆಯಾಗಿದ್ದರಿಂದ ಐತಾಳರು ಎರಡನೆಯ ಮದುವೆಯ ನಿರ್ಧಾರ ಮಾಡುತ್ತಾರೆ. ಆದರೆ ತನ್ನ ಹಿಂದಿನ ಹೆಂಡತಿಯ ಮನಸ್ಸನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅವಳಿಗಾಗುವ ಸಂಕಟವನ್ನು ಅರ್ಥಮಾಡುವವರು ಯಾರೂ ಇರುವುದಿಲ್ಲ.

ಒಂದು ಹಂತದಲ್ಲಿ ಅಂದಿನ ಮಹಿಳೆಯರ ಮನಸ್ಸಿನ ತುಡಿತ-ಮಿಡಿತಗಳನ್ನೇ ಯಾರೂ ಕೇಳುವವರಿರಲಿಲ್ಲ. ಇದನ್ನು ಸರಸ್ವತಿ ನಾಗವೇಣಿಯಲ್ಲಿ [108]"ನೀನು ಏನೇ ಹೇಳು ಮಗು, ಈ ಹೆಣ್ಣಿನ ಜನ್ಮ ಎಂಬುದು ಹಿಂದೆ ಯಾವ ಯಾವ ಪಾಪ ಮಾಡಿಯೋ ಬಂದದ್ದು, ಇದು ನರಕ ಅನುಭವಿಸಲಿಕ್ಕೆ ಬಂದ ಜನ್ಮ, ಸುಖಕ್ಕಲ್ಲ"[108] ಎನ್ನುತ್ತಾಳೆ. ಭಾರತೀಯ ಸಮಾಜ ವ್ಯವಸ್ಥೆಯಲ್ಲಿಯ ಮಹಿಳೆಯರ ಬಾಳಿನ ಸ್ವರೂಪವು ಈ ಮಾತುಗಳಲ್ಲಿ ಅಡಕವಾಗಿದೆ. [109]"ಸಂಸಾರದ ಮಧುರವಾದ ಕನಸುಗಳನ್ನು ಕಟ್ಟುತ್ತಾ ಬಸುರಿಯಾದ ನಾಗವೇಣಿಗೆ ಬಿಳಿ ಸೆರಗಿನ ತೊಂದರೆಯೂ ಶುರುವಾಗುತ್ತದೆ. ಗಂಡ ತನ್ನ ಗುಪ್ತ ರೋಗದ ಪ್ರಸಾದವನ್ನು ಅವಳಿಗೆ ಕೊಟ್ಟಿರುತ್ತಾನೆ. ಇಲ್ಲಿಂದಲೇ ಅವಳ ಬಾಳು

ಅಸ್ತವ್ಯಸ್ತಗೊಳ್ಳಲು ತೊಡಗಿದ್ದು."109 ಬೇರೆಯವರಾಗಿದ್ದರೆ ತೀರಾ ಕಮರಿಹೋಗಬಹುದಿತ್ತು. ಆದರೆ ನಾಗವೇಣಿಯು ಸ್ವಸಾಮರ್ಥ್ಯದಿಂದ ತಾಳಿ ಬಾಳುತ್ತಾಳಲ್ಲದೆ ರಾಮನನ್ನು ಬೆಳೆಯಿಸಿ ದೊಡ್ಡವನನ್ನಾಗಿ ಮಾಡುತ್ತಾಳೆ.

110"ಆದರ್ಶ ರಾಮ ತನ್ನಲ್ಲಿಯ ಚೆಲುವಿನ ಸಂವೇದನೆಯನ್ನು ಒಲವಿನ ತುಡಿತವನ್ನು ಬದಿಗೊತ್ತಿ ತನ್ನ ಬಾಳಸಂಗಾತಿಯಲ್ಲಿ ಗೆಯ್ಮೆಯ ಸಾಮರ್ಥ್ಯವನ್ನು ಅಪೇಕ್ಷಿಸಿದಾಗ, ತನ್ನನ್ನು ತಾನೇ ವಂಚಿಸಿಕೊಳ್ಳುವುದಷ್ಟೇ ಅಲ್ಲ, ತನ್ನೊಡನೆ ಬಾಳ್ವೆ ಮಾಡಲು ಬರುವವಳಲ್ಲಿರಬಹುದಾದ ಚೆಲುವು, ಒಲವುಗಳ ಸಂವೇದನೆ, ಬಯಕೆಗಳನ್ನು ಬದಿಗೊತ್ತಿ, ಅವಳನ್ನೂ ಗೇಯುವ ಶೂದ್ರಳನ್ನಾಗಿ ಮಾಡಿವಂಚಿಸಲು ಹೊರಡುತ್ತಾನೆ."110

ಈ ನಾಡು ನಗರಗಳಿಗಿಂತ ಭಿನ್ನವಾಗಿರುವಂತೆ ಇಲ್ಲಿಯ ಜನರು ಕೂಡಾ ಬೇರೆಯವರೇ ಆಗಿದ್ದಾರೆ. 111"ಅವರ ಭಾವನೆಗಳು ಇದ್ದಕ್ಕಿದ್ದಂತೆ ಹೊರಹೊಮ್ಮುವಂತವು. ಅವು ಸಂಯಮವನ್ನು ಅರಿಯವು. ಕೃತಕವಾದ ನಡೆ ನುಡಿ ಮರೆಮಾಚುವಿಕೆಯೆಂಬುದಿಲ್ಲ. ಇಲ್ಲಿಯ ನಂಟುಗಳು ಹರಿಯದಂತವು, ಗಟ್ಟಿಮುಟ್ಟಾಗಿದ್ದು ಆಸ್ಥೆಯಿಂದ ಕೂಡಿದವುಗಳಲ್ಲಿದೆ (ಸಾವಿನ ಅಂಚಿನಲ್ಲಿರುವ ಮುತ್ತಜ್ಜಿಗೆ ಮರಿಮಕ್ಕಳನ್ನು ಬೆಟ್ಟ ಮಾಡಿಸುವ ಮಟ್ಟಿಗೆ) ದೂರಕ್ಕೂ ನಡೆದು ಹೋಗುವಂತವುಗಳು."111 ಜನ ಒಬ್ಬರಿಗೊಬ್ಬರು ಹತ್ತಿರವಾಗುತ್ತಾ ಹೋದಂತೆ ಅವರಲ್ಲಿ ಮಮತೆ ಹುಟ್ಟಿ ಬರುವಂತೆ ದ್ವೇಶವೂ ಹುಟ್ಟಿಕೊಳ್ಳುವ ಸಾಧ್ಯತೆಯಿರುತ್ತದೆ.

ನಿಸರ್ಗದ ಮಡಿಲಲ್ಲೇ ತಲೆತಲಾಂತರಗಳು ಕಳೆದದ್ದರಿಂದ ಈ ಜನ ನಿಸರ್ಗ ಒಕ್ಕಲುತನವನ್ನು ರೂಢಿಸಿಕೊಂಡದ್ದರಿಂದ ಅಂದಿನ ಜನರು ತಾಳ್ಮೆ, ಸಹನೆಯ ಮೂರ್ತಿಗಳಾಗಿದ್ದರು.

## ೬.೩: ಡಾ। ಕೆ. ಶಿವರಾಮ ಕಾರಂತರ ಮೇಲೆ ಅವುಗಳ ಪ್ರಭಾವ

ಡಾ। ಕೆ. ಶಿವರಾಮ ಕಾರಂತರು ಉಡುಪಿ ಜಿಲ್ಲೆಯ ಕೋಟ ಎಂಬ ಊರಿನಲ್ಲಿ ಜನಿಸಿದ ಕಾರಣ ಆ ಊರಿನ ಬಡತನ ಅಲ್ಲಿನ ಜನರ ರೀತಿ ನೀತಿ, ಆಚಾರ ವಿಚಾರಗಳು ಅವರ ಮೇಲೆ ಸಹಜವಾಗಿ ಪ್ರಭಾವಿತವಾಗಿವೆ.

112"ಕಾರಂತರ ಹಿರಿಯರು ತುಂಬಾ ಬಡತನದಲ್ಲಿ ಬೆಳೆದು ಬಂದವರು. ಶೇಷ ಕಾರಂತರ ಅಜ್ಜನಿಗೆ ಇದ್ದುದು ಕೇವಲ ಅರ್ಧ ಎಕರೆ ಜಮೀನು. ಇದರ ಉತ್ಪನ್ನ ಸಾಲದೆ ಜೀವನಕ್ಕಾಗಿ ಅವರು ಘಟ್ಟದ ಮೇಲೆ ಮೂಡು ಸೀಮೆಗೆ ಹೋಗಿ ಕೊನೇಗೆ ಅಲ್ಲಿಯೇ ಕಾಲವಾದರು."112 ಈ ಬಡತನ ಶಿವರಾಮ ಕಾರಂತರ ಮೇಲೆಯೂ ಪ್ರಭಾವಿತವಾಗಿದೆ. ಅವರೇ ಹೇಳುವಂತೆ 'ಮರಳಿ ಮಣ್ಣಿಗೆ ಕಾದಂಬರಿ' 113"ನನ್ನ ಊರಿನ ಬಡತನದ ಬಾಳ್ವೆಯೇ ಕಥೆಯ ವಸ್ತುವಾಗಿದೆ."113 ಈ ಬಡತನವನ್ನು ಕಾದಂಬರಿಯಲ್ಲಿ ವಿವಿಧ ಪಾತ್ರಗಳ ಮೂಲಕ ವ್ಯಕ್ತಪಡಿಸಿ ಕೊನೆಯಲ್ಲಿ ಕಷ್ಟಪಟ್ಟು ಈ ಬಡತನದಲ್ಲಿಯೂ ನೆಮ್ಮದಿಯ ಬದುಕು ಬದುಕಲು ಸಾಧ್ಯವಿದೆ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ.

ಅಂತೆಯೇ ಕಾರಂತರು ಬೆಳೆದ ಪರಿಸರ ಕೋಟದ ಹಳ್ಳಿಯಾದುದರಿಂದ ಅಲ್ಲಿನ ನೆಲ, ಜಲ ಅವುಗಳಲ್ಲಿ ಕಾಣಿಸಿಕೊಳ್ಳುವ ಕಲ್ಲು, ಮರಳು ಮಣ್ಣು, ಕೆಸರು, ಅವುಗಳಲ್ಲಿ ಬೆಳೆಯುತ್ತಿರುವ ಗಿಡಮರ ಇವೆಲ್ಲವೂ ಶಿವರಾಮ ಕಾರಂತರಲ್ಲಿ ಪ್ರಭಾವ ಬೀರಿರುವುದು ಕಾದಂಬರಿಯಲ್ಲಿ ಗೋಚರಿಸುತ್ತದೆ.

ಶಿವರಾಮ ಕಾರಂತರು ಪ್ರೌಢಶಾಲೆಯ ಓದಿಗೆ ಕೋಟದಿಂದ ಎಂಟು ಮೈಲಿ ದೂರದ ಕುಂದಾಪುರಕ್ಕೆ ತೆರಳಿ ಅಲ್ಲಿ ಸುಮಾರು ಎಂಟು ವರ್ಷಗಳ ಕಾಲ ವಿದ್ಯಾಭ್ಯಾಸ ಮುಂದುವರಿಸಿದ್ದರು. ಈ ವಿಚಾರವನ್ನು ಕುರಿತು. 114"ಕುಂದಾಪುರ, ಉಡುಪಿ, ಮಂಗಳೂರಿನಲ್ಲಿ ಇಂಗ್ಲೀಷ್ ಶಾಲೆಗಳು ತೊಡಗಿ ದೊಡ್ಡವರ ಮಕ್ಕಳನ್ನು ಸೆಳೆಯುತ್ತಿದ್ದ ಕಾಲವದು. ಎಲ್ಲರೂ ವಕೀಲಿ, ತಪಶೀಲಿಕೆಗಳ ಭ್ರಮೆಯಿಂದ ಅಲ್ಲಿಗೆ ಹೋಗಿದ್ದರಾಗುತ್ತಿತ್ತು. ಎಂದು ತಮ್ಮ ಮಕ್ಕಳ ವಿಷಯವಾಗಿ ಹಂಬಲಪಡುತ್ತಿದ್ದ ಯುಗವದು,"114 ಎಂದು ಕಾದಂಬರಿಯಲ್ಲಿ ವಿಷಯ ಪ್ರಸ್ತಾಪಿಸಿ, ಅವರೂ ವಿದ್ಯಾಭ್ಯಾಸ ಮುಂದುವರಿಸಲು ಕಾರಣವಾದ ಅಂಶವನ್ನು ಕುರಿತು ವಿವರಿಸುತ್ತಾರೆ.

ಶಿವರಾಮ ಕಾರಂತರು ಬೆಳೆದ ಮನೆಯಲ್ಲಿ ಬ್ರಾಹ್ಮಣರ ಆಚಾರ, ವಿಚಾರ, ಸಂಸ್ಕಾರಗಳನ್ನು ಪಾಲಿಸುತ್ತಿದ್ದರೂ ಕಾರಂತರಿಗೆ ಅವುಗಳ ಮೇಲೆ ವಿಶೇಷವಾದ ಆಸಕ್ತಿ ಇರಲಿಲ್ಲ. 115"ಕುಂದಾಪುರದಲ್ಲಿ ನಡೆಯುತ್ತಿದ್ದ ಪ್ರೌಢಶಾಲಾ ಶಿಕ್ಷಣದ ದೆಸೆಯಿಂದ, ಅಲ್ಲಿಯ ವಿಭಿನ್ನ ಜಾತಿಯ ಗೆಳೆಯರ ದೆಸೆಯಿಂದ. ಮನೆಯ ಹಿರಿಯರ ಕಣ್ಣಿಂದ ದೂರವಾಗಿ ವಾಸಿಸುತ್ತಿದ್ದುದರಿಂದ ಕೋಟ ಮಹಾ ಜಗತ್ತಿನ ಮಾನಸಿಕ ಆವರಣ, ಮಡಿ, ಮೈಲಿಗೆಗಳ ಕಲ್ಪನೆ ಮುಂತಾದುವು ಬದಲಾಗುತ್ತಾ ಬಂತು."115 ಇದನ್ನು ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ಲಚ್ಚನ ಪಾತ್ರದ ಮೂಲಕ ಅವನ ನಡವಳಿಕೆಗಳ ಮೂಲಕ ಚಿತ್ರಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಶಿವರಾಮ ಕಾರಂತರಿಗೆ ತಾಯಿಯ ಮೇಲೆ ವಿಶೇಷವಾದ ಪ್ರೀತಿ. ಅಂತೆಯೇ ಮನೆಯವರ ಸ್ವಭಾವವನ್ನು ಕಾದಂಬರಿಯಲ್ಲಿ ಸರಸೋತಿ–ಪಾರ್ವತಿಯವರ ಪಾತ್ರದ ಮೂಲಕ ಅವರ ತಾಳ್ಮೆ, ಸಹಿಷ್ಣತೆ ಮುಂತಾದ ಉದಾತ್ತ ಗುಣಗಳನ್ನು ಚಿತ್ರಿಸುವ ಕೆಲಸ ಮಾಡಿದ್ದಾರೆ.

ಅವರ ಮನೆತನದ ಬಡತನ ಕಷ್ಟ ಸಹಿಷ್ಣತೆಯನ್ನು ಕಾದಂಬರಿಯ ಪ್ರಮುಖ ಪಾತ್ರಗಳು ಹೊಲದಲ್ಲಿ ಕಷ್ಟಪಡುವುದನ್ನು ಚಿತ್ರಿಸಿ ತಮ್ಮ ಮನೆಯವರ ಕಷ್ಟಗಳೇನು? ಎಂಬುದನ್ನು ಹೇಳುವ ಪ್ರಯತ್ನ ಮಾಡಿದ್ದಾರೆ.

ಇನ್ನೊಂದೆಡೆ ಪುರುಷ ಪ್ರಧಾನ ಸಮಾಜ ಚಾಲ್ತಿಯಲ್ಲಿರುವುದನ್ನು ॥6"ಶೀನ, ನಮ್ಮ ಮನೆಯ ಪಂಚಾತಿಗೆ ನಿನಗೆ ಗೊತ್ತಿಲ್ಲ. ನಮ್ಮಲ್ಲಿ ಒಬ್ಬ ಯಜಮಾನ ಅಂದರೆ ಒಬ್ಬನೇ ಯಜಮಾನ, ಗಂಡು ಒಂದು ಹೇಳುವುದು, ಹೆಂಡತಿ ಇನ್ನೊಂದು ಅಂಬುವುದು ಈವರೆಗೆ ನಡೆದಿಲ್ಲ."॥6 ಎಂಬ ಐತಾಳರ ಮಾತಿನ ಮೂಲಕ ಹೇಳುತ್ತಾರೆ.

ಅಂದಿನ ಬ್ರಾಹ್ಮಣರ ಸಂಪ್ರದಾಯವನ್ನು ಐತಾಳರ ಮಾತಿನ ಮೂಲಕ ॥7"ನಿನಗೆ ಮರುಳು ಶೀನ! ಯವ್ಯಾವ ಜಾತಿಯವರು ತಿಂದುಬಿಟ್ಟ ಎಂಜಲನ್ನು ತೆಗೆಯಲಿಕ್ಕೆ ದೇವರು ನಮಗೆ ಬ್ರಾಹ್ಮಣ ಜನ್ಮ ಕೊಟ್ಟದ್ದೇನು"॥7 ಎನ್ನುವ ಮೂಲಕ ಉನ್ನತ ಜಾತಿಯವರು ಹೀನ ವೃತ್ತಿ ಮಾಡಬಾರದು ಎಂಬ ಅಂದಿನ ಸಾಮಾಜಿಕ ಕಟ್ಟುಪಾಡುಗಳನ್ನು ವಿವರಿಸಿದ್ದಾರೆ.

ಈಗೆ ಅಂದಿನ ಜನರ ರೀತಿ ನೀತಿ, ಸಂಸ್ಕಾರಗಳು ಶಿವರಾಮ ಕಾರಂತರ ಮೇಲೆ ಪ್ರಭಾವ ಬೀರಿರುವುದನ್ನು ಗಮನಿಸಬಹುದು.

## ೬.೪: "ಮರಳಿ ಮಣ್ಣಿಗೆ" ಕಾದಂಬರಿಯಲ್ಲಿ ವ್ಯಕ್ತವಾಗುವ ಸಾಮಾಜಿಕ ಕಳಕಳಿ

"ಮರಳಿ ಮಣ್ಣಿಗೆ" ಕಾದಂಬರಿಯಲ್ಲಿ ಮೂರು ತಲೆಮಾರುಗಳ ಚಿತ್ರಣವಿದ್ದು ಕಾಲ ಪ್ರವಾಹವಿದಲ್ಲಿ ಸಾಮಾಜಿಕ ಪರಿವರ್ತನೆ ಹೇಗೆ ನಡೆಯುವುದೆಂಬುದರ ದರ್ಶನವಾಗುತ್ತದೆ. ಐತಾಳ ಹಾಗೂ ಅವರ ಮಗ ಲಚ್ಚ ಹಾಗೂ ಅವನ ಮಗ ರಾಮ ಇವರಲ್ಲಿ ಪೀಳಿಗೆಯಲ್ಲಿಯ ಅಂತರವಿದೆ. 118"ಐತಾಳರೆಂದರೆ ಸನಾತನ ಪರಂಪರೆಯ ಮೌಲ್ಯಗಳನ್ನು ಕಾಯ್ದುಕೊಳ್ಳುವ ವೈದಿಕ ಬ್ರಾಹ್ಮಣರು. ಅವರು ಕೋಡಿ ಊರನ್ನು ಬಿಟ್ಟು ದೂರದೂರದವರೆಗೆ ಅಲೆದವರಲ್ಲ.ಅವರು ಸ್ಥಿರವಾಗಿ ನೆಲೆನಿಂತವರು."118

ಇಲ್ಲಿ ಐತಾಳರು ಪುರಾತನ ಸಂಸ್ಕೃತಿ, ಪರಂಪರೆಯನ್ನು ನಂಬಿ ತಮ್ಮ ಪೌರೋಹಿತ್ಯ ಮಾಡಿ ಜೀವಿಸುವ ವ್ಯಕ್ತಿಯಾಗಿದ್ದು, ತಮ್ಮ ಹಿರಿಯರಿಂದ ಬಂದ ಸಂಪ್ರದಾಯವನ್ನು ಉಳಿಸಬೇಕೆನ್ನುವ ಮನೋಭಾವ ಇರುವವರು. ಸಾಮಾಜಿಕ ಬದಲಾವಣೆ ಬಯಸುತ್ತಾರೆ ಆದರೂ ಹಿಂದಿನ ಕಾಲದ ಆಚಾರ ವಿಚಾರಗಳು ಬದಲಾಗಲು ಮನಸ್ಸು ಒಪ್ಪುವುದಿಲ್ಲ. ಈ ರೀತಿಯಲ್ಲಿ ವೈದಿಕ ಸಂಪ್ರದಾಯ ಉಳಿಯಬೇಕೆನ್ನುವ ಸಾಮಾಜಿಕ ಕಳಕಳಿ ಮೆರೆಯುವರು.

ಆದರೆ ಅದೇ ಐತಾಳರು ತಮ್ಮ ಮಗ ಲಚ್ಚನನ್ನು ಸರಕಾರಿ ಶಾಲೆಗೆ ಸೇರಿಸುವುದರ ಮೂಲಕ ತಮ್ಮ ವೈದಿಕ ವೃತ್ತಿಯಿಂದ ಯಾವುದೇ ಮಹತ್ತರ ಬದಲಾವಣೆಗಳು ಸಾಧ್ಯವಿಲ್ಲ. ಅದಕ್ಕೆ ಇಂಗ್ಲೀಷ್ ಶಿಕ್ಷಣ ಅನಿವಾರ್ಯ ಎಂಬುದು ಅವರ ನಂಬಿಕೆ.

ಶೀನ ಮಯ್ಯನ ಮಕ್ಕಳು ಬೆಂಗಳೂರಿನಲ್ಲಿ ಹೋಟೇಲಿನಲ್ಲಿ ಕೆಲಸ ಮಾಡಿ ಹಣ ಕಳುಹಿಸಿ ಅದರಿಂದ ಶೀನ ಮಯ್ಯ ಮೆರೆದಾಗ 119"ತನ್ನ ಮಗನಿಂದ ತನಗೆ ಯಾಕೆ ಕೀರ್ತಿ ಬರಬಾರದು? ಅವನ ಮಕ್ಕಳು ಕಾಫಿ ಲೋಟ ತೊಳೆದು ಅಲ್ಲಿ ಹಣ ಮಾಡಿದರೆ ತನ್ನ ಮಗನು ಇಂಗ್ಲೀಷನ್ನು ಕಲಿತು ವಕೀಲನಾಗಿ ಊರಲ್ಲೇ ಯಾಕೆ ಹಣ ದೋಚಬಾರದು."119 ಎಂಬ ಕನಸು ಕಾಣುವ ಐತಾಳರು ಸಮಾಜದಲ್ಲಿ ತನ್ನ ಸ್ಥಾನಮಾನವೂ ಹೆಚ್ಚಬೇಕು. ಅದಕ್ಕಾಗಿ ಮಗನಿಗೆ ಆಧುನಿಕ ಶಿಕ್ಷಣ ಕೊಡಿಸುವಲ್ಲಿ ಮನಸ್ಸು ಮಾಡುವುದು. ಅವರು ಸಮಾಜದ ಬದಲಾವಣೆ ಬಯಸುತ್ತಾರೆ ಎಂಬ ಸಂದೇಶ ಸಾರುತ್ತದೆ. 120"ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದೆಂದರೆ ಇಂಗ್ಲೀಷನ್ನು ಕಲಿಯುವುದರ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳನ್ನು ಒಪ್ಪಿಕೊಳ್ಳುವುದೆಂದೇ ಅರ್ಥ."120

'ಮರಳಿ ಮಣ್ಣಿಗೆ'ಯ ಜೀವನ ಹೆಣ್ಣಿನ ಜೀತದ ಜೀವನ, ಹೆಣ್ಣು ಶೂದ್ರಳ ಗೆಯ್ಮೆ, ಜೀವನ ಗೆಯ್ಮೆಯೇ ಹೆಣ್ಣಾದ ಶೂದ್ರ ಜೀವನ. ಪಾರೋತಿಯು ಒಂದೊಮ್ಮೆ ನೆನೆದು 121"ಮನುಷ್ಯರಾಗಿ ಹುಟ್ಟಿ ಫಲವೇನು? ಅನಿಸುವುದು ಈಗಲೂ ಅವಳಿಗೆ ಕಣ್ಮುಂದೆ ಕಾಣಿಸಿದ ಪ್ರಶ್ನೆ ಅದೇ. ಹಗಲೂ ರಾತ್ರಿಗಳು ದುಡಿಯುವುದಾಯಿತು, ಬಿತ್ತುವುದಾಯಿತು, ಬೆಳೆಯುವುದಾಯಿತು, ಯೋಚಿಸಿ ದಣಿಯುವುದಾಯಿತು. ಈ ಕೆಲಸ, ಈ ಎಣಿಕೆ ಇವುಗಳಲ್ಲಿ ರಾಮ, ರಾಮ ಅನ್ನುವುದಕ್ಕೆ ಸಮಯ ಸಾಲದು, ಸಂಸಾರವೆಂಬುದು ನರಕ ನಿಜ"121 ಎಂಬಲ್ಲಿ ಬಡವರಾಗಿ ಯಾವ ಜಾತಿಯಲ್ಲಿ ಹುಟ್ಟಿದರೂ ಸುಖವಿಲ್ಲ ಎಂಬ ಸಾಮಾಜಿಕ ಕೊರಗು ಇರುವುದು ತಿಳಿಯುತ್ತದೆ.

ಇನ್ನೊಂದೆಡೆಯಲ್ಲಿ ಪಾರೋತಿಯ ಬಂಜೆತನ ಒಂದು ರೀತಿಯಲ್ಲಿ ಬರಡು ಜೀವನದ ಸಂಕೇತವೇ ಸರಿ. ಇಂತಹ ಗಾಣದೆತ್ತಿನ ಗೆಯ್ಮೆ ಜೀವನ ಪಶು ಜೀವನವೇ ಎಂಬುದಕ್ಕೆ ಭೀಕರ ಪ್ರತಿಮೆಯಾಗಿ ಪಾರೋತಿ ಮನೆಯ ಪಶುಗಳೊಂದಿಗೆ ಮಾತನಾಡುತ್ತಾ ತಾನು ಪಶು ಪ್ರಾಣಿಯೇ ಆಗಿಬಿಡುತ್ತಾಳೆ. 122"ಇವಳಿಗೆ ಮಾತನಾಡಲು ಜನ ಬೇಕಿಲ್ಲ. ಕರುವು ಸಾಕು, ಗೋಡೆಯೂ ಸಾಕು."122 ಎಂದು ರಾಮೈತಾಳರು ಹೇಳುವ ಮಾತು.

ಶೂದ್ರ ವರ್ಗದಲ್ಲಿ ಹುಟ್ಟಿದ ಜನರ ಜೀವನವೂ ಕಷ್ಟಮಯವಾದುದೇ ಎಂದೂ ತಿಳಿಯಬಹುದು. ಒಂದು ಬಾರಿ ಪಾರೋತಿಯು ಹೊಸದಾಗಿ ಖಾರ ಬೆರೆಸಿದ ಮಾವಿನ ಮಿಡಿಗಳನ್ನು ಒಂದು ಬಾಳೆ ಎಲೆ ಕೀತಿನಲ್ಲಿ ಹಾಕಿ ತಂದಳು. ಒಂದು ಚೆಂಬು ನೀರನ್ನು ಅವನ ಎದುರಿಗೆ ಇರಿಸಿದಳು. ಕಾಳನೋ! ಭೂತ ಹಿಡಿದವನಂತೆ ನೀರಿನ ಬಿಂದಿಗೆಯನ್ನು ಒಂದೇ ಕ್ಷಣದಲ್ಲಿ ಗಟ ಗಟ ಕುಡಿದು ಬರಿದು ಮಾಡಿಬಿಟ್ಟನು. "ಅಮ್ಮಾ, ನೀರೇನು ಚೆನ್ನವೇ! ಇನ್ನೊಂದಿಷ್ಟು ನೀರು ತಂದು ಸುರಿಯಿರಿ. ಈ ಬೇಸಿಗೆಯಲ್ಲಿ ಊಟ ಇಲ್ಲದಿದ್ದರೂ ಕಳೆದೀತು – ಮನುಷ್ಯ ನೀರಿಲ್ಲದೆ ಬದುಕ" ಎಂದು ಮತ್ತಷ್ಟು ನೀರನ್ನು ತರಿಸಿಕೊಂಡು, ಯಾವತ್ತು ಉಪ್ಪಿನ ಕಾಯಿಗಳನ್ನು ಬರಿದು ಮಾಡಿ ಪಾರೋತಮ್ಮನ ಮುಖವನ್ನೇ ನೋಡುತ್ತ "ಅಮ್ಮ ಬಡವರ ಗಂಡಿಗೆ, ಒಂದು ಕರಟದ ಚಿಪ್ಪಿನಲ್ಲಿ ನಾಲ್ಕು ಹೋಳು ಉಪ್ಪಿನ ಮಿಡಿ ಕೊಡಿ, ನಿಮ್ಮ ಹೆಸರನ್ನು ಹೇಳಿ, ಗಡದ್ದು ಮಾಡಿ ಮಧ್ಯಾಹ್ನ ಊಟ ಮಾಡುತ್ತೇನೆ ಎಂದ. ಎಂಬಲ್ಲಿಯೂ ಶೂದ್ರ ವರ್ಗದವರ ಬಡತನ ಯಾವ ರೀತಿ ಇತ್ತೆಂದು ಕಾದಂಬರಿ ವರ್ಣಿಸುತ್ತದೆ.

ಕೋಟ ಬ್ರಾಹ್ಮಣರ ಸಾಮಾಜಿಕ ಜೀವನ ಬಲ್ಲವರಿಗಂತೂ ರಾಮೈತಾಳರು ಹೇಳುವ ಕೆಲವು ಮಾತುಗಳು. 123"ಥೂ ಆ ಅನ್ನ ಮಾರಿದ ದುಡ್ಡು ನನಗೆ ಬೇಡ. ಅದಕ್ಕಿಂತಲೂ ನನ್ನ ಐದು ಕೋರ್ಜಿ ಹುಟ್ಟುವಳಿಯಿಂದ ಅವನ ಜೀವನ ಕೂತಲ್ಲೇ ಸಾಗೀತು. ಮೇಲೆ ಪೌರೋಹಿತ್ಯ ಮಾಡಿದರೆ ಊಟಕ್ಕೆ ಯಾವ ಕೊರತೆಯೂ ಬರಲಾರದು."123 ಎಂಬಲ್ಲಿ ಬ್ರಾಹ್ಮಣ ವರ್ಗದವರು ದೂರದ ಊರಿಗೆ ಹೋಗಿ ಯಾರ್ಯಾರ ಕೈಕೆಳಗೆ ದುಡಿಯುವುದು ಸಮಂಜಸವಲ್ಲ ಎಂಬ ಧೋರಣೆ ಇರುವುದು ಅಂದಿನ ಸಮಾಜದಲ್ಲಿ ಬ್ರಾಹ್ಮಣರ ಸ್ಥಾನ–ಮಾನ ಹೇಗಿತ್ತು ಎಂಬುದನ್ನು ತಿಳಿಸುತ್ತದೆ.

ಇನ್ನೊಂದು ಕಡೆ 124"ಲಚ್ಚನು ಕೋಡಿಯನ್ನು ಬಿಟ್ಟು ಪಡುಮುನ್ನೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿಷಯವು ಸ್ವಗ್ರಾಮದಲ್ಲಿ ಸಾಕಷ್ಟು ಪರಿಹಾಸ್ಯಕ್ಕೆ ಗುರಿಯಾಗಿತ್ತು."124 ಎಂಬಲ್ಲಿ ಬ್ರಾಹ್ಮಣರು ದೂರದ ಊರಿಗೆ ಹೋಗಿ ಬೇರೆ ಜಾತಿಯವರೊಡನೆ ಬೆರೆತು ಜೀವಿಸುವುದೆಂದರೆ ಮಡಿ–ಮೈಲಿಗೆಯನ್ನು ತ್ಯಜಿಸಿದಂತೆಯೇ ಎಂದು ಅಂದಿನ ಸಮಾಜದ ಯೋಚನೆಯಾಗಿತ್ತು.

ದೈವವಾದ ಹಾಗೂ ಪ್ರಾರಬ್ಧದ ಅಂಕೆಗೆ ಒಳಪಟ್ಟ ಬಾಳನ್ನು ಒಪ್ಪಿಕೊಳ್ಳುವುದು ಭಾರತೀಯ ಜೀವನ ಪದ್ಧತಿಯ ವಿಶೇಷತೆ. ಇದು ಅಂದಿನ ಸಮಾಜದಲ್ಲೂ ಇತ್ತು. ನಾಗವೇಣಿಯ ಮೊದಲ ಮಗು ಮಡಿದಾಗ ಸತ್ಯಭಾಮೆಯು ಅವಳಿಗೆ 125"ನಾಗೂ, ನಮ್ಮ ಹಣೆಯ ಬರಹದಲ್ಲಿ ಬರೆದಿರದ್ದು ಕೇಳಿ ದೊರಕೀತೆ?"125 ಎನ್ನುತ್ತಾಳೆ.

ಹೀಗೆ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಬರುವ ಸಾಮಾಜಿಕ ಅವಸ್ಥೆ ಕಾರಂತರ ಜೀವನ ದರ್ಶನದ ಒಂದು ಅವಿಭಾಜ್ಯ ಅಂಗವಾಗಿದೆ. ಸಾಂಪ್ರಾದಾಯಿಕ ಮೌಲ್ಯಗಳನ್ನು ಕಳೆದುಕೊಂಡ ಸಮಾಜ ಸಾಂಕ್ರಾಮಿಕ ಅವಸ್ಥೆಯನ್ನು ದಾಟಿ, ಆಧುನಿಕತೆಯನ್ನು ಪಡೆಯುವ ಬಗೆಯನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ತುಂಬು ಎಚ್ಚರದಲ್ಲಿ ತನ್ನ ಜೀವನವನ್ನು ರೂಪಿಸಿಕೊಳ್ಳುವ ನಾಗವೇಣಿ, ಅವಳ 'ಮಡಿಯಾದ ಆತ್ಮ ಸಾಕ್ಷಿಯಲ್ಲಿ' ಬೆಳೆದು ಬಂದ ರಾಮ ಈ ಹೊಸ ಸಮಾಜದ ಅತ್ಯಂತ ಯಶಸ್ವಿ ಪ್ರತೀಕಗಳಾಗಿದ್ದಾರೆ.

ಈ ರೀತಿಯಾಗಿ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಬಡತನದ ಬಾಳ್ವೆಯೇ ಕತೆಯ ವಸ್ತುವಾಗಿ, ಬಡತನದ ವಿವಿಧ ಮಜಲುಗಳನ್ನು ಯಶಸ್ವಿಯಾಗಿ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಇದರೊಂದಿಗೆ, ಇಂಗ್ಲೀಷ್ ಶಿಕ್ಷಣ ಕ್ರಮದ ಪರಿಣಾಮ, ಸಂಪ್ರದಾಯ ಆಚಾರಗಳನ್ನು ಮರೆತರೆ ಆಗುವ ಅನಾಹುತಗಳು, ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರು ಅವಗಣನೆಗೆ ಒಳಗಾದ ಕಳಕಳಿ ಮುಂತಾಗಿ ಒಂದು ಹಂತದಲ್ಲಿ ನೈಜ ಸಾಮಾಜಿಕ ಕಳಕಳಿ ಈ ಕಾದಂಬರಿಯಲ್ಲಿ ವ್ಯಕ್ತವಾಗಿದೆ.

# ಅಡಿ ಟಿಪ್ಪಣಿ

98–98 ಕಾರಂತರ ಕಾದಂಬರಿಗಳು ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ ಪುಟ – ೨೫

99–99 ಮರಳಿ ಮಣ್ಣಿಗೆ ಮೊದಲ ಮಾತು ಪುಟ – ೫

100–100 ಸಮಕಾಲೀನ ಕಥೆ–ಕಾದಂಬರಿ ಹೊಸ ಪ್ರಯೋಗಗಳು ಪುಟ – ೧೪
ಡಾ। ಜಿ.ಎಸ್. ಅಮೂರ

101–101 ಕಾರಂತರ ಕಾದಂಬರಿಗಳು ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ ಪುಟ – ೨೭

102–102 ಮರಳಿ ಮಣ್ಣಿಗೆ ಪುಟ – ೯೭

103–103 ಮರಳಿ ಮಣ್ಣಿಗೆ ಪುಟ – ೨೭೧

104–104 ಮರಳಿ ಮಣ್ಣಿಗೆ ಪುಟ – ೪೯

105–105 ಮರಳಿ ಮಣ್ಣಿಗೆ ಪುಟ – ೧೪೫

106–106 ಮರಳಿ ಮಣ್ಣಿಗೆ. ಪುಟ – ೧೩೩

107–107 ಕಾರಂತರ ಕಾದಂಬರಿಗಳು ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ ಪುಟ – ೩೦

108–108 ಮರಳಿ ಮಣ್ಣಿಗೆ ಪುಟ – ೩೦೨

109–109 ಕಾರಂತರ ಕಾದಂಬರಿಗಳು ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ ಪುಟ – ೩೦

110–110 ಶಿವರಾಮ ಕಾರಂತ ಹತ್ತು ಅಧ್ಯಯನಗಳು ಪುಟ – ೪೦

111–111 ಕಾರಂತರ ಕಾದಂಬರಿಗಳು ಅಂತರಾಷ್ಟ್ರೀಯ ದೃಷ್ಟಿಯಲ್ಲಿ ಪುಟ – ೨೬

112–112 ಶಿವರಾಮ ಕಾರಂತ ಬದುಕು–ಮಾಲಿನಿ ಮಲ್ಯ ಪುಟ – ೧೭

113–113 ಮರಳಿ ಮಣ್ಣಿಗೆ. ಪುಟ – ೪

114–114 ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ ಪುಟ – ೩೭

115–115 ಶಿವರಾಮ ಕಾರಂತ ಬದುಕು–ಮಾಲಿನಿ ಮಲ್ಯ ಪುಟ – ೨೧

116–116 ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ ಪುಟ – ೨೮

117–117 ಮರಳಿ ಮಣ್ಣಿಗೆ. ಪುಟ – ೧೩೩

118–118 ಕಾರಂತರ ಕಾದಂಬರಿಗಳು ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ ಪುಟ – ೨೯

119–119 ಮರಳಿ ಮಣ್ಣಿಗೆ. ಪುಟ – ೧೩೭

120–120 ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ ಪುಟ – ೩೪

121–121 ಮರಳಿ ಮಣ್ಣಿಗೆ. ಪುಟ – ೧೫,೧೬

122–122 ಮರಳಿ ಮಣ್ಣಿಗೆ. ಪುಟ – ೧೭

123–123 ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ ಪುಟ – ೩೫

124–124 ಮರಳಿ ಮಣ್ಣಿಗೆ. ಪುಟ – ೧೩೭

125–125 ಕಾರಂತರ ಕಾದಂಬರಿಗಳು ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ ಪುಟ – ೩೪

# ಅಧ್ಯಾಯ ೭.

## ಸಮಾರೋಪ

೭.೧ : ಕಾದಂಬರಿಗಳ ವೈಶಿಷ್ಟ್ಯ

೭.೨ : ಜೀವನದೃಷ್ಟಿ ಮತ್ತು ಮೌಲ್ಯ ನಿರೂಪಣೆ

# ಸಮಾರೋಪ

## ೭.೧: ಕಾದಂಬರಿಗಳ ವೈಶಿಷ್ಟ್ಯ.

[126]"ಅಂದಿನ ಕಾದಂಬರಿಯ ಕಾಲವೇ ಕಾಲ. ಲೋಕ ಪ್ರಿಯತೆಯೇ ಲೋಕ ಪ್ರಿಯತೆ! ಜನ 'ಸದ್ಬೋಧ ಚಂದ್ರಿಕೆ'ಯ ಆಗಮನಕ್ಕಾಗಿ ಕಾಯುತ್ತಿದ್ದರು"[126] 'ಸದ್ಬೋಧ ಚಂದ್ರಿಕೆ' ಗಳಗನಾಥರು ಅಗಡಿಯ ಆನಂದವನದಿಂದ ಹೊರಡಿಸುತ್ತಿದ್ದ ಪತ್ರಿಕೆ, 'ಸದ್ಬೋಧ ಚಂದ್ರಿಕೆ'ಯಲ್ಲಿ ಗಳಗನಾಥರ ಕಾದಂಬರಿಗಳು ಧಾರವಾಹಿಯಾಗಿ ಬರುತ್ತಿದ್ದವು. ಪತ್ರಿಕೆಗೆ ಏಳು ಸಾವಿರ ಚಂದಾದಾರರು, ಗಳಗನಾಥರ ಕಾದಂಬರಿಗಳು ಯುವಕರಿಗೂ, ಮುದುಕರಿಗೂ, ಮಕ್ಕಳಿಗೂ, ಹೆಣ್ಣುಮಕ್ಕಳಿಗೂ, ಸ್ವಾರಸ್ಯಕರವೆನಿಸುತ್ತಿದ್ದವು.

[127]"ರಜಪೂತರ ಕತೆಯೇ ಇರಲಿ, ಮರಾಠರ ಕತೆಯೇ ಇರಲಿ, ಕರ್ನಾಟಕದ ಇತಿಹಾಸವೇ ಇರಲಿ, ಗಳಗನಾಥರ ಗಲಗಿನ ಒಂದು ಕೈವಾಡವೇ ಕೈವಾಡ, ಒಂದು ಮೋಹಕಕತೆಯೇ ಮೋಹಕಕತೆ. ಸಾಮಾನ್ಯ ವಾಚಕರನ್ನು ಲೋಹ ಚುಂಬಕದಂತೆ ಹಿಡಿದು ಬಿಡುತ್ತಿತ್ತು. ಇವರ ಕಾದಂಬರಿಗಳು ಎಲ್ಲ ಪ್ರಕಾರದ ವಾಚಕರಿಗೂ ಗ್ರಾಹ್ಯವೆನಿಸುತ್ತಿದ್ದವು. ಒಮ್ಮೆ ಕಾದಂಬರಿಯನ್ನು ಓದುವುದಕ್ಕೆಂದು ಎತ್ತಿಕೊಂಡರೆ ಕೆಳಗಿಲಿಸಲಿಕ್ಕೆ ಮನಸ್ಸೇ ಬಾರದು."[127]

ಈ ರೀತಿಯಲ್ಲಿ ಕಾದಂಬರಿಗಳು ಕಾದಂಬರಿಗಳು ಹಿಂದಿನ ಕಾಲದಲ್ಲಿಯೇ ಅತ್ಯಂತ ಜನಪ್ರಿಯವಾಗಿರುವುದನ್ನು ಗಮನಿಸಬಹುದು. ಕಾದಂಬರಿಗಳಲ್ಲಿ ಅಂದಿನ ಸಾಮಾಜಿಕ, ಜೀವನ, ರಾಜಕೀಯ ವಿಷಯಗಳು, ಧಾರ್ಮಿಕ ವಿಚಾರಗಳನ್ನು ಈ ಕಾದಂಬರಿಗಳಲ್ಲಿ ಪ್ರತಿಬಿಂಬಿಸಲಾಗುತ್ತಿತ್ತು.

ಗಳಗನಾಥರಿಗಿಂತ ಪೂರ್ವದಲ್ಲಿಯೇ ಕನ್ನಡ ಕಾದಂಬರಿ ತಲೆ ಎತ್ತಿತ್ತು ಎಂಬುದನ್ನು ಮರೆಯುವಂತಿಲ್ಲ. [128]"ಚರಿತ್ರೆಯ ದೃಷ್ಟಿಯಿಂದ ಕನ್ನಡ ಕಾದಂಬರಿ ಯುಗದ ಆರಂಭದ ಕೃತಿಗಳೆಂದರೆ ಯಾದವ ಕಟ್ಟಿಗನ 'ಕಲಾವತೀ ಪರಿಣಯ' 'ಕೆಂಪು ನಾರಾಯಣ' 'ಮುದ್ರಾ ಮಂಜೂಷ' ಎಂಬ ಸ್ವತಂತ್ರ ಕೃತಿಗಳನ್ನು 'ರಾಬಿನ್‌ಸನ್ ಕ್ರೂಸೊ' ತುರಮರಿಯವರ 'ಬಾಣ ಕಾದಂಬರಿ' ಮತ್ತು ಬಿ. ವೆಂಕಟಾಚಾರ್ಯರ 'ದುರ್ಗೇಶ ನಂದಿನಿ' ಎಂಬ ಅನುವಾದಗಳನ್ನು ಗಣಿಸುತ್ತೇವೆ. ಅನಂತರ ವೆಂಕಟಾಚಾರ್ಯರ ಇತರ ಕಾದಂಬರಿಗಳು ತೆಲುಗಿನ ವೀರೇಶ ಲಿಂಗಂಪಂತಲು ಅವರ ಅನುವಾದ ಕೃತಿಗಳು, ದ.ಕ. ಜಿಲ್ಲೆಯಿಂದ ಸ್ವತಂತ್ರ ಸಾಮಾಜಿಕ ಕೃತಿಗಳು ಹೊರಬಂದವು."[128] ಎಂದು ಶ್ರೀನಿವಾಸ ಹಾವನೂರ ಅವರು ಗಳಗನಾಥ ಮಾಸ್ತರರು ಎಂಬ ಗ್ರಂಥದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಹೀಗೆ ಆರಂಭವಾದ ಕಾದಂಬರಿಗಳಲ್ಲಿ 'ಇಂದಿರಾಬಾಯಿ' ಕಾದಂಬರಿ ಸಾಮಾಜಿಕ ಸ್ಥಿತಿಗತಿಯನ್ನು ವಿವರಿಸುವುದರೊಂದಿಗೆ ಅಂದಿನ ಕಾಲದ ಸಮಾಜ ಚಿತ್ರಣವನ್ನು ನೀಡಿತು. ಮಾಡಿದ್ದುಣ್ಣೋ ಮಹರಾಯ ಎಂಬ ಎಮ್.ಎಸ್. ಪುಟ್ಟಣ್ಣನವರ ಕಾದಂಬರಿ ಅಂದಿನ ಸಾಮಾಜಿಕ ಪ್ರಜ್ಞೆಯನ್ನು ತಿಳಿಸುವುದರಲ್ಲಿ ಯಶಸ್ವಿಯಾಯಿತು.

ಕನ್ನಡ ಕಾದಂಬರಿಗೆ ಕಾದಂಬರಿ ಎಂಬ ಹೆಸರು ಬರುವುದಕ್ಕೆ ಬಾಣನ ಕಾದಂಬರಿಯೇ ಕಾರಣ. ತುರಮುರಿಯುವರ ಕನ್ನಡ ಕಾದಂಬರಿಯ ಗದ್ಯ ಮುಂದಿನ ಕಾದಂಬರಿಗಳಿಗೆ ಮಾರ್ಗದರ್ಶಿಯಾಯಿತು.

ಕನ್ನಡದಲ್ಲಿ ಇಂದು ಕಾದಂಬರಿ ಸಮೃದ್ಧವಾಗಿ ಬೆಳೆಯುತ್ತಿರುವ ಸಾಹಿತ್ಯ ಪ್ರಕಾರ. ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ನಮ್ಮಲ್ಲಿ ತಲೆದೋರಿದ ಈ ವಿಭಾಗ ಬಹುಬೇಗನೆ ಜನಪ್ರಿಯವಾಗಿ ವಿಶಿಷ್ಟ ಸ್ಥಾನವನ್ನು ಸಾಹಿತ್ಯ ಪ್ರಪಂಚದಲ್ಲಿ ನಿರ್ಮಿಸಿಕೊಂಡಿತು.

[129]"ಮನಸ್ಸನ್ನು ಸೆರೆಹಿಡಿಯುವ ಆಕರ್ಷಕ ಕಥಾ ಶರೀರದ ಜೊತೆಗೆ ಈ ಮಾಧ್ಯಮಕ್ಕಿರುವ ಶಕ್ತಿ ಸಾಧ್ಯತೆಗಳೂ ಇದಕ್ಕೆ ಕಾರಣ. ದಿನದಿನಕ್ಕೆ ಜಟಿಲವಾಗುತ್ತಿರುವ, ಸಂಕೀರ್ಣಗೊಳ್ಳುತ್ತಿರುವ, ಹೊಸ ಹೊಸ ಸಮಸ್ಯೆಗಳನ್ನೊಡ್ಡುತ್ತಿರುವ ಇಂದಿನ ವೈಜ್ಞಾನಿಕ ಮತ್ತು ತಾಂತ್ರಿಕ ಜಗತ್ತಿನ ಬಹುಮುಖ ಜೀವನದ ಎಲ್ಲ ಪದರುಗಳನ್ನು ಒಳಹೊಕ್ಕು ನೋಡಬಲ್ಲ, ನುಡಿಯಬಲ್ಲ, ಶಕ್ತಿಶಾಲಿಯಾದ ಸಾಹಿತ್ಯ ಮಾಧ್ಯಮವಾಗಿ ಇದು ಬೆಳೆಯುತ್ತಿದೆ."[129]

ಬದಲಾಗುತ್ತಿರುವ ಸಾಮಾಜಿಕ ಸಮಸ್ಯೆಗಳನ್ನು ತೆರೆದ ಕಣ್ಣಿಂದ ನೋಡಬಲ್ಲವರಾಗಿದ್ದ ಕಾರಂತರು 'ವಿಚಿತ್ರ ಕೂಟ' 'ಭೂತ' 'ಕನ್ಯಾ ಬಲಿ' 'ಸರಸಮ್ಮನ ಸಮಾಧಿ'ಗಳನ್ನು ದಾಟಿಕೊಂಡು 'ಚೋಮನ ದುಡಿ' 'ಮುಗಿದ ಯುದ್ಧ' 'ಔದಾರ್ಯದ ಉರುಳಲ್ಲಿ' 'ಮರಳಿ ಮಣ್ಣಿಗೆ'ಗಳಂತಹ ಕೃತಿಗಳನ್ನು ಕನ್ನಡಕ್ಕೆ ಕೊಡುತ್ತಿದ್ದರು. ಆ ಪ್ರಾರಂಭದ ದೆಸೆಯಿಂದ ಇಂದಿನವರೆಗೂ ಒಂದಾದ ಮೇಲೊಂದರಂತೆ ಕನ್ನಡಕ್ಕೆ ಕಾದಂಬರಿಗಳನ್ನು ಕೊಡುತ್ತಿರುವ ಸತ್ವಶಾಲಿಯಾದ ಲೇಖಕರಾಗಿ ಇವರು ಉಳಿದು ಬಂದಿದ್ದರು.

[130]"ನಮ್ಮ ಇಂದಿನ ಕಾದಂಬರಿಗಳನ್ನೆಲ್ಲಾ ಒಟ್ಟಾಗಿ ನೋಡಿದಾಗ ಅನ್ನಿಸುವುದೆಂದರೆ ಅವುಗಳಲ್ಲಿ ವೈವಿಧ್ಯ ಕಡಿಮೆ ಎಂದು ಸ್ವಲ್ಪ ಹೆಚ್ಚು ಕಡಿಮೆ ಮಧ್ಯಮ ವರ್ಗದ ಜೀವನವನ್ನು ಮಧ್ಯಮಾರ್ಗದಲ್ಲಿ ಚಿತ್ರಿಸುವ ಮಧ್ಯಮ ದರ್ಜೆಯ ಕಾದಂಬರಿಗಳೇ ಹೆಚ್ಚು."[130]

ಅದು ಹಳ್ಳಿಯ ಜೀವನವಾಗಲಿ, ನಗರ ನಾಗರಿಕತೆಯ ಚಿತ್ರಣವಾಗಲಿ, ಎಲ್ಲಿಯೂ ತೀವ್ರವಾದ ಸಂವೇದನೆಯ ಮಿಡಿತ ಅಷ್ಟಾಗಿ ಕಾಣುವುದಿಲ್ಲ. ವಿಶೇಷವಾದ ಏರುಪೇರುಗಳಿಂದ ಕೂಡಿದ ವಿಪರೀತ ಜೀವನದ ಹೋರಾಟವೂ ನಮ್ಮಲ್ಲಿ ಕಡಿಮೆ. ಬಹುಶಃ ಕರ್ನಾಟಕದ ವಾತಾವರಣವೇ ಇದಕ್ಕೆ ಕಾರಣ ಎನ್ನಬಹುದು.

ಹೀಗೆಂದ ಮಾತ್ರಕ್ಕೆ ವೈವಿಧ್ಯವಾಗಲಿ, ಸಮಸ್ಯೆಗಳಾಗಲಿ, ಏರುಪೇರುಗಳಾಗಲಿ ಇಲ್ಲವೆಂದಲ್ಲ. ಹಾಗೆ ನೋಡಿದರೆ ಇಡೀ ಭಾರತವೇ ಇಲ್ಲಿದೆ. ಅದರ ಸಂಕ್ಷಿಪ್ತ ರೂಪದಲ್ಲಿದೆ.

ಜೀವನದ ಎಲ್ಲಾ ಮುಖಗಳನ್ನು ಕಂಡು ಚಿತ್ರಿಸುವುದು ಒಬ್ಬ ವ್ಯಕ್ತಿಗಾಗಲಿ, ಒಂದು ಕೃತಿಗಾಗಲಿ ಸಾಧ್ಯವಿಲ್ಲ. ನೂರಾರು ಕಣ್ಣುಗಳಿಂದ ಕೈಗಳಿಂದ ಆಗಬೇಕಾದ ಕೆಲಸ ಅದು. ಕನ್ನಡ ಕಾದಂಬರಿಯ ವೈವಿಧ್ಯ, ಆಳ ಅಗಲ, ಎತ್ತರ ಬಿತ್ತರಗಳು ಬೆಳೆಯಬೇಕಾದರೆ ಕನ್ನಡ ಲೇಖಕರು ಬೆಳೆಯಬೇಕು. ಜೀವನದ ವಿವಿಧ ರಂಗಗಳಲ್ಲಿ ಬೆಳೆದವರು ಕಾದುಂಬರಿಗೆ ಇಳಿಯಬೇಕು. ಆಗ ವಿಶಿಷ್ಟ ರೀತಿಯ ಕಾದಂಬರಿಗಳು ರೂಪುಗೊಳ್ಳಲು ಸಾಧ್ಯ.

## ೭.೨: ಜೀವನದೃಷ್ಟಿ ಮತ್ತು ಮೌಲ್ಯ ನಿರೂಪಣೆ

[131]"ಕಾದಂಬರಿಗಳನ್ನು ಓದುವಾಗ ಕಾದಂಬರಿಕಾರರು ಏನು ಹೇಳುತ್ತಿದ್ದಾರೆ ಎಂಬುದಕ್ಕಾಗಿ ಓದಬೇಕೇ ಹೊರತು ಹೇಗೆ ಹೇಳುತ್ತಿದ್ದಾರೆ ಎಂಬುದಕ್ಕಲ್ಲ, ಮತ್ತು ಅವರು ಹೇಳುವುದು ಯಾವಾಗಲೂ ಜೀವನವನ್ನು ಕುರಿತು, ಮನುಷ್ಯರನ್ನು ಕುರಿತು, ಮನುಷ್ಯ ಮೌಲ್ಯಗಳನ್ನು ಕುರಿತು."[131]

ಕಾದಂಬರಿಗಳಲ್ಲಿ ಕಲೆಯಿಂದ ರಾಜಕೀಯದವರೆಗೆ ಸಾಮಾಜಿಕ ಸಮಸ್ಯೆಗಳಿಂದ ಆರ್ಥಿಕ ಪ್ರಶ್ನೆಗಳವರೆಗೆ ಅನೇಕಾನೇಕ ವಸ್ತು ವೈವಿಧ್ಯವನ್ನು ಕಾದಂಬರಿಗಳ ಉಪಕರಣವಾಗಿ ಬಳಸಿಕೊಳ್ಳುತ್ತಾರೆ. ಕಾರಂತರ ಕಾದಂಬರಿಗಳಲ್ಲಿ ಎಲ್ಲವುಗಳಲ್ಲಿಯೂ ಅವರ ಚಿಂತೆ ಬಾಳಿನ ಮೌಲ್ಯಗಳನ್ನು ಕುರಿತದ್ದೇ, "ನನಗೆ ಬಾಳು ಮುಖ್ಯ" ಎಂದವರು ಹೇಳುತ್ತಾರೆ.

[132]"ಪ್ರಾಚೀನ ಸಾಹಿತ್ಯದಲ್ಲಿ ಮಹಾಕಾವ್ಯ ಜೀವನದ ವ್ಯಕ್ತರೂಪವಾದರೆ ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಮಹಾಕಾವ್ಯದ ಭಾಗಶಃ ಅಸ್ತಿತ್ವದೊಡನೆಯೂ ಜೀವನದ ಸಮಗ್ರ ಚಿತ್ರಣಕ್ಕೆ ಮುಟಕೊಟ್ಟವು ಕಾದಂಬರಿಗಳೇ ಸರಿ."[132] 'ಮರಳಿ ಮಣ್ಣಿಗೆ' ಕಾದಂಬರಿ ಸಾಮರಸ್ಯ ಮತ್ತು ಸಂಘರ್ಷದ ಹಿನ್ನೆಲೆಯಲ್ಲೇ ಬೆಳವಣಿಗೆ ಹೊಂದುತ್ತಾ ಹೋಗುತ್ತದೆ. ಮನುಷ್ಯ ಸಂಬಂಧಗಳ ಸಂಕೀರ್ಣತೆಯನ್ನು ಹೊರಹಾಕುತ್ತಾ ಮನುಷ್ಯ–ನಿಸರ್ಗದ ಸಂಘರ್ಷ, ಆ ಹೋರಾಟದಲ್ಲಿ ಸೋಲೊಪ್ಪಿಕೊಂಡು ಮತ್ತೆ ನಿಸರ್ಗಕ್ಕೆ (ಮಣ್ಣಿಗೆ) ಮರಳಬೇಕಾದ ಅನಿವಾರ್ಯತೆಗಳಿಗೆ ಒತ್ತುಕೊಡುವ ಕಾದಂಬರಿ ಭಿನ್ನ ಭಿನ್ನ ವಿಚಾರ ಮತ್ತು ಮೌಲ್ಯಗಳನ್ನು ಪ್ರತಿಪಾದಿಸುತ್ತದೆ.

[133]"ಮೌಲ್ಯ' ಎನ್ನುವ ಪದ ಪಲ್ಲಟ ಪ್ರಕ್ರಿಯೆಗಳನ್ನು ಒಳಗೊಂಡಿದ್ದು ಪದಶಃ ಬೆಲೆ, ಕಿಮ್ಮತ್ತು, ಗೌರವ, ಮನುಷ್ಯ ತನ್ನ ಜೀವನದಲ್ಲಿ ಬೆಲೆ ಕೊಡುವ ಭಾವನೆ ಇತ್ಯಾದಿ ಅರ್ಥಸಾಧ್ಯತೆವುಳ್ಳದ್ದಾಗಿದೆ."[133] ಚಾರಿತ್ರಿಕ ಬದಲಾವಣೆಯೊಂದಿಗೆ ಪರಿವರ್ತನ ಸ್ವರೂಪವನ್ನು ಪಡೆದಿರುವ ಇದು ಇಂದಿನ ದಿನಗಳಲ್ಲಿ ಮೌಲ್ಯವಾಗಿ ಪರಿವರ್ತಿತವಾದದ್ದು ನಾಳೆ ಜೀವಿ ವಿರೋಧಿ ನೀತಿಯಾಗಿ ಕಾಣಬಹುದು.

[134]"ಕಾರಂತರ ಅತ್ಯುತ್ತಮ ಕೃತಿಗಳು ಸಾಮಾನ್ಯ ಜನರ ಸಾಮಾನ್ಯ ಬದುಕನ್ನು ಕುರಿತವುಗಳು. ಸಾಮಾನ್ಯ ಜನರ ಸಾಮಾನ್ಯ ಬದುಕಿನ ಹೋರಾಟಗಳ ಅಸಾಮಾನ್ಯತನವನ್ನು ಅವರು ಎತ್ತಿ ತೋರಿಸುತ್ತಾರೆ. ಈ ಹೋರಾಟದಲ್ಲಿ ಅವರಿಗೆ ಬಲಕೊಡುವಂಥಾದ್ದೇನು? ಎಂಬುದನ್ನು ತೋರಿಸುತ್ತಾರೆ."[134]

"ಮರಳಿ ಮಣ್ಣಿಗೆ"ಯಿಂದ ಅವರ ನಿಲುವು ಸ್ಪಷ್ಟವಾಗಿ ಗೋಚರಕ್ಕೆ ಬರುತ್ತದೆ. ಐತಾಳರ ಕುಟುಂಬ ಮೊದಲನೇ ತಲೆಮಾರಿನ ಜೀವನದ ಹೋರಾಟ ಎಷ್ಟು ಕಷ್ಟವಾಗಿತ್ತು. ಮಳೆಯೊಡನೆ, ಗಾಳಿಯೊಡನೆ, ಬರಡು ನೆಲದೊಡನೆ, ಸಮುದ್ರದೊಡನೆ ಆ ಜನ ಬ್ರಾಹ್ಮಣರು, ಶೂದ್ರರು ಎಲ್ಲರೂ ಹೂಡುವ ಹೋರಾಟ ಹೆಚ್ಚು ಕಡಿಮೆ ಅರ್ಥಹೀನವೆಂದೇ ಮೇಲ್ನೋಟಕ್ಕೆ ತೋರುತ್ತದೆ. ಆದರೆ ಅದು ಅಸಾರ್ಥಕವೆಂದು ಅನಿಸುವುದೇ ಇಲ್ಲ. ಈ ಜನರಿಗೆ ಬೌದ್ಧಿಕ ಜೀವನವೆಂಬುದೇ ಇರಲಿಲ್ಲ ನಿಜ, ಅವರ ಹೋರಾಟ ಸಾಮಾನ್ಯವಾಗಿ ಒಪ್ಪೊತ್ತಿನ ಬಹಳವಾದರೆ ಇಪ್ಪೊತ್ತಿನ ಹೊಟ್ಟೆಪಾಡಿಗಾಗಿಯೇ ಇತ್ತಷ್ಟೆ. [135]"ಈ ನೀರಸ ಜೀವನವನ್ನು ಸಹ್ಯವಾಗಿ ಮಾಡುತ್ತಿದ್ದ ಶಕ್ತಿಯೊಂದಿತ್ತು. ಅದೆಂದರೆ ಬದುಕಿನಲ್ಲಿದ್ದ ಶ್ರದ್ಧೆ."[135]

[136]"ಸರ್ವಶ್ರೇಷ್ಠ ಕೃತಿಯೊಂದು ಸಾರ್ವಕಾಲಿಕ ಸಮಸ್ಯಗಳಿಗೂ ಸೂಕ್ತ ಉತ್ತರವನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿರುತ್ತದೆ. ಸಾರ್ವಕಾಲಿಕ ಮಹತ್ವವೇ ಆ ಕೃತಿಯ ಶ್ರೇಷ್ಠತೆಯ ಮಾಪನವೂ ಸಹ ಆಗುತ್ತದೆ."[136]

ನಿರುದ್ಯೋಗದ ಸಮಸ್ಯೆ ಯುವ ಜನಾಂಗವನ್ನು ತತ್ತರಿಸುವಂತೆ ಮಾಡಿ ಬರೀ ಶೂನ್ಯತೆಯ ಅಲೆದಾಟವನ್ನೇ ಕರುಣಿಸುತ್ತದೆ. ಅಯೋಚಿತವಾಗಿ ಲಕ್ಷಾಂತರ ಲಜ್ಜರ ಸೃಷ್ಟಿ ನಡೆದೇ ಇದೆ. ಬಹುರಾಷ್ಟ್ರೀಯ ಕಂಪನಿಗಳು ಉಂಟು ಮಾಡಿರುವ ಆರ್ಥಿಕ ದಿವಾಳಿತನದೊಂದಿಗೆ ಸಾಂಸ್ಕೃತಿಕ ದಿವಾಳಿತನವೂ ಸಹ ಪ್ರಾಜ್ಞರನ್ನು ಎದೆಗುಂದಿಸಿ ಬಿಟ್ಟಿದೆ. ಇಂತಹ ಸಂಕ್ರಮಣಾವಸ್ಥೆಗೆ 'ಮರಳಿ ಮಣ್ಣಿಗೆ' ಸೂಕ್ತ ಉತ್ತರವನ್ನು ಕೊಡಲು ಸಮರ್ಥವಾಗಿದೆ.

ಅಪ್ರಾಮಾಣಿಕವಾದರೂ ೨ನೇ ತಲೆಮಾರಿನ ಲಚ್ಚನಿಗೆ ಇದ್ದ ಉದ್ಯೋಗದ ಸೌಕರ್ಯ ೩ನೇ ತಲೆಮಾರಿನ ರಾಮನಿಗೆ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ಇಲ್ಲ. ತನ್ನ ಮನಸ್ಸಿಗೆ ವಿರುದ್ಧವಾಗಿಯೇ ಬೆಂಗಳೂರಿನಲ್ಲಿ ಹೋಟೇಲಿನಲ್ಲಿ ದುಡಿಯುವ ದಾರುಣ ಸ್ಥಿತಿ ಆತನಿಗೆ ಎದುರಾಗಿ ಬಿಡುತ್ತದೆ. ಮುಂದೆ ಮುಂಬೈನಲ್ಲಿ ಎದುರಾಗುವ ಸಮಸ್ಯೆ ಇನ್ನು ಜಟಿಲವಾದುದು. ರಾಮರಾಯನೊಟ್ಟಿಗೆ ತಲೆಮಾರಿನ ಪ್ರತಿನಿಧಿಗಳಾಗಿ Friends roomನ ಯುವಕರ ನಿರುದ್ಯೋಗಿ ದಂಡೇ ಇದೆ.

ಹೊಸ ಪೀಳಿಗೆ ಚಾಕರಿ ಎಂಬ ವರೀಚಿಕೆಯ ಬೆನ್ನು ಹತ್ತಿ ಸುತ್ತುತ್ತಾ ಬೇಸಾಯವನ್ನು ಉದ್ಯೋಗ ಎಂದೇ ಪರಿಗಣಿಸದಿದ್ದ ವೇಳೆಯಲ್ಲಿ ರಾಮರಾಯ ತಮ್ಮ ಮೂಲ ಗೇಣಿಯ ಮಣ್ಣಿಗೆ ಮರಳುತ್ತಾನೆ. ಆತನಿಗೆ ನಿರಾಸೆಯಾದರೂ [137]"ಸುಮ್ಮನೇ ಮುಂಬೈಯ ಕನಸುಗಳಿಗಾಗಿ ನಮ್ಮಂತಹವರು ಹಲುಬಿದರೇನು ಬಂತು"[137] ಎಂದು ಎಚ್ಚರಿಸುವ ವಾಸ್ತವವಾದಿ ತಾಯಿಯ ಬೆಂಬಲವೂ ಬೆನ್ನಿಗಿದೆ.

ತನ್ನ ಪದವಿಗಳ ಅಹಂ ಕಳಚಿ ಊರಿನಲ್ಲಿಯೇ ಶಾಲಾ ಮಾಸ್ತರನಾಗಿ ಶ್ರಮವರಿಯದೇ ಹಗಲು ರಾತ್ರಿ ಹೊಲದಲ್ಲಿ ದುಡಿದು ಮತ್ತೆ ತನ್ನ ಪಾಲಿನ ಮಣ್ಣನ್ನು ಶಾಶ್ವತವಾಗಿ ಪಡೆದುಕೊಳ್ಳುವ ಕ್ರಿಯೆ ಇಂದಿನ ಪರಿಸ್ಥಿತಿಗೆ ಮಾದರಿಯಾದುದು. ಇದು ಕಾದಂಬರಿಗೆ ಆರೋಪಿತ ಮೌಲ್ಯವಾಗಿರದೆ, ಅದು ತನ್ನೊಳಗೆ ಹುದುಗಿಸಿಕೊಂಡಿರುವ ಸಹಜ ಮೌಲ್ಯವೇ ಆಗಿದೆ.

[138]"ಹೀಗೆ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿಯೂ ಎಂತಹ ಕಷ್ಟಗಳು ಬಂದರೂ ಕಳೆದುಕೊಳ್ಳುವ ಸಹನೆ, ಶಾಂತಿ ನಮಗೆ ಕಾದಂಬರಿ ಕಲಿಸುವ ಇತರ ಮೌಲ್ಯಗಳು, ಆ ಪ್ರಯತ್ನ ಪೂರ್ವಕವಾಗಿಯೇ ನಮ್ಮೊಳಗೆ ಮೌಲ್ಯಾತ್ಮಕ ಬದಲಾವಣೆಗಳನ್ನು ತರುವ ಇಂತಹ ಕಲಾಕೃತಿಗಳು, ಕಾಲ ದೇಶಾತೀತವಾಗಿ ಮನ್ನಣೆಯನ್ನು ಗಳಿಸುತ್ತವೆ."[138]

# ಅಡಿ ಟಿಪ್ಪಣಿ

126–126 ಕಾದಂಬರಿ ದರ್ಶನ. ಸಂ. ಶಂಕ ಪಾಟೀಲ ಪುಟ – ೩
127–127 ಕಾದಂಬರಿ. ಅಂದು . ಎಸ್ಕೆ ಪುಟ – ೩
128–128 ಕಾದಂಬರಿ. ಅಂದು . ಎಸ್ಕೆ ಪುಟ – ೯
129–129 ಕನ್ನಡ ಕಾದಂಬರಿ. ಇಂದು. ಡಾ। ಎಚ್. ತಿಪ್ಪೇರುದ್ರಸ್ವಾಮಿ ಪುಟ –
130–130 ಕನ್ನಡ ಕಾದಂಬರಿ. ಇಂದು. ಡಾ। ಎಚ್. ತಿಪ್ಪೇರುದ್ರಸ್ವಾಮಿ ಪುಟ –
131–131 ಕಾರಂತರ ಕಾದಂಬರಿಗಳನ್ನು ಕುರಿತು. ಸಂ. ರಾಮಚಂದ್ರದೇವ ಪುಟ –
132–132 ಕಾರಂತ ಸ್ಮರಣೆ. ಶ್ರೀಧರ್ ಎಚ್.ಜಿ. ಪುಟ – ೪೫
133–133 ಕಾರಂತ ಸ್ಮರಣೆ. ಶ್ರೀಧರ್ ಎಚ್.ಜಿ. ಪುಟ – ೪೫
134–134 ಕಾರಂತರ ಕಾದಂಬರಿಗಳನ್ನು ಕುರಿತು. ಸಂ. ರಾಮಚಂದ್ರದೇವ ಪುಟ – ೯
135–135 ಕಾರಂತರ ಕಾದಂಬರಿಗಳನ್ನು ಕುರಿತು. ಸಂ. ರಾಮಚಂದ್ರದೇವ ಪುಟ – ೯
136–136 ಕಾರಂತ ಸ್ಮರಣೆ. ಶ್ರೀಧರ್ ಎಚ್.ಜಿ. ಪುಟ – ೫೪
137–137 ಮರಳಿ ಮಣ್ಣಿಗೆಯಲ್ಲಿ ಜೀವನ ಮೌಲ್ಯಗಳು ಪುಟ – ೫೫
138–138 ಕಾರಂತ ಸ್ಮರಣೆ. ಶ್ರೀಧರ್ ಎಚ್.ಜಿ. ಪುಟ – ೫೫

# ಅನುಬಂಧಗಳು

ಡಾ। ಕೆ. ಶಿವರಾಮ ಕಾರಂತರ

೧: ಮುಖ್ಯ ವರ್ಷಗಳು

೨: ಗೌರವ ಪ್ರಶಸ್ತಿಗಳು

೩: ಕೃತಿ ಸೂಚಿ

## ೧: ಮುಖ್ಯ ವರ್ಷಗಳು

| | | |
|---|---|---|
| ೧೯೦೨ ಅಕ್ಟೋಬರ್ ೧೦ | : | ಕೋಟಾದಲ್ಲಿ ಡಾ। ಕೆ. ಶಿವರಾಮ ಕಾರಂತರ ಜನನ |
| ೧೯೨೧ | : | ಅಸಹಕಾರ ಚಳವಳಿಯಲ್ಲಿ ಭಾಗಿಯಾಗಿ ಕಾಲೇಜು ಶಿಕ್ಷಣಕ್ಕೆ ವಿದಾಯ |
| ೧೯೨೩ | : | 'ವಸಂತ' ಪತ್ರಿಕೆ ಪ್ರಾರಂಭ |
| ೧೯೨೮-೩೦ | : | ಮೂಕ ಚಲನಚಿತ್ರಗಳ ನಿರ್ಮಾಣ |
| ೧೯೩೪ | : | 'ಬಾಲವನ' ಶಾಲೆಯ ಸ್ಥಾಪನೆ |
| ೧೯೩೬ | : | ಲೀಲಾ ಅವರೊಡನೆ ಅಂತರ್ಜಾತೀಯ ವಿವಾಹ |
| ೧೯೫೧ | : | 'ವಿಚಾರವಾಣಿ' ಪತ್ರಿಕೆ ಪ್ರಾರಂಭ |
| ೧೯೫೨ | : | ಕಿಸಾನ್ ಮಜ್ದೂರ್ ಪಕ್ಷದ ವತಿಯಿಂದ ಅಸೆಂಬ್ಲಿ ಚುನಾವಣೆಗೆ ನಿಂತದ್ದು ಸೋಲು |
| ೧೯೫೬ | : | ಯಕ್ಷಗಾನ ಬಯಲಾಟದ ಪ್ರಕಟನೆ, ಇದಕ್ಕೆ ಸ್ಟಾಕ್‌ಹೋಮ್‌ನ ಇಂಟರ್‌ನ್ಯಾಶನಲ್ ಆರ್ಕೈವ್ಸ್ ಬಹುಮಾನ! ಸಾಹಿತ್ಯ ಅಕಾಡೆಮಿಯಿಂದ ಬಹುಮಾನ |
| ೧೯೬೦ | : | ಬ್ರಹ್ಮಾವರದಲ್ಲಿ 'ಯಕ್ಷಗಾನ' ಶಾಲೆಯ ಸ್ಥಾಪನೆ ಮುಂದೆ ಉಡುಪಿಗೆ ಇದರ ವರ್ಗಾವಣೆ |
| ೧೯೬೫ | : | ಯಕ್ಷಗಾನ ಖ್ಯಾತಿ ತಂಡವಾದ 'ಯಕ್ಷರಂಗ'ದ ಉದಯ 'ಕುಡಿಯರ ಕೂಸು' ಆಧಾರಿತ 'ಮಲೆಯ ಮಕ್ಕಳು' ಚಿತ್ರದ ನಿರ್ಮಾಣ |
| ೧೯೮೯ | : | ಉತ್ತರ ಕನ್ನಡ ಜಿಲ್ಲೆಯಿಂದ ಸಂಸತ್ ಸದಸ್ಯತ್ವಕ್ಕೆ ಸ್ಪರ್ಧೆ, ಸೋಲು |
| ೧೯೯೭ | : | ಡಿಸೆಂಬರ್ ೯ ನಿಧನ. |

## ೨: ಗೌರವ ಪ್ರಶಸ್ತಿಗಳು

೧. ದೇವರಾಜ ಬಹದ್ದೂರ್ ಬಹುಮಾನ (ಭಾರತೀಯ ಚಿತ್ರಕಲೆ) – ೧೯೨೯

೨. ದೇವರಾಜ ಬಹದ್ದೂರ್ ಬಹುಮಾನ (ಮರಳಿ ಮಣ್ಣಿಗೆ ಕಾದಂಬರಿ) – ೧೯೪೩

೩. ಕನ್ನಡ ಸಾಹಿತ್ಯ ರಾಜ್ಯ ಮಟ್ಟದ ಸಮ್ಮೇಳದ ಅಧ್ಯಕ್ಷತೆ – ೧೯೫೪

೪. ಲಾ ಆರ್ಕೈವ್ಸ್ ಲಾ ಇಂಟರ್‌ನ್ಯಾಶನಲ್ ಸ್ಟಾಕ್‌ಹೋಮ್ ಕಂಚಿನ ಪದಕ – ೧೯೫೮

೫. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ಯಕ್ಷಗಾನ ಬಯಲಾಟ) – ೧೯೫೯

೬. ಗೌರವ ಡಿ. ಲಿಟ್ (ಕರ್ನಾಟಕ ವಿಶ್ವವಿದ್ಯಾಲಯ) – ೧೯೬೨

೭. ಗೌರವ ಡಿ. ಲಿಟ್ (ಮೈಸೂರು ವಿಶ್ವವಿದ್ಯಾಲಯ) – ೧೯೬೩

೮. ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ – ೧೯೬೬

೯. ಭಾರತ ಸರಕಾರದ ಪದ್ಮಭೂಷಣ ಪ್ರಶಸ್ತಿ – ೧೯೬೮

(ತುರ್ತು ಪರಿಸ್ಥಿತಿ ಹೇರಿಕೆಯನ್ನು ಪ್ರತಿಭಟಿಸಿ ೧೯೭೫ರಲ್ಲಿ ಈ ಪ್ರಶಸ್ತಿ ಮರಳಿಸಿದರು)

೧೦. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಗೌರವ ಫೆಲೋಶಿಪ್ – ೧೯೭೩

೧೧. ಚೋಮನ ದುಡಿ ಚಲನಚಿತ್ರಕ್ಕೆ ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಕಥಾ ಪ್ರಶಸ್ತಿ, ಅತ್ಯುತ್ತಮ ಚಿತ್ರ ಸಂಭಾಷಣೆ ಪ್ರಶಸ್ತಿ – ೧೯೭೫

೧೨. ಗೌರವ ಡಿ. ಲಿಟ್ (ಮೀರತ್ ವಿಶ್ವವಿದ್ಯಾಲಯ) – ೧೯೭೬

೧೩. ಜ್ಞಾನಪೀಠ ಪ್ರಶಸ್ತಿ (ಮೂಕಜ್ಜಿಯ ಕನಸುಗಳು) – ೧೯೭೮

೧೪. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ (೧೯೭೮ರ ಅತ್ಯುತ್ತಮ ಕೃತಿ ಕಲಾ ಪ್ರಪಂಚ) – ೧೯೭೯

೧೫. ಜಾಪಾನೀಸ್ ಡ್ಯಾನ್ಸ್ ಕ್ರಿಟಿಕ್ಸ್ ಸೊಸೈಟಿ ಅವಾರ್ಡ್ – ೧೯೮೧

(ಕಾರಂತ ನಿರ್ದೇಶಿತ ಯಕ್ಷಗಾನ ಪ್ರದರ್ಶನಗಳಿಗೆ) – ೧೯೮೨

೧೬. ಗೌರವ ಡಿ. ಲಿಟ್ (ಮಂಗಳೂರು ವಿಶ್ವವಿದ್ಯಾಲಯ) – ೧೯೮೩

೧೭. ಗೌರವ ಡಿ. ಲಿಟ್ (ಜಬ್ಬಲ್‌ಪುರ ವಿಶ್ವವಿದ್ಯಾಲಯ) – ೧೯೮೩

೧೮. ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ (ಭಾರತೀಯ ಶಿಲ್ಪಕಲೆ) – ೧೯೮೪

೧೯. ಕೇಂದ್ರ ಸಾಹಿತ್ಯ ಅಕಾಡೆಮಿ ಗೌರವ ಫೆಲೋಶಿಪ್ – ೧೯೮೫

೨೦. ಗೌರವ ಡಿ. ಲಿಟ್ (ವರ್ಲ್ಡ್ ಅಕಾಡೆಮಿ ಆಫ್ ಆರ್ಟ್ ಆಂಡ್ ಕಲ್ಚರ್) – ೧೯೮೬

೨೧. ದಿ. ಏಸಿಯಾಟಿಕ್ ಸೊಸೈಟಿ ಆಫ್ ಬಾಂಬೆ ಕ್ಯಾಂಪ್‌ಬೆಲ್ ಮೆಮೋರಿಯಲ್ ಚಿನ್ನದ ಪದಕ – ೧೯೮೯

೨೨. ದಾದಾಭಾಯಿ ನವರೋಜಿ ಮೆಮೋರಿಯಲ್ ಪ್ರೈಜ್ – ೧೯೯೦

೨೩. ತುಲಸೀ ಸಂಮಾನ್ (ಯಕ್ಷರಂಗ) ಜಾನಪದ ಕಲೆಯ ಪುನರುತ್ಥಾನ
ಕಾರ್ಯಕ್ಕಾಗಿ ದೊರೆತ ಮಧ್ಯಪ್ರದೇಶ ಸರಕಾರದ ಪುರಸ್ಕಾರ – ೧೯೯೦

೨೪. ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಮತ್ತು ಮಾನವ ಕಲ್ಯಾಣ ಇಲಾಖೆಯ
ಫೆಲೋಶಿಪ್ (ಯಕ್ಷಗಾನ ಕಲೆಯ ಕುರಿತು ನಡೆಯಿಸುತ್ತಿದ್ದ
ರಂಗ ಚಟುವಟಿಕೆಗಳ ಬಗ್ಗೆ – ೧೯೯೨

೨೫. ಪಂಪ ಪ್ರಶಸ್ತಿ (ಮೈಮನಗಳ ಸುಳಿಯಲ್ಲಿ–ಕಾದಂಬರಿಗೆ) – ೧೯೯೨

೨೬. ಇಂದಿರಾ ಗಾಂಧಿ ಪರ್ಯಾವರಣ ಪುರಸ್ಕಾರ – ೧೯೮೯

೨೭. ಜಸ್ಟಿಸ್ ಕೆ.ಎಸ್. ಹೆಗ್ಡೆ ಪ್ರತಿಷ್ಠಾನ ಪ್ರಶಸ್ತಿ – ೧೯೯೩

೨೮. ಇಂದಿರಾ ಗಾಂಧಿ ಪರ್ಯಾವರಣ ಪುರಸ್ಕಾರ
(ಕಾರಂತರಿಗೆ ದೊರೆತ ಗೌರವ) – ೧೯೯೨

೨೯. ಸರ್. ಎಂ. ವಿಶ್ವೇಶ್ವರಯ್ಯ ಮೆಮೋರಿಯಲ್ ಅವಾರ್ಡ್ – ೧೯೯೫

೩೦. ಲಯನ್ಸ್ ಅಂತರಾಷ್ಟ್ರೀಯ ಗೌರವ ಸದಸ್ಯತ್ವ – ೧೯೯೬

೩೧. ಭಾರತೀಯ ವಿದ್ಯಾಭವನದ ಗೌರವ ಸದಸ್ಯತ್ವ – ೧೯೯೬

೩೨. 'ದೇಶಿಕೋತ್ತಮ' ಗೌರವ ಡಾಕ್ಟರೇಟ್
(ವಿಶ್ವಭಾರತಿ ವಿಶ್ವವಿದ್ಯಾಲಯ, ಶಾಂತಿನಿಕೇತನ) – ೧೯೯೭

೩೩. 'ನಾಡೋಜ' ಗೌರವ ಡಾಕ್ಟರೇಟ್ (ಕನ್ನಡ ವಿಶ್ವವಿದ್ಯಾಲಯ, ಹಂಪಿ) – ೧೯೯೭

## ೩: ಕೃತಿ ಸೂಚಿ

*ಕವನ ಸಂಕಲನಗಳು:*

೧. ರಾಷ್ಟ್ರ ಗೀತ ಸುಧಾರಕ
೨. ಸೀಳ್ಗವನಗಳು

*ಕಾದಂಬರಿಗಳು:*

೧. ವಿಚಿತ್ರ ಕೂಟ
೨. ಭೂತ
೩. ನಿರ್ಭಾಗ್ಯ ಜನ್ಮ
೪. ದೇವದೂತರು
೫. ಕನ್ಯಾ ಬಲಿ
೬. ಚೋಮನ ದುಡಿ
೭. ಸರಸಮ್ಮನ ಸಮಾಧಿ
೮. ಮರಳಿ ಮಣ್ಣಿಗೆ
೯. ಬೆಟ್ಟದ ಜೀವ
೧೦. ಹೆತ್ತಳಾ ತಾಯಿ
೧೧. ಮುಗಿದ ಯುದ್ಧ
೧೨. ಔದಾರ್ಯದ ಉರುಳಲ್ಲಿ
೧೩. ಮೊಗ ಪಡೆದ ಮನ
೧೪. ಸನ್ಯಾಸಿಯ ಬದುಕು
೧೫. ಕರುಳಿನ ಕರೆ
೧೬. ಕುಡಿಯರ ಕೂಸು
೧೭. ಚಿಗುರಿದ ಕನಸು
೧೮. ಜಾರುವ ದಾರಿಯಲ್ಲಿ
೧೯. ಭತ್ತದ ತೊರೆ
೨೦. ಗೊಂಡಾರಣ್ಯ
೨೧. ಒಡಹುಟ್ಟಿದವರು
೨೨. ಸಮೀಕ್ಷೆ
೨೩. ನಂಬಿದವರ ನಾಕ ನರಕ

೨೪. ಜಗದೋದ್ಧಾರ......ನಾ

೨೫. ಶನೀಶ್ವರನ ನೆರಳಲ್ಲಿ

೨೬. ಅಳಿದ ಮೇಲೆ

೨೭. ಆಳ, ನಿರಾಳ

೨೮ ಇದ್ದರೂ ಚಿಂತೆ

೨೯. ಸ್ವಪ್ನದ ಹೊಳೆ

೩೦. ಒಂಟಿ ದನಿ

೩೧. ಇನ್ನೊಂದೇ ದಾರಿ

೩೨. ಮೂಕಜ್ಜಿಯ ಕನಸುಗಳು

೩೩. ಮೈಮನಗಳ ಸುಳಿಯಲ್ಲಿ

೩೪. ಉಕ್ಕಿದ ನೊರೆ

೩೫. ಕೇವಲ ಮನುಷ್ಯರು

೩೬. ಧರ್ಮರಾಯನ ಸಂಸಾರ

೩೭. ಮೂಜನ್ಮ

೩೮ ಇಳೆಯೆಂಬ

೩೯. ಕನ್ನಡಿಯಲ್ಲಿ ಕಂಡಾತ

೪೦. ದೇ ಊರು, ಅದೇ ಮರ

೪೧. ಗೆದ್ದ ದೊಡ್ಡಸ್ತಿಗೆ

೪೨. ನಾವು ಕಟ್ಟಿದ ಸ್ವರ್ಗ

೪೩. ಕಣ್ಣಿದ್ದರೂ ಕಾಣರು

೪೪. ನಷ್ಟ ದಿಗ್ಗಜಗಳು

೪೫. ಅಂಟದ ಅಪರಂಜಿ

## *ನಾಟಕ ಗ್ರಂಥಗಳು:*

೧. ವಿಜಯದಶಮಿ

೨. ಡುಮಿಂಗೊ

೩. ಕರ್ಣಾರ್ಜುನ

೪. ಬೆವರಿಗೆ ಜಯವಾಗಲಿ

೫. ಸಾವಿರ ಮಿಲಿಯ

೬. ಗರ್ಭಗುಡಿ

೭. ಹಣೆಬರಹ

೮. ಕಟ್ಟೆ ಪುರಾಣ

೯. ಏಕಾಂತ ನಾಟಕಗಳು

೧೦. ನಾರದ ಗರ್ಭಭಂಗ

೧೧. ಬೌದ್ಧ ಯಾತ್ರಾ

೧೨. ಮುಕ್ತ ದ್ವಾರ

೧೩. ಹಿರಿಯಕ್ಕನ ಚಾಳಿ

೧೪. ದೃಷ್ಟಿ ಸಂಗಮ

೧೫. ಗೊಂಬೆಯ ಮನೆ

೧೬. ದೆವ್ವನ ಜಾಲ

೧೭. ವಿನಾಶದ ಒಸಗೆ

೧೮. ಅವಳಿ ನಾಟಕಗಳು

೧೯. ಪ್ರಾಚೀನ ಭಾರತದ ಕಥೆಗಳು

೨೦. ಭಾರತದ ಐತಿಹಾಸಿಕ ಕಥೆಗಳು

೨೧. ಭೀಮ ಭಕ್ತಿ ಪರೀಕ್ಷೆ

೨೨. ಬೇಡರ ಹುಡುಗ ಮತ್ತುಗಿಳಿ

೨೩. ಮನೆಯ ಭೂತ ಮತ್ತು ಇತರ ಕಥೆಗಳು

೨೩. ಮತ್ತಷ್ಟು ಪುರಾಣದ ದಂತ ಕಥೆಗಳು

೨೩. ಮತ್ತಷ್ಟು ಹೇಳಲು ತಕ್ಕ ಕಥೆಗಳು

೨೩. ಮುಂದುವರಿದ ಹೇಳಲು ತಕ್ಕ ಕಥೆಗಳು

೨೩. ಹಿಮಾಲಯದ ಕಥೆಗಳು

೨೩. ಗೇಣುಗುಡ್ಡದ ಕಳ್ಳ ಮತ್ತು ಇತರ ಕಥೆಗಳು

೨೩. ಚಿಣ್ಣರ ಲೋಕದಲ್ಲಿ ಭಾಗ ೧

೨೩. ಚಿಣ್ಣರ ಲೋಕದಲ್ಲಿ ಭಾಗ ೨

## ವಿಚಾರ ಸಾಹಿತ್ಯ

**ಅ) ತಾತ್ವಿಕ**

೧. ಬಾಳ್ವೆಯೇ ಬೆಳಕು ಅಥವಾ ಜೀವನ ಧರ್ಮ

೨. ವಿಚಾರಶೀಲತೆ

**ಆ) ವೈಚಾರಿಕತೆ**

೧. ಪ್ರಜಾಪ್ರಭುತ್ವವನ್ನು ಕುರಿತು

೨. ವಿಚಾರ ಸಾಹಿತ್ಯ ನಿರ್ಮಾಣ

೩. ಮನೋದೇಹಿಯಾದ ಮಾನವ

೪. ಸ್ವಾರ್ಥಿ ಮಾನವ

೫. ಕರ್ನಾಟಕ – ಇಂದು ಮತ್ತು ನಾಳೆ

೬. ಪರಿಸರ – ಮೂರು ಉಪನ್ಯಾಸಗಳು

೭. ಪತ್ರ ವ್ಯವಹಾರ ಮತ್ತು ನಾನು

## ವಯಸ್ಕರ ಶಿಕ್ಷಣ

೧. ಅಳಿಲ ಭಕ್ತಿ, ಮಳಲ ಸೇವೆ

೨. ಜೋಗಿ ಕಂಡ ಊರು

೩. ದೇವ ಒಲಿದ ಊರು

೪. ಹುಟ್ಟು ಸಾವು, ಒಟ್ಟು ಒಟ್ಟು

೫. ಬೇರೆಯವರೂ ಸರಿ ಇರಬಹುದು

೬. ಕರ್ನಾಟಕದ ಜಾನಪದ ಕಲೆಗಳು

೭. ದಕ್ಷಿಣ ಹಿಂದೂಸ್ಥಾನದ ನದಿಗಳು

೮. ಕೋಳಿ ಸಾಕಣೆ

## ವಿಜ್ಞಾನ

**ಅದ್ಭುತ ಜಗತ್ತು:**

೧. ವಿಚಿತ್ರ ಖಗೋಲ

೨. ನಮ್ಮ ಭೂಕಂಡಗಳು

೩. ಹಿರಿಯ ಕಿರಿಯ ಹಕ್ಕಿಗಳು

೪. ವಿಜ್ಞಾನ ಮತ್ತು ಅಂದಶ್ರದ್ಧೆ

೫. ಉಷ್ಣವಲಯದ ಆಗ್ನೇಸ್ಯ

೬. ಪ್ರಾಣಿ ಪ್ರಪಂಚದ ವಿಸ್ಮಯಗಳು

೭. ಮಂಗನ ಕಾಯಿಲೆ

೮. ವಿಶಾಲ ಸಾಗರಗಳು

**ಕಲಾ ಪ್ರಬಂಧಗಳು:**

೧. ಭಾರತೀಯ ಚಿತ್ರಕಲೆ

೨. ಕಲೆಯ ದರ್ಶನ

೩. ಯಕ್ಷಗಾನ ಬಯಲಾಟ

೪. ಜಾನಪದ ಗೀತೆಗಳು

೫. ಚಾಲುಕ್ಯ ವಾಸ್ತು ಮತ್ತು ಶಿಲ್ಪ

೬. ಕರ್ನಾಟಕದಲ್ಲಿ ಚಿತ್ರಕಲೆ

೭. ಚಿತ್ರ ಶಿಲ್ಪ, ವಾಸ್ತುಕಲೆಗಳು

೮. ಭಾರತೀಯ ಶಿಲ್ಪ

೯. ಯಕ್ಷಗಾನ

೧೦. ಸೌಂದರ್ಯ ಪ್ರಜ್ಞೆಯನ್ನು ಬೆಳೆಯಿಸಲು

೧೧. ಭಾರತೀಯ ಚಿತ್ರಕಲೆ

**ಪ್ರವಾಸ ಕಥನ:**

೧. ಅಬೂವಿನಿಂದ ಬರಾಮಕ್ಕೆ

೨. ಅಪೂರ್ವ ಪಶ್ಚಿಮ

೩. ಪಾತಾಳಕ್ಕೆ ಪಯಣ

೪. ಪೂರ್ವದಿಂದ ಅತ್ಯಪೂರ್ವಕ್ಕೆ

೫. ಅರಸಿಕರಲ್ಲ

೬. ಯಕ್ಷರಂಗಕ್ಕಾಗಿ ಪ್ರವಾಸಿ

**ಜೀವನ ಚರಿತ್ರೆ ಮತ್ತು ಆತ್ಮ ಕಥನಗಳು:**

೧. ಹುಚ್ಚು ಮನಸ್ಸಿನ ಹತ್ತು ಮುಖಗಳು (೧೯೪೮)

೨. ಕಲಾವಿದ ಕೃಷ್ಣ ಹೆಬ್ಬಾರರು

೩. ಸ್ಮೃತಿ ಪಟಲದಿಂದ ಭಾಗ ೧

೪. ಸ್ಮೃತಿ ಪಟಲದಿಂದ ಭಾಗ ೨

೫. ಸ್ಮೃತಿ ಪಟಲದಿಂದ ಭಾಗ ೩

೬. ಹುಚ್ಚು ಮನಸ್ಸಿನ ಹತ್ತು ಮುಖಗಳು – ಪರಿಷ್ಕೃತ ಆವೃತ್ತಿ (೧೯೮೪)

೭. ಹುಚ್ಚು ಮನಸ್ಸಿನ ಹತ್ತು ಮುಖಗಳು – ಪರಿಷ್ಕೃತ ಆವೃತ್ತಿ (೧೯೯೧)

೮. ಹುಚ್ಚು ಮನಸ್ಸಿನ ಹತ್ತು ಮುಖಗಳು – ಅಳಿದುಳಿದ ನೆನಪುಗಳೊಂದಿಗೆ (೧೯೯೫)

೯. ಅಳಿದುಳಿದ ನೆನಪುಗಳು

**ಸಹಾಯಕ ಸಾಹಿತ್ಯ ನಿಘಂಟು:**

೧. ಸಿರಿಗನ್ನಡ ಅರ್ಥಕೋಶ

**ವಿಶ್ವಕೋಶಗಳು:**

೧. ಬಾಲ ಪ್ರಪಂಚ ಭಾಗ ೧

೨. ಬಾಲ ಪ್ರಪಂಚ ಭಾಗ ೨

೩. ಬಾಲ ಪ್ರಪಂಚ ಭಾಗ ೩

೪. ವಿಜ್ಞಾನ ಪ್ರಪಂಚ ಭಾಗ ೧

೫. ವಿಜ್ಞಾನ ಪ್ರಪಂಚ ಭಾಗ ೨

೬. ವಿಜ್ಞಾನ ಪ್ರಪಂಚ ಭಾಗ ೩

೭. ವಿಜ್ಞಾನ ಪ್ರಪಂಚ ಭಾಗ ೪

೮. ಕಲಾ ಪ್ರಪಂಚ

೯. ಪ್ರಾಣಿ ಪ್ರಪಂಚ

**ಬಿಡಿ ಬರಹಗಳಲ್ಲಿ (ಸಂಪುಟಗಳಲ್ಲಿ)**

೧. ವ್ಯಕ್ತಿ ಚಿತ್ರಗಳೂ, ವಿಮರ್ಶೆಗಳೂ

೨. ಭಾಷೆ, ಶಿಕ್ಷಣ, ಸಂಸ್ಕೃತಿ, ಸಂಶೋಧನೆ

೩. ಕಲಾ ಜಗತ್ತು

೪. ಅನುಭವಗಳು ಮತ್ತು ಸಾಹಿತ್ಯ ಚಿಂತನ

೫. ವೈಚಾರಿಕ ಬಿಡಿ ಬರಹಗಳು

೬. ಐತಿಹಾಸಿಕ, ರಾಜಕೀಯ ಮತ್ತು ಆರ್ಥಿಕ ವಿಚಾರಗಳು

೭. ನಾಡು, ನಿಸರ್ಗ, ಪರಿಸರ

೮. ಸೃಜನಶೀಲ ಬಿಡಿ ಬರಹಗಳು

**ಸಂಪಾದಿತ ಕೃತಿಗಳು**

**ಸಾಹಿತ್ಯಿಕ:**

೧. ಪಂಜೆಯವರ ನೆನಪಿಗಾಗಿ

೨. ಕೌಶಿಕ ರಾಮಾಯಣ

೩. ಐರೋಡಿ ಶಿವರಾಮಯ್ಯ – ಬದುಕು ಮತ್ತು ಬರಹ

**ಸಾಹಿತ್ಯೇತರ:**

೧. ವಸಂತ – ಕನ್ನಡ ಪತ್ರಿಕೆ

೨. ವಿಚಾರವಾಣಿ – ಕನ್ನಡ ಪತ್ರಿಕೆ

## ಅನುವಾದಗಳು

**ಸಾಹಿತ್ಯಿಕ:**

೧. ಯಾರು ಲಕ್ಷಿಸುವರು

೨. ಶ್ರೀರಾಮಕೃಷ್ಣರ ಜೀವನ ಚರಿತ್ರೆ

೩. ಪಂಚ ಋತು

**ಸಾಹಿತ್ಯೇತರ:**

೧. ಭಾರತ ವರ್ಷದಲ್ಲಿ ಬ್ರಿಟೀಷರು

೨. ನಮ್ಮ ಸುತ್ತಮುತ್ತಲಿನ ಕಡಲು

೩. ಪರಮಾಣು – ಇಂದು, ನಾಳೆ

೪. ಕೀಟನಾಶಕಗಳ ಪಿಡುಗುಗಳು

೫. ಜನತೆಯೂ, ಅರಣ್ಯಗಳೂ

೬. ಬೆಳೆಯುತ್ತಿರುವ ಜನಸಂಖ್ಯೆ

೭. ಭಾರತದ ಪರಿಸರದ ಪರಿಸ್ಥಿತಿ – ೧೯೮೨ – ಪ್ರಜೆಯ ದೃಷ್ಟಿಯಲ್ಲಿ

೮. ಕೋಟ ಮಹಾ ಜಗತ್ತು

೯. ನಮ್ಮ ಪರಮಾಣು ಚೈತನ್ಯ – ಉತ್ಪಾದನ ಸಾಧನಗಳು

೧೦. ಭಾರತದ ಪರಿಸರ – ದ್ವಿತೀಯ ಸಮೀಕ್ಷೆ

೧೧. ನಮ್ಮೆಲ್ಲರಿಗೂ ಒಂದೇ ಭವಿಷ್ಯ

೧೨. ನಮ್ಮ ಶಿಕ್ಷಣ ಪದ್ಧತಿಯ ಸಮಸ್ಯೆಗಳೂ, ಭವಿಷ್ಯವೂ

೧೩. ಮಾತಿನ ಸೇತುವೆ

೧೪. ಮೋಸೋಮುಗಳು (ಮಾನ್ಸೂನ್ಸ್)

**ಆಂಗ್ಲ ಭಾಷೆಯಲ್ಲಿ:**

೧. Picturesque South Kanara

೨. Folk Art of Karnataka

೩. Karnataka Paintings

೪. Yakshagana

೫. My Concern for Life, Literature and Art

೬. Yakshagana (Mysore University)

**ಈಚಿನ ಪ್ರಕಟಣೆಗಳು;**

೧. ಪತ್ರ ವ್ಯವಹಾರ ಮತ್ತು ನಾನು (ಸಹಾಯ: ಬಿ. ಮಾಲಿನಿ ಮಲ್ಯ)

೨. ಚಿಣ್ಣರ ಲೋಕದಲ್ಲಿ (೨ ಭಾಗಗಳಲ್ಲಿ, ಮಕ್ಕಳೊಂದಿಗೆ ಸಂವಾದ, ಪ್ರಶ್ನೋತ್ತರ)

# ಪರಾಮರ್ಶನ ಗ್ರಂಥಗಳು


1. ಮರಳಿ ಮಣ್ಣಿಗೆ – ಡಾ। ಕೆ. ಶಿವರಾಮ ಕಾರಂತ
2. ಶಿವರಾಮ ಕಾರಂತ ಬದುಕು ಬರಹ – ವಿ.ಎಂ. ಇನಾಂದಾರ್
3. ಶಿವರಾಮ ಕಾರಂತ ಎರಡು ಅಧ್ಯಯನಗಳು – ಟಿ.ಪಿ. ಅಶೋಕ
4. ಶಿವರಾಮ ಕಾರಂತ – ಡಾ। ತಾಳ್ತಜೆ ವಸಂತ ಕುಮಾರ
5. ಶತಮಾನದ ಕೊನೆಯಲ್ಲಿ ಶಿವರಾಮ ಕಾರಂತ – ಸಂಪಾದಕ ಡಾ। ಬಿ. ವಿವೇಕ ರೈ
6. ಕಾದಂಬರಿಕಾರರಾಗಿ ಕಾರಂತ – ಸಂಪಾದಕರು ಡಾ। ಜಿ.ಎಸ್. ಶಿವರುದ್ರಪ್ಪ
7. ಶಿವರಾಮ ಕಾರಂತ – ಮಾಲಿನಿ ಮಲ್ಯ
8. ಕಾರಂತ ಕೆಲವು ಮುಖಗಳು – ಸಂಪಾದಕರು ಜಿ.ಡಸ್. ಭಟ್ಟ
9. ಶಿವರಾಮ ಕಾರಂತರ ಲೇಖನಗಳು, ಸಂಪುಟ ೫ ಸಂಪಾದಕಿ ಬಿ. ಮಾಲಿನಿ ಮಲ್ಯ ಪುತ್ತೂರು
10. ಕಾರಂತರ ಕಾದಂಬರಿಗಳು, ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ, ಕನ್ನಡ ಸಂಘ
11. ಸಮಕಾಲೀನ ಕಥೆ – ಕಾದಂಬರಿ ಹೊಸ ಪ್ರಯೋಗಗಳು – ಡಾ। ಜಿ. ಎಸ್. ಅಮೂರ
12. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧನೀಕರಣದ ಪ್ರಕ್ರಿಯೆ – ಟಿ.ಪಿ. ಅಶೋಕ
13. ಶಿವರಾಮ ಕಾರಂತ ಹತ್ತು ಅಧ್ಯಯನಗಳು – ಸಂಪಾದಕ ಶಿವರಾಮು ಕಾಡನಕುಪ್ಪೆ
14. ಕಾರಂತ ಸ್ಮರಣೆ – ಸಂಪಾದಕ ಶ್ರೀಧರ್ ಎಚ್.ಜಿ.
15. ಕಾದಂಬರಿ ದರ್ಶನ – ಸಂಪಾದಕ ಶಂಕರ ಪಾಟೀಲ
16. ಕಾರಂತರ ಕಾದಂಬರಿಗಳನ್ನು ಕುರಿತು – ಸಮಪಾದಕ ರಾಮಚಂದ್ರ ದೇವ
17. ಕಾರಂತ ಕೃತಿ ಕರಂಡ – ಸಂಗ್ರಾಹಕರು ಸೇಖರ್ ಇಡ್ಯ, ಮಾಲಿನಿ ಮಲ್ಯ
18. ಕಾರಂತರ ಕಾದಂಬರಿಗಳಲ್ಲಿ ಗಂಡು ಹೆಣ್ಣು –ಟಿ.ಪಿ. ಅಶೋಕ